ಭಾನುವಾರ, ನವೆಂಬರ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 302 | ಪುಟ 18
• www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಧಾನಿ ಭೇಟಿ
ಛತ್ತೀಸಗಢ ರಾಜ್ಯ ರಚನೆಯ '25ನೇ ಸಂಸ್ಥಾಪನಾ ದಿನ'ದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾದ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಯೋಜನೆ, ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು





ಅಧಿಕಾರ ಸ್ವೀಕಾರ
ಭಾರತೀಯ ನೌಕಾಪಡೆಯ ಚೀಫ್ ಅಡ್ಮಿರಲ್ ಬಿ.ಶಿವಕುಮಾರ್ ಅವರು 40ನೇ 'ಚೀಫ್ ಆಫ್ ಮೆಟೀರಿಯಲ್' ಆಗಿ ಅಧಿಕಾರ ವಹಿಸಿಕೊಂಡರು

'ಆರ್‌ಎಸ್‌ಎಸ್ ನಿಷೇಧ ಅಸಾಧ್ಯ' 7
ಮತದಾರರ ಪಟ್ಟಿಗೆ ಬೆಂಕಿ: ದೃಶ್ಯ ಸೆರೆ 5

ಶ್ರೀಕಾಕುಳಂ ಕಾಲ್ತುಳಿತ: 10 ಸಾವು

ಭಾರಿ ಸಂಖ್ಯೆಯಲ್ಲಿ ಭಕ್ತರ ಜಮಾವಣೆಯಿಂದ ನೂಕುನುಗ್ಗಲು

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಆಂಧ್ರ ಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಕಾಸಿಬುಗ್ಗಾದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಉಂಟಾದ ಕಾಲ್ತುಳಿತದಲ್ಲಿ 9 ಮಹಿಳೆಯರು ಹಾಗೂ 13 ವರ್ಷದ ಬಾಲಕ ಸೇರಿ ಒಟ್ಟು 10 ಜನರು ಮೃತಪಟ್ಟಿದ್ದಾರೆ.

ಈ ಅವಘಡದಲ್ಲಿ ಏಳು ಮಂದಿ ಸ್ಥಳದಲ್ಲಿಯೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಮೂವರು ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದಿದ್ದಾರೆ.

ಗಾಯಗೊಂಡಿರುವ 15 ಜನರನ್ನು ಪಲಾಸ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಿಸಲಾಗಿದೆ. ಈ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಾಸಿಬುಗ್ಗಾದಲ್ಲಿ ನಿರ್ಮಿಸಲಾಗಿರುವ ಈ ದೇವಸ್ಥಾನವನ್ನು ನಾಲ್ಕು ತಿಂಗಳ ಹಿಂದೆಯಷ್ಟೇ ಉದ್ಘಾಟಿಸಲಾಗಿದೆ. ಖಾಸಗಿ ಟ್ರಸ್ಟ್ ಈ ದೇವಸ್ಥಾನದ ನಿರ್ವಹಣೆ ಮಾಡುತ್ತಿದೆ.

ಈ ಭಾಗದಲ್ಲಿ ಈ ದೇಗುಲವನ್ನು 'ಚಿನ್ನ ತಿರುಪತಿ' (ಚಿಕ್ಕ ತಿರುಪತಿ) ಎಂದೇ ಕರೆಯುತ್ತಾರೆ. ಕಾರ್ತಿಕ ಮಾಸದ ಮೊದಲ ಏಕಾದಶಿ ಅಂಗವಾಗಿ ಶನಿವಾರ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆಯಲು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಈ ವೇಳೆ ಉಂಟಾದ ನೂಕುನುಗ್ಗಲು ಕಾಲ್ತುಳಿತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

ಸಚಿವ ಕೆ.ಅಚ್ಚನ್ನಾಯುಡು, ಸ್ಥಳೀಯ ಶಾಸಕ ಗೌತು ಶಿರೀಷ ಅವರು ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯದ ಮೇಲ್ವಿಚಾರಣೆ ನಡೆಸಿದರು. ದೆಹಲಿಯಿಂದ ಭೋಪಾಲ್‌ಗೆ ಹೊರಟಿದ್ದ ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ ನಾಯ್ಡು ಕೂಡ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ, ಕಾಸಿಬುಗ್ಗಾಕ್ಕೆ ಬಂದಿಳಿದರು. ರಕ್ಷಣೆ ಮತ್ತು ವೈದ್ಯಕೀಯ ತಂಡಗಳು ಕೂಡ ಸ್ಥಳಕ್ಕೆ ಧಾವಿಸಿವೆ.

ಪರಿಹಾರ ಘೋಷಣೆ: 'ಶ್ರೀಕಾಕುಳಂ ಜಿಲ್ಲೆಯ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಾಲ್ತುಳಿತ ಸಂಭವಿಸಿರುವುದು ತಿಳಿದು ಅತೀವ ದುಃಖವಾಗಿದೆ. ತಮ್ಮವರನ್ನು ಕಳೆದುಕೊಂಡವರ ದುಃಖದಲ್ಲಿ ನಾನೂ ಭಾಗಿಯಾಗಿದ್ದು, ಗಾಯಾಳುಗಳು ಶೀಘ್ರ ಗುಣಮುಖರಾಗಲಿ' ಎಂದು ಪ್ರಾರ್ಥಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

7

ಮುಖ್ಯಾಂಶಗಳು
- 'ಲೋಹದ ರೇಲಿಂಗ್ ಕುಸಿದ ಪರಿಣಾಮ ಕಾಲ್ತುಳಿತ'
- 6 ಅಡಿಗಳಷ್ಟು ಎತ್ತರದಿಂದ ಬಿದ್ದ ಜನರು
- ಮೃತರಲ್ಲಿ ಏಳು ಜನರು 35–40 ವರ್ಷ ವಯೋಮಾನದವರು



ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಕಾಸಿಬುಗ್ಗಾದಲ್ಲಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಶನಿವಾರ ಸಂಭವಿಸಿದ ಕಾಲ್ತುಳಿತದ ದೃಶ್ಯ ಪಿಟಿಐ ಚಿತ್ರ

ಘಟನೆಗೆ ಕಾರಣ ಏನು?

ಕಾರ್ತಿಕ ಮಾಸದ ಮೊದಲ ಏಕಾದಶಿ ಪ್ರಯುಕ್ತ ಶನಿವಾರ ನಸುಕಿನಿಂದಲೇ ಭಾರಿ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಬಂದಿದ್ದಾರೆ. 2 ಸಾವಿರದಿಂದ 3 ಸಾವಿರದಷ್ಟು ಭಕ್ತರಿಗೆ ಅವಕಾಶವಿರುವಂತೆ ನಿರ್ಮಿಸಿರುವ ದೇವಸ್ಥಾನದಲ್ಲಿ 25 ಸಾವಿರದಷ್ಟು ಜನರು ಸೇರಿದ್ದು ಅವಘಡಕ್ಕೆ ಕಾರಣ ಎಂದು ಹೇಳಲಾಗುತ್ತದೆ.

'ದೇವಸ್ಥಾನವು ಮೊದಲ ಮಹಡಿಯಲ್ಲಿದೆ. ದೇವಸ್ಥಾನದ ದ್ವಾರ ತೆರೆದಾಗ ಏಕಾಏಕಿ ಭಾರಿ ಸಂಖ್ಯೆಯಲ್ಲಿ ಜನರು ಒಳಗೆ ನುಗ್ಗಲು ಪ್ರಯತ್ನಿಸಿದರು. ಈ ವೇಳೆ, ಸರದಿಯಲ್ಲಿ ನಿಲ್ಲುವುದಕ್ಕೆ ಅನುಕೂಲ ಕಲ್ಪಿಸಲು ಅಳವಡಿಸಿದ್ದ ಲೋಹದ ರೇಲಿಂಗ್ ಕುಸಿದು ಬಿದ್ದಿದೆ. ಆಗ, ಮೂಲೆಯೊಂದರಲ್ಲಿ ನಿಂತಿದ್ದ ಜನರು ಒಬ್ಬರ ಮೇಲೆ ಒಬ್ಬರು ಬಿದ್ದಿದ್ದಾರೆ' ಎಂದು ಗೃಹ ಸಚಿವ ವಂಗಲಪುಡಿ ಅನಿತಾ ಹೇಳಿದ್ದಾರೆ. 'ಈ ಮಧ್ಯೆ, ಜನರ ಒಂದು ಗುಂಪು ನಿರ್ಗಮನ ಮಾರ್ಗದ ಮೂಲಕ ಗರ್ಭಗುಡಿಯತ್ತ ಹೋಗಲು ಯತ್ನಿಸಿದೆ. ಮತ್ತೊಂದು ಗುಂಪು ದರ್ಶನ ಪಡೆದು ಹೊರಗೆ ಹೋಗಲು ಮುಂದಾಗಿದೆ. ಇದೇ ವೇಳೆ ರೇಲಿಂಗ್ ಕೂಡ ಕುಸಿದು ಬಿದ್ದಿದ್ದರಿಂದ ನೂಕುನುಗ್ಗಲು ಉಂಟಾಗಿ, ಕಾಲ್ತುಳಿತ ಸಂಭವಿಸಿದೆ' ಎಂದು ಪೊಲೀಸರು ಹೇಳಿದ್ದಾರೆ.

'ದೇವರ ದರ್ಶನಕ್ಕೆ ಹೋಗಲು ಹಾಗೂ ನಿರ್ಗಮಿಸಲು ಪ್ರತ್ಯೇಕ ಗೇಟುಗಳಿವೆ. ಶೀಘ್ರವೇ ದರ್ಶನ ಪಡೆಯುವ ಉದ್ದೇಶ ಹೊಂದಿದ್ದ ಕೆಲವರು ನಿರ್ಗಮನ ಗೇಟ್ ಮೂಲಕ ಪ್ರವೇಶಿಸಿದ್ದಾರೆ. ಅದೇ ಗೇಟ್ ಮೂಲಕ ಹೊರಗೆ ಬರಲು ಕೆಲವರು ಮುಂದಾಗಿದ್ದಾರೆ. ಈ ವೇಳೆ, ಕಾಲ್ತುಳಿತ ಉಂಟಾಯಿತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.



ಕಾಲ್ತುಳಿತದಲ್ಲಿ ಭಕ್ತರ ಸಾವಿನಿಂದ ಆಘಾತಗೊಂಡಿರುವೆ. ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸ್ಥಳೀಯ ಅಧಿಕಾರಿಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ ಸೂಚಿಸಿರುವೆ
ಎನ್.ಚಂದ್ರಬಾಬು ನಾಯ್ಡು, ಮುಖ್ಯಮಂತ್ರಿ

ತನಿಖೆಗೆ ಆದೇಶ

ಅಮರಾವತಿ: ಕಾಸಿಬುಗ್ಗಾದ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಂಭವಿಸಿದ ಕಾಲ್ತುಳಿತ ಕುರಿತು ಸಮಗ್ರ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಶನಿವಾರ ಘೋಷಿಸಿದ್ದಾರೆ.

ಶ್ರೀ ಸತ್ಯಸಾಯಿ ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾರ್ಯಕ್ರಮ ಆಯೋಜಕರು ಮುಂಚಿತವಾಗಿ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಇದರಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲು ಸಾಧ್ಯವಾಗಿಲ್ಲ' ಎಂದರು.

'ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಇದಕ್ಕೆ ಹೊಣೆಯಾದವರನ್ನು ವಶಕ್ಕೆ ಪಡೆದು, ಸಮಗ್ರ ತನಿಖೆ ನಡೆಸಲಾಗುವುದು' ಎಂದೂ ಹೇಳಿದರು.

ತೋಟಕ್ಕೆ ಕಾಡುಪ್ರಾಣಿಗಳ ದಾಳಿ

ಕೃಷಿಕರಿಗೆ ಕೋತಿ, ನವಿಲು, ಕಾಡು ಹಂದಿಗಳ ಒಳೇಟು

ಒಳನೋಟ

• ಉದಯ ಯು

ಮಂಗಳೂರು: 'ಈ ಒಂದುವರೆ ಎಕರೆ ಜಮೀನನ್ನು ನಂಬಿಕೊಂಡೇ ಐದು ದಶಕಗಳಿಂದ ಜೀವನ ನಡೆಸಿದ್ದೇವೆ. ಇಬ್ಬರು ಮಕ್ಕಳ ಎಂಜಿನಿಯರಿಂಗ್‌ವರೆಗಿನ ಶಿಕ್ಷಣದ ಖರ್ಚು, ಮಕ್ಕಳ ಮದುವೆ– ಮುಂಜಿ, ಮನೆಯ ಖರ್ಚುವೆಚ್ಚ... ನಂಬಿದ ಭೂಮಿ ಜೀವನಕ್ಕೆ ಕೊರತೆ ಆಗದಂತೆ ನೋಡಿಕೊಂಡಿದೆ. ಆದರೆ, ಈಗ ಮನೆಯಲ್ಲಿ ಇಬ್ಬರೇ ಇದ್ದರೂ ಜೀವನ ಕಷ್ಟ ಅನ್ನಿಸುತ್ತದೆ. ಮಕ್ಕಳ ಮುಂದೆ ಕೈ ಒಡ್ಡಬೇಕಾಗಬಹುದೇನೋ ಎಂಬ ಆತಂಕ ಮೂಡುತ್ತಿದೆ' ಎಂದು ಪುತ್ತೂರು ತಾಲ್ಲೂಕಿನ ಅಡಿಕೆ ಬೆಳೆಗಾರ ರಾಮಚಂದ್ರ ಆತಂಕ ಬಿಚ್ಚಿಟ್ಟರು.

'ಕೃಷಿಯಲ್ಲಿ ಕಷ್ಟ ನಷ್ಟಗಳನ್ನು ಅನುಭವಿಸದ ರೈತರು ಇರಲಾರರು. ನಾವೂ ಅನುಭವಿಸಿದ್ದೇವೆ. ಈ ವರ್ಷ ಬೆಳೆ ಚೆನ್ನಾಗಿದ್ದರೆ ಮುಂದಿನ ವರ್ಷ ಶೇ 10ರಿಂದ ಶೇ 20ರಷ್ಟು ಇಳುವರಿ ಕಡಿಮೆ ಇರುತ್ತದೆ, ಇದು ನಮ್ಮ ಅನುಭವ. ಆದರೆ ದಕ್ಷಿಣ ಕನ್ನಡ, ನೆರೆಯ ಕೇರಳದ ಕಾಸರಗೋಡು ಹಾಗೂ ಉಡುಪಿ ಜಿಲ್ಲೆಯ ರೈತರ ಸಂಕಷ್ಟ ಬೇರೆ ರೀತಿಯದ್ದು. ಕಾಡಾನೆ ಹಾವಳಿಯಿಂದಾದ ಬೆಳೆನಷ್ಟಕ್ಕೆ ಸರ್ಕಾರದಿಂದ ಅಲ್ಪಸ್ವಲ್ಪ ಪರಿಹಾರ ಅಥವಾ ಬೆಳೆ ವಿಮೆ ಪಡೆಯಬಹುದು. ಆದರೆ, ನಮ್ಮ ಭಾಗದಲ್ಲಿ ಕಾಡು ಪ್ರಾಣಿಗಳು ಕೊಡುವ ಒಳ ಏಟು ಅತ್ತ ಪರಿಹಾರವೂ ಇಲ್ಲ, ಇತ್ತ ಆದಾಯವೂ ಇಲ್ಲ ಎನ್ನುವಂತೆ ಮಾಡುತ್ತಿದೆ' ಎಂದು ಈ ಭಾಗದ ರೈತರು ಹೇಳುತ್ತಾರೆ.

'ಆನೆ ದೊಡ್ಡ ಪ್ರಾಣಿ, ಆದ್ದರಿಂದ ಆನೆ ದಾಳಿ ಮಾಡಿದರೆ ದೊಡ್ಡದಾಗಿ ಬಿಂಬಿತವಾಗುತ್ತಿದೆ. ಇತರ ಸಣ್ಣ ಕಾಡು ಪ್ರಾಣಿಗಳು ಅಷ್ಟೇ ಪ್ರಮಾಣದಲ್ಲಿ, ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಪ್ರಮಾಣದ ಹಾನಿ ಮಾಡಿದರೂ ಸುದ್ದಿಯಾಗುವುದಿಲ್ಲ' ಎಂಬುದು ಈ ರೈತರ ಬೇಸರ.

'ಹಿರಿಯ ಮಗ ಬೆಂಗಳೂರಿನಲ್ಲಿ ಇದ್ದಾನೆ, ಕಿರಿಯವ ವಿದೇಶದಲ್ಲಿ ಉದ್ಯೋಗ ಮಾಡುತ್ತಿದ್ದಾನೆ. ಮಗಳಿಗೆ ಮದುವೆಯಾಗಿದೆ, ಅವರೂ ಚೆನ್ನಾಗಿದ್ದಾರೆ. ಹಳ್ಳಿಯ ಈ ಮನೆಯಲ್ಲಿ ಇರುವುದು ನಾನು ಮತ್ತು ನನ್ನ ಪತ್ನಿ ಮಾತ್ರ. ಹಿಂದೆ ಇಡೀ ಕುಟುಂಬದ ಖರ್ಚು ವೆಚ್ಚಗಳನ್ನು ನಿಭಾಯಿಸಿದ್ದ ಈ ಜಮೀನಿನಿಂದ, ಈಗ ಬರುವ ಆದಾಯ ನಮ್ಮಿಬ್ಬರ ಖರ್ಚಿಗೂ ಅಲ್ಲಿಂದಲ್ಲಿಗೆ ಆಗುತ್ತಿದೆ. ಅನಿರೀಕ್ಷಿತವಾಗಿ ದೊಡ್ಡ ಖರ್ಚು– ವೆಚ್ಚ ಬಂದರೆ ಮಕ್ಕಳನ್ನು ಅವಲಂಬಿಸಬೇಕಾಗುತ್ತದೆ' ಎಂದು 70 ವರ್ಷ ವಯಸ್ಸು ಮೀರಿದ ರಾಮಚಂದ್ರ ಹೇಳುತ್ತಾರೆ.

'ಕಾಡು ಪ್ರಾಣಿಗಳ ಹಾವಳಿಯಿಂದಾಗಿ ಈ ಭಾಗದಲ್ಲಿ, ವಿಶೇಷವಾಗಿ ಅಡಿಕೆ ಬೆಳೆಯುವ ರೈತರ ಸ್ಥಿತಿ ಗಂಭೀರವಾಗಿದೆ. ಆನೆ ದಾಳಿಯಾದರೆ ಪರಿಹಾರ ಪಡೆಯಬಹುದು, ಕಾಡುಹಂದಿ, ಮುಳ್ಳುಹಂದಿ, ಕೋತಿಗಳು ಮಾಡುವ ಹಾನಿ, ಬೆಳೆ ನಷ್ಟಕ್ಕೆ ಪರಿಹಾರ ನೀಡುವವರು ಯಾರು? ಹೀಗೆ ಪರಿಹಾರ ನೀಡಲು ತೋಟಗಾರಿಕೆ ಇಲಾಖೆಯಲ್ಲಾಗಲಿ, ಅರಣ್ಯ ಇಲಾಖೆಯಲ್ಲಾಗಲಿ ನಿಯಮಗಳೇ ಇಲ್ಲ.

4



ಎಐ ಚಿತ್ರ: ಕಣಕಾಲಮಠ

ವನ್ಯಜೀವಿಗಳ ಹಾವಳಿಯಿಂದ ಬೆಳೆ ನಷ್ಟವಾದರೆ ರೈತರಿಗೆ ಪರಿಹಾರ ವಿತರಿಸಬೇಕು. ಬೇರೆ ವಿಷಯದಲ್ಲಿ ಮಂಗಗಳನ್ನು ವನ್ಯಜೀವಿ ಎಂದು ಪರಿಗಣಿಸುವ ಅರಣ್ಯ ಇಲಾಖೆ ಪರಿಹಾರ ನೀಡಿಕೆ ವಿಷಯದಲ್ಲಿ ಮಾತ್ರ ಮೌನವಾಗಿರುವುದು ಯಾಕೆ?
ಲೋಕೇಶ್ ಎಂ., ನೆರಿಯ, ಬೆಳ್ತಂಗಡಿ ತಾಲ್ಲೂಕು

ಕಾಡುಪ್ರಾಣಿ ಉಪಟಳದಿಂದ ಅಡಿಕೆ ಮತ್ತು ತೆಂಗು ಫಸಲು ಹಾನಿಗೊಳಗಾದರೆ ಪರಿಹಾರ ನೀಡಲು ಅವಕಾಶ ಇಲ್ಲ. ಆನೆ ದಾಳಿಯಿಂದ ಅಡಿಕೆ ಅಥವಾ ತೆಂಗಿನ ಮರ ಧ್ವಂಸವಾದರೆ ಮಾತ್ರ ಪರಿಹಾರ ನೀಡಲು ಅವಕಾಶವಿದೆ
ಆ್ಯಂಟನಿ ಮರಿಯಪ್ಪ, ದ.ಕ.ಜಿಲ್ಲಾ ಉಪ ಅರಣ್ಯಸಂರಕ್ಷಣಾಧಿಕಾರಿ

ಇಸ್ರೊದಿಂದ ಭಾರಿ ಉಪಗ್ರಹ ಉಡ್ಡಯನ ಇಂದು

ಶ್ರೀಹರಿಕೋಟ (ಆಂಧ್ರ ಪ್ರದೇಶ) (ಪಿಟಿಐ): ಭಾರಿ ತೂಕದ ಸಂವಹನ ಉಪಗ್ರಹ 'ಸಿಎಂಎಸ್‌–03' ಅನ್ನು ಭಾನುವಾರ ಉಡ್ಡಯನ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಣಿಯಾಗಿದೆ.

ವಿವರ 6

ಜಿಎಸ್‌ಟಿ: ₹1.96 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಅಕ್ಟೋಬರ್ ತಿಂಗಳಿನಲ್ಲಿ ₹1.96 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ವಿವರ 6

ಟೆನಿಸ್‌ಗೆ ಬೋಪಣ್ಣ ವಿದಾಯ

ನವದೆಹಲಿ: ಭಾರತದ ಹಿರಿಯ ಆಟಗಾರ ರೋಹನ್ ಬೋಪಣ್ಣ ಅವರು ಸುಮಾರು ಎರಡು ದಶಕಗಳ ವೃತ್ತಿಪರ ಟೆನಿಸ್ ಬದುಕಿಗೆ ಶನಿವಾರ ವಿದಾಯ ಹೇಳಿದರು. ಡಬಲ್ಸ್‌ನಲ್ಲಿ ಎರಡು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ 45 ವರ್ಷ ವಯಸ್ಸಿನ ಬೋಪಣ್ಣ ಇನ್‌ಸ್ಟಾಗ್ರಾಮ್‌ನಲ್ಲಿ ನಿವೃತ್ತಿ ನಿರ್ಧಾರ ಪ್ರಕಟಿಸಿದ್ದಾರೆ.

- **2** ಗೆದ್ದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳು
- **43**ನೇ ವರ್ಷ ಡಬಲ್ಸ್‌ನಲ್ಲಿ ಅಗ್ರಸ್ಥಾನಕ್ಕೇರಿದ ವಿಶ್ವದ ಅತಿ ಹಿರಿಯ ಆಟಗಾರ (2024ರಲ್ಲಿ)
- **26** ವೃತ್ತಿಜೀವನದ ಡಬಲ್ಸ್ ಪ್ರಶಸ್ತಿಗಳು
- **2017** ಫ್ರೆಂಚ್ ಓಪನ್ ಮಿಶ್ರ ಡಬಲ್ಸ್ (ಕೆನಡಾದ ಗ್ಯಾಬ್ರಿಯೆಲಾ ದಬ್ರೋವ್‌ಸ್ಕಿ ಜೊತೆ)
- **2024** ಆಸ್ಟ್ರೇಲಿಯನ್ ಓಪನ್ ಪುರುಷರ ಡಬಲ್ಸ್ (ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೊತೆ)
- **2023** ಎಟಿಪಿ ಮಾಸ್ಟರ್ಸ್ (ಇಂಡಿಯನ್ ವೆಲ್ಸ್ ಓಪನ್) ಪ್ರಶಸ್ತಿ ಗೆದ್ದ ಅತಿ ಹಿರಿಯ ಆಟಗಾರ (43ನೇ ವಯಸ್ಸು)



ಮಹಿಳಾ ವಿಶ್ವಕಪ್ ಫೈನಲ್ ಇಂದು

ನವಿ ಮುಂಬೈ: ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿದ ಹುಮ್ಮಸ್ಸಿನಲ್ಲಿರುವ ಹರ್ಮನ್‌ಪ್ರೀತ್ ಕೌರ್ ಸಾರಥ್ಯದ ಭಾರತ ತಂಡ, ಭಾನುವಾರ ಇಲ್ಲಿನ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಎರಡೂ ತಂಡಗಳು ಮೊದಲ ಬಾರಿ ಫೈನಲ್‌ನಲ್ಲಿ ಮುಖಾಮುಖಿ ಆಗುತ್ತಿದ್ದು, ಯಾರೇ ಗೆದ್ದರೂ ಅವರು ಮೊದಲ ಬಾರಿ ಚಾಂಪಿಯನ್ ಆಗಲಿದ್ದಾರೆ. ಭಾರತ ಈ ಹಿಂದೆ ಎರಡು ಬಾರಿ ಫೈನಲ್ ತಲುಪಿದ್ದು ರನ್ನರ್ ಅಪ್ ಆಗಿತ್ತು. ಲಾರಾ ವೊಲ್ವಾರ್ಟ್ ನೇತೃತ್ವದ ದಕ್ಷಿಣ ಆಫ್ರಿಕಾ ತಂಡಕ್ಕೆ ಇದು ಮೊದಲ ಫೈನಲ್.

'ರಾಜ್ಯದ ಅಧಿಕಾರ ಕೇಂದ್ರದಿಂದ ಕಬ್ಜಾ'

ಸಾವಿರಾರು ಕೋಟಿ ರೂಪಾಯಿ ವಂಚಿಸುತ್ತಿರುವ ಕೇಂದ್ರ: ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಲಿಷ್ಠ ಒಕ್ಕೂಟ ವ್ಯವಸ್ಥೆಯ ಕನಸು ನಮ್ಮ ಸಂವಿಧಾನ ಪಿತೃಗಳದ್ದಾಗಿತ್ತು. ಅದನ್ನು ಕಳೆದ ಕೆಲವು ವರ್ಷಗಳಿಂದ ಛಿದ್ರಗೊಳಿಸಿ ರಾಜ್ಯಗಳ ಅಧಿಕಾರವನ್ನು ಕಬ್ಜಾ ಮಾಡುವ ವಸಾಹತುವಾದಿ ಮನೋಭಾವ ಕಾಣುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶನಿವಾರ ಆಯೋಜಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, 'ಕೇಂದ್ರದ ಈ ತಾರತಮ್ಯಗಳ ವಿರುದ್ಧ ಇಡೀ ನಾಡು ಸಂವಿಧಾನಾತ್ಮಕವಾಗಿ ನಿಂತು ಪ್ರತಿಭಟಿಸದೆ ಹೋದರೆ ಕೇಂದ್ರವು ನಮ್ಮನ್ನು ಆಪೋಶನ ತೆಗೆದುಕೊಳ್ಳಲಿದೆ' ಎಂದರು.

'ಒಕ್ಕೂಟ ಸರ್ಕಾರಕ್ಕೆ ₹4.5 ಲಕ್ಷ ಕೋಟಿಗೂ ಹೆಚ್ಚಿನ ತೆರಿಗೆ ಸಂಪತ್ತನ್ನು ಕರ್ನಾಟಕವು ನೀಡುತ್ತಿದೆ. ಆದರೆ, ನಮ್ಮ ರಾಜ್ಯದ ಪಾಲನ್ನು ನೀಡದೇ, ಬಿಡಿಗಾಸು ಕೊಟ್ಟು ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವಂಚಿಸುತ್ತಿದೆ' ಎಂದು ದೂರಿದರು.

ಐದು ವರ್ಷಗಳಲ್ಲಿ 15ನೇ ಹಣಕಾಸು ಆಯೋಗದ ಮೂಲಕ ಕೇಂದ್ರವು ಮಾಡಿದ ದ್ರೋಹದಿಂದ ಸುಮಾರು ₹70 ಸಾವಿರ ಕೋಟಿ ನಷ್ಟವಾಗಿದೆ. 15ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದ್ದ ಅನುದಾನ, ಕೇಂದ್ರವು ಬಜೆಟ್‌ನಲ್ಲಿ ಘೋಷಿಸಿ ಕೊಡದೆ ಹೋದ ಅನುದಾನ, ಯೋಜನೆಗಳಲ್ಲಾದ ಅನ್ಯಾಯ ಸೇರಿ ₹1 ಲಕ್ಷ ಕೋಟಿಗಿಂತಲೂ ಹೆಚ್ಚು ಅನುದಾನ ರಾಜ್ಯಕ್ಕೆ ಬರಬೇಕಿದೆ ಎಂದು ಅವರು ಅಂಕಿ ಅಂಶ ನೀಡಿದರು.

5



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಜ್ಯೋತ್ಸವದಲ್ಲಿ ಕನ್ನಡದ ಹಿರಿಮೆ ಬಿಂಬಿಸುವ ನೃತ್ಯ ಪ್ರದರ್ಶಿಸಿದ ಶಾಲಾ ವಿದ್ಯಾರ್ಥಿಗಳು ಪ್ರಜಾವಾಣಿ ಚಿತ್ರ

'ನಾನು ದ್ವಿಭಾಷಾ ನೀತಿ ಪರ'

'ನಾನು ವೈಯುಕ್ತಿಕವಾಗಿ ದ್ವಿಭಾಷಾ ನೀತಿ ಪರವಾಗಿ ಇದ್ದೇನೆ. ದ್ವಿಭಾಷಾ ನೀತಿಯಾಗಿ ಕಾನೂನು ಜಾರಿ ಆಗಬೇಕಾದರೆ ಸಚಿವ ಸಂಪುಟದಲ್ಲಿ ಚರ್ಚಿಸ ಬೇಕಾಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

5

'ಕಚೇರಿಗಳಲ್ಲಿ ಕನ್ನಡ ಧ್ವಜ ಕಡ್ಡಾಯ'

'ನವೆಂಬರ್ ತಿಂಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಕನ್ನಡದ ಧ್ವಜ ಹಾರಿಸುವ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ತೀರ್ಮಾನ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ನಮ್ಮ ರಾಜ್ಯ ಮಾತ್ರ ನಾಡಗೀತೆ, ಕನ್ನಡ ಬಾವುಟ, ಪ್ರತಿಮೆ ಹೊಂದಿದೆ. ದೇಶದ ಯಾವ ರಾಜ್ಯವೂ ಇವುಗಳನ್ನು ಹೊಂದಿಲ್ಲ. ವಿಧಾನಸೌಧದ ಆವರಣದಲ್ಲಿ ತಾಯಿ ಭುವನೇಶ್ವರಿ ಪ್ರತಿಮೆ ಸ್ಥಾಪಿಸಿದ್ದೇವೆ. ಫಲಕಗಳಲ್ಲಿ ಶೇ 60ರಷ್ಟು ಕನ್ನಡ ಕಡ್ಡಾಯಗೊಳಿಸಿದ್ದೇವೆ. ಬೆಂಗಳೂರಿನಲ್ಲಿರುವ ಉದ್ದಿಮೆಗಳು, ಕಾರ್ಖಾನೆಗಳು, ವಾಣಿಜ್ಯ ಕೇಂದ್ರಗಳಲ್ಲಿ ರಾಜ್ಯೋತ್ಸವ ಆಚರಿಸುವುದನ್ನು ಕಡ್ಡಾಯ ಮಾಡಿದ್ದೇವೆ' ಎಂದರು. 'ಕನ್ನಡವನ್ನು ಇಂಗ್ಲಿಷ್ ಹಾಗೂ ಹಿಂದಿ ಭಾಷೆಯ ದಾಳಿಯಿಂದ ನಾವೆಲ್ಲರೂ ಕಾಪಾಡಿಕೊಳ್ಳಬೇಕು' ಎಂದು ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಕೇರಳ ಕಡುಬಡತನ ಮುಕ್ತ'

ತಿರುವನಂತಪುರ (ಪಿಟಿಐ): 'ಕೇರಳವು ಕಡುಬಡತನ ಮುಕ್ತ ರಾಜ್ಯವಾಗಿದೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶನಿವಾರ ಘೋಷಿಸಿದ್ದಾರೆ.

ಕೇರಳ ರಾಜ್ಯ ರಚನೆಯಾದ ದಿನಾಚರಣೆ (ಕೇರಳ ಪಿರವಿ) ಅಂಗವಾಗಿ ಕರೆಯಲಾಗಿದ್ದ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಅವರು ಈ ಘೋಷಣೆ ಮಾಡಿದರು.

'ಮುಖ್ಯಮಂತ್ರಿ ಮಾಡಿರುವ ಘೋಷಣೆ ಅಸಂಬದ್ಧ' ಎಂದು ಟೀಕಿಸಿದ ಕಾಂಗ್ರೆಸ್ ನೇತೃತ್ವದ ವಿಪಕ್ಷ ಪಾಳಯದ ಶಾಸಕರು, ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದ ಘಟನೆಗೂ ಸದನ ಸಾಕ್ಷಿಯಾಯಿತು.



ಪಿಣರಾಯಿ ವಿಜಯನ್

ಈ ಕುರಿತು ಮುಖ್ಯಮಂತ್ರಿ ಘೋಷಣೆ ಮಾಡಿದ ಬಳಿಕ ಮಾತನಾಡಿದ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ವಿ.ಡಿ. ಸತೀಶನ್,' ಮುಖ್ಯಮಂತ್ರಿಯವರ ಹೇಳಿಕೆ ಅಸಂಬದ್ಧ ಹಾಗೂ ಸದನದ ನಿಯಮಗಳ ಉಲ್ಲಂಘನೆ' ಎಂದು ಟೀಕಿಸಿದರು.

'ಈ ಅಧಿವೇಶನದಲ್ಲಿ ನಾವು ಭಾಗವಹಿಸಲ್ಲ ಹಾಗೂ ಸಭಾತ್ಯಾಗ ಮಾಡುತ್ತೇವೆ' ಎಂದು ಸತೀಶನ್ ಹೇಳಿದರು. ಬಳಿಕ, 'ಸರ್ಕಾರದ ಘೋಷಣೆಯೇ ವಂಚನೆ... ನಾಚಿಕೆಗೇಡಿನದು...' ಎಂಬ ಘೋಷಣೆಗಳನ್ನು ಕೂಗುತ್ತಾ ಹೊರನಡೆದರು.

7

ತಿರುವನಂತಪುರದ ಗುಡಿಸಲಿನಲ್ಲಿ ವಾಸಿಸುತ್ತಿದ್ದ ಮಹಿಳೆ ಹಸಿವಿನಿಂದ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಸರ್ಕಾರದ ಘೋಷಣೆ ಅಸಂಬದ್ಧ ಎನ್ನುವುದಕ್ಕೆ ಇದು ನಿದರ್ಶನ
ವಿ.ಡಿ.ಸತೀಶನ್, ಕಾಂಗ್ರೆಸ್ ನಾಯಕ

'ನನ್ನ, ಸಿ.ಎಂ ಮಾತಿಗಷ್ಟೇ ಕಿಮ್ಮತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮತ್ತು ಮುಖ್ಯಮಂತ್ರಿ ಏನು ಮಾತನಾಡಿದ್ದೇವೆಯೊ ಅದು ಮಾತ್ರ ಮಾತು. ಮಿಕ್ಕ ಯಾರ ಮಾತಿಗೂ ಕಿಮ್ಮತ್ತು ಇಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ಚರ್ಚೆ ಬಿರುಸಾಗಿ ನಡೆಯುತ್ತಿರುವ ಹೊತ್ತಿನೊಳಗೆ ಶಿವಕುಮಾರ್ ಅವರ ಮಾತು, ನಾನಾ ರೀತಿಯ ಚರ್ಚೆಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆ.

ತಮ್ಮ ಮಧ್ಯೆ ಏನು ಮಾತುಕತೆ ನಡೆದಿದೆ ಎನ್ನುವುದನ್ನು ಬಹಿರಂಗಪಡಿಸದ ಶಿವಕುಮಾರ್, ಸರ್ಕಾರ ರಚನೆಯ ವೇಳೆ ನಡೆದಿದೆ ಎನ್ನಲಾಗುತ್ತಿರುವ 'ಅಧಿಕಾರ ಹಂಚಿಕೆ'ಯ ಕುರಿತ ವಾದಕ್ಕೆ ಪುಷ್ಟಿ ನೀಡಿದ್ದಾರೆ ಎಂಬ ವಿಶ್ಲೇಷಣೆಯೂ ಶುರುವಾಗಿದೆ.

ಇದೇ ತಿಂಗಳ ಅಂತ್ಯಕ್ಕೆ ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಲಿದೆ. ರಾಜಕೀಯ ವಲಯದಲ್ಲಿ ನಡೆಯುತ್ತಿರುವ 'ನವೆಂಬರ್ ಕ್ರಾಂತಿ' ಬಗ್ಗೆ ಏನು ಹೇಳುತ್ತೀರಿ ಎಂದು ಸುದ್ದಿಗಾರರು ಶನಿವಾರ ಪ್ರಶ್ನಿಸಿದಾಗ, 'ನಾವು ಏನು ಮಾತನಾಡಿಕೊಂಡಿದ್ದೇವೆಯೊ ಅದರ ಪ್ರಕಾರ ನಡೆದುಕೊಳ್ಳುತ್ತಾ ಇದ್ದೇವೆ. ಯಾರೊ ಒಬ್ಬರ, ಇಬ್ಬರ ಹೇಳಿಕೆಗಳಿಗೆ ಕಿಮ್ಮತ್ತು ಕೊಡುವುದು ಬೇಡ' ಎಂದು ಶಿವಕುಮಾರ್ ಹೇಳಿದರು.

'ನೀವು ಒಮ್ಮತದಲ್ಲಿ ಇದ್ದೀರಾ' ಎಂದು ಕೇಳಿದಾಗ, 'ಒಮ್ಮತದಲ್ಲಿ ಇರುವ ಕಾರಣಕ್ಕೇ 136 ಕ್ಷೇತ್ರ ಗೆದ್ದು 140ಕ್ಕೆ ನಮ್ಮ ಬಲ ಹೆಚ್ಚಿರುವುದು' ಎಂದರು

7

'ಡಿಕೆಶಿ ನಿಮಗೆ ಹೇಳಿದ್ದಾರೆಯೇ?'



'ಮುಖ್ಯಮಂತ್ರಿಯಾಗಿ ನ.21ರಂದು ಪ್ರಮಾಣ ವಚನ ಸ್ವೀಕರಿಸುತ್ತೇನೆ ಎಂದು ಡಿ.ಕೆ.ಶಿವಕುಮಾರ್ ಏನಾದರೂ ನಿಮಗೆ ಹೇಳಿದ್ದಾರೆಯೇ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಕೋಪದಿಂದಲೇ ಸುದ್ದಿಗಾರರನ್ನು ಪ್ರಶ್ನಿಸಿದರು.

ಕೋಲಾರದಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ಸುದ್ದಿ ಮಾಧ್ಯಮಗಳು ಸೃಷ್ಟಿಸಿದ್ದೇ ಹೊರತು ನಾವಲ್ಲ' ಎಂದರು.

'ಮುಖ್ಯಮಂತ್ರಿ ಬದಲಾವಣೆ ಆಗಲಿದೆ ಎಂದು ಯಾರು, ಯಾವಾಗ ಹೇಳಿದ್ದಾರೆ? ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್ ಏನಾದರೂ ಹೇಳಿದ್ದಾರೆಯೇ? ಯಾರಾದರೂ ದಿನಾಂಕ ನಿಗದಿ ಪಡಿಸಿದ್ದಾರೆಯೇ? ಈ ಸಂಬಂಧ ಏನಾದರೂ ದಾಖಲೆ ಇದೆಯೇ?' ಎಂದು ಈ ಬಗ್ಗೆ ಪ್ರಶ್ನೆ ಕೇಳಿದ ಮಾಧ್ಯಮ ಪ್ರತಿನಿಧಿಗಳ ಮೇಲೆ ಹರಿಹಾಯ್ದರು. 'ನಾವೆಲ್ಲ ಕಾಂಗ್ರೆಸ್ ಪಕ್ಷದ ಕಟ್ಟಾಳುಗಳು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಹೈಕಮಾಂಡ್ ಹೇಳಿದಂತೆ ಕೇಳುವವರು. ಹೀಗಾಗಿ, ಮತ್ತೊಬ್ಬರ ಮಾತಿಗೆ ಕಿವಿಗೊಡುವುದಿಲ್ಲ' ಎಂದರು.

ಎಂಇಎಸ್‌ಗೆ ಮುಖ್ಯಮಂತ್ರಿ ಎಚ್ಚರಿಕೆ • ಇರುವುದಾದರೆ ಕನ್ನಡಿಗರಾಗಿ ಇರಿ –ಡಿಸಿಎಂ

'ಪುಂಡಾಟಿಕೆ ಮಾಡಿದರೆ ಮಟ್ಟ ಹಾಕುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯಲ್ಲಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯವರೂ (ಎಂಇಎಸ್) ಕನ್ನಡಿಗರೇ. ಅವರಲ್ಲಿ ಯಾರಾದರೂ ಪುಂಡಾಟಿಕೆ ಮಾಡಿದರೆ ಮಟ್ಟ ಹಾಕುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಬ್ಯಾಂಕ್ ವೃತ್ತದ ನೃಪತುಂಗ ಮಂಟಪದಲ್ಲಿ ಭುವನೇಶ್ವರಿ ಹಾಗೂ ಅಣ್ಣಮ್ಮ ದೇವತೆಯ ವೈಭವದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಬೆಳಗಾವಿ ವಿಚಾರದಲ್ಲಿ ರಾಜಿ ಇಲ್ಲ. ಮಹಾಜನ್ ವರದಿಯೇ ಅಂತಿಮ. ಬೆಳಗಾವಿ ಕನ್ನಡದ ನೆಲ, ಕರ್ನಾಟಕದ ಭಾಗ. ಇದನ್ನು ಅಲ್ಲಗಳೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಕನ್ನಡ ಹೋರಾಟಗಾರರ ವಿರುದ್ಧದ ಪ್ರಕರಣಗಳನ್ನು ವಾಪಸ್ ತೆಗೆದುಕೊಳ್ಳಲಾಗುವುದು ಎಂದು ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮನಪರಿವರ್ತನೆ ಮಾಡೋಣ : ಡಿಕೆಶಿ

ಎಂಇಎಸ್‌ನವರು ಕರ್ನಾಟಕದಲ್ಲಿ ಇರಬೇಕು ಎಂದಾದರೆ ಕನ್ನಡಿಗರಾಗಿರಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರ್ನಾಟಕದಲ್ಲಿ ಇರುವವರು ಕಡ್ಡಾಯವಾಗಿ ಕನ್ನಡ ಕಲಿಯಬೇಕು, ಮಾತನಾಡಬೇಕು. ಈ ನಾಡಿನಲ್ಲಿ ಬದುಕುವವರು ಕನ್ನಡದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಹೇಳಿದರು.

'ಎಂಇಎಸ್‌ನವರ ಮನ ಪರಿವರ್ತಿಸುವ ಕೆಲಸವನ್ನು ಮಾಡೋಣ. ಕರ್ನಾಟಕದಲ್ಲಿ ಎಂಇಎಸ್ ಒಂದು ಗುಂಪು ಆಗಿ, ಒಂದು ಪಕ್ಷವಾಗಿ ಕೆಲಸ ಮಾಡುತ್ತಿದೆ. ಅವರೂ ಕನ್ನಡರಿಗರೇ ಆಗಿದ್ದಾರೆ. ಅವರು ಕೂಡ ಕರ್ನಾಟಕ ವಿಧಾನಸಭೆಗೆ ಪ್ರವೇಶ ಮಾಡಿದ್ದಾರೆ. ಇತರ ವಿಚಾರಗಳ ಮಾಹಿತಿ ಗೃಹ ಸಚಿವರಿಗೆ ಇರುತ್ತದೆ' ಎಂದು ಅವರು ಹೇಳಿದರು.

ಎಂಇಎಸ್ ನಿಷೇಧಿಸಲು ಆಗ್ರಹಗಳು ಬಂದಿವೆ. ನಾಡದ್ರೋಹಿ ಚಟುವಟಿಕೆ ಕೈಗೊಂಡಿದ್ದರೆ ನಿಷೇಧಿಸಲು ಗಂಭೀರ ಚರ್ಚೆ ನಡೆಸಲಾಗುವುದು
ಸತೀಶ ಜಾರಕಿಹೊಳಿ, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ

ಕರಾಳ ದಿನ ಆಚರಣೆ ಕಾರಣ ಮೆರವಣಿಗೆ ನಡೆಸಲು ಎಂಇಎಸ್‌ಗೆ ಅನುಮತಿ ನೀಡಿಲ್ಲ. ಅದರ ನಾಯಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು
ಭೂಷಣ ಬೊರಸೆ, ಪೊಲೀಸ್ ಆಯುಕ್ತ, ಬೆಳಗಾವಿ

ಶಿವಸೇನಾದವರಿಗೆ ನಿರ್ಬಂಧ

ಬೆಳಗಾವಿ: ರಾಜ್ಯೋತ್ಸವಕ್ಕೆ ಪರ್ಯಾಯವಾಗಿ ಎಂಇಎಸ್ ಮುಖಂಡರು ಶನಿವಾರ ಕರಾಳ ದಿನ ಆಚರಿಸಿ, ಕಪ್ಪು ಬಟ್ಟೆ ಧರಿಸಿ ಮೆರವಣಿಗೆ ನಡೆಸಿದರು.

'ಸಂಯುಕ್ತ ಮಹಾರಾಷ್ಟ್ರ ಝಾಲಾಚ್ ಪಾಹಿಜೆ (ಸಂಪೂರ್ಣ ಮಹಾರಾಷ್ಟ್ರ ಆಗಲೇಬೇಕು)' ಘೋಷಣೆಗಳನ್ನು ಕೂಗಿದರು. ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿರುವ ಪಾಲಿಕೆ ಸದಸ್ಯೆ ವೈಶಾಲಿ ಭಾತಕಾಂಡೆ ಕೂಡ ಪಾಲ್ಗೊಂಡರು.

ಪೊಲೀಸ್ ವಶಕ್ಕೆ: ಕರಾಳ ದಿನ ವಿರೋಧಿಸಿ ಮರಾಠ ಮಂದಿರದತ್ತ ನುಗ್ಗಲೆತ್ನಿಸಿದ ಕನ್ನಡ ಸಂಘಟನೆಗಳ 20ಕ್ಕೂ ಹೆಚ್ಚು ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.


ಜಿಲ್ಲೆ ಗಡಿ ಪ್ರವೇಶಿಸಲೆತ್ನಿಸಿದ ಮಹಾರಾಷ್ಟ್ರದ ಸಂಸದ ಧೈರ್ಯಶೀಲ ಮಾನೆ, ಶಿವಸೇನಾ (ಉದ್ಧವ್ ಠಾಕ್ರೆ ಬಣ) ಕೊಲ್ಹಾಪುರ ಘಟಕದ ಅಧ್ಯಕ್ಷ ವಿಜಯ ದೇವಣೆ ಸೇರಿ ಹಲವರನ್ನು ನಿಪ್ಪಾಣಿ ಪೊಲೀಸರು ವಾಪಸ್ ಕಳುಹಿಸಿದರು.

ಶಿವಸೇನಾದವರು ನಾಡದ್ರೋಹಿ ಹೇಳಿಕೆ ನೀಡಿ, ಶಾಂತಿ ಕದಡುವ ಕಾರಣ ನೀಡಿ ಗಡಿ ಪ್ರವೇಶಿಸಬಾರದು ಎಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

‘ಲಾಲ್‌ಬಾಗ್ ಬದಲು ಪರ್ಯಾಯ ಮಾರ್ಗ’

ಬೆಂಗಳೂರು: ಲಾಲ್‌ಬಾಗ್ ಉದ್ಯಾನದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆಯ ಮಾರ್ಗವನ್ನು ಬದಲು ಮಾಡುವ ಇಂಗಿತವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಕ್ತಪಡಿಸಿದ್ದರೆ, ಸುರಂಗ ರಸ್ತೆ ಯೋಜನೆಯನ್ನು ಯಾವುದೇ ಕಾರಣಕ್ಕೂ ಅನುಷ್ಠಾನ ಮಾಡಬಾರದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ‘ನುರಿತ ತಜ್ಞರು ಅಭಿಪ್ರಾಯ ಪಡೆದು ಕೆಲಸ ಆರಂಭ ಮಾಡುತ್ತಾರೋ ಇಲ್ಲವೋ’ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ.



ಪರ್ಯಾಯದತ್ತ ಆಲೋಚನೆ: ಡಿಕೆಶಿ




‘ಶುಕ್ರವಾರ ರಾತ್ರಿ ಲಾಲ್‌ಬಾಗ್ ಬಳಿ ತೆರಳಿ ಎಲ್ಲೆಲ್ಲಿ ಸುರಂಗ ರಸ್ತೆಗೆ ಪ್ರವೇಶ ಕಲ್ಪಿಸಬಹುದು ಎಂದು ಪರಿಶೀಲನೆ ಮಾಡಿದ್ದೇನೆ. ಪರ್ಯಾಯ ಮಾರ್ಗಗಳ ಬಗ್ಗೆ ಆಲೋಚನೆ ನಡೆಸುತ್ತಿದ್ದೇನೆ. ಯಾವುದೇ ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಸುರಂಗ ರಸ್ತೆ ವಿಚಾರದಲ್ಲಿ ಆರ್. ಅಶೋಕ ಅವರ ನೇತೃತ್ವದಲ್ಲೇ ಸಮಿತಿ ರಚಿಸಲು ನಾನು ತಯಾರಿದ್ದೇನೆ. ಅವರು ಸೂಚಿಸಿದ ಕಡೆಯೇ ಲಾಲ್‌ಬಾಗ್ ಬಳಿ ಪ್ರವೇಶ– ನಿರ್ಗಮನ ತಾಣ ರೂಪಿಸಲಾಗುವುದು’ ಎಂದು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದರು.

‘ಅಶೋಕ ಅವರು ಧರಣಿ ಕೂರುವ ಅವಶ್ಯ ಇಲ್ಲ. ಏಕೆಂದರೆ ಅವರು ಬೆಂಗಳೂರಿನವರು. ಇಲ್ಲಿಂದ ಏಳೆಂಟು ಬಾರಿ ಗೆದ್ದಿದ್ದಾರೆ. ಅವರಿಗೂ ಜವಾಬ್ದಾರಿಯಿದೆ. ಅವರ ನೇತೃತ್ವದಲ್ಲಿ ರಚಿಸಿದ ಸಮಿತಿಯೇ ಸರ್ಕಾರಕ್ಕೆ ಸಲಹೆ, ನಿರ್ದೇಶನ ನೀಡಲಿ. ಸುರಂಗ ರಸ್ತೆ ಯೋಜನೆಯನ್ನು ಅವರೂ ಗಮನಿಸಲಿ. ಶಾಸಕ ಅಶ್ವತ್ಥ ನಾರಾಯಣ ಸೇರಿದಂತೆ ಬೇರೆ ಯಾರ ಹೆಸರನ್ನು ಸೂಚಿಸಿದರೂ ಅವರನ್ನು ಈ ಸಮಿತಿಗೆ ಸೇರ್ಪಡೆ ಮಾಡಲಾಗುವುದು. ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಬೇಕು, ಮಾಡೋಣ’ ಎಂದರು.

ಲಾಲ್‌ಬಾಗ್‌ನಲ್ಲಿ ಇಂದು ಧರಣಿ: ಅಶೋಕ



‘ಸುರಂಗ ರಸ್ತೆ ಯೋಜನೆಯನ್ನು ವಿರೋಧಿಸಿ ಲಾಲ್‌ಬಾಗ್‌ನಲ್ಲಿ ಬಿಜೆಪಿ ಶಾಸಕರು ಹಾಗೂ ವಿವಿಧ ಸಂಘಟನೆಗಳೊಂದಿಗೆ ಭಾನುವಾರ ಬೆಳಿಗ್ಗೆ 8 ಗಂಟೆಗೆ ಪ್ರತಿಭಟನೆ ನಡೆಸಲಾಗುವುದು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

‘ಸುರಂಗ ರಸ್ತೆ ಯೋಜನೆಯ ಹೆಸರು ಕೇಳಿದರೆ ಜನರು ಭೀತಿಗೊಳ್ಳುತ್ತಿದ್ದಾರೆ. ಎಲ್ಲಿ ಯಾರ ಮನೆ ಹೋಗಲಿದೆ ಎಂದು ತಿಳಿಯುತ್ತಿಲ್ಲ. ಲಾಲ್‌ಬಾಗ್‌ನಲ್ಲಿ 6 ಎಕರೆ ಜಮೀನು ಕಬಳಿಕೆ ಮಾಡಿ ಯೋಜನೆ ಮಾಡಲಾಗುತ್ತದೆ. ಇದಕ್ಕೆ ಯಾವ ಇಲಾಖೆಯೂ ಅನುಮತಿ ನೀಡಿಲ್ಲ. ಬಿಹಾರ ಚುನಾವಣೆ ಬಂದಿರುವುದರಿಂದ ಹಣ ಮಾಡಲು ಈ ಯೋಜನೆ ಜಾರಿ ಮಾಡುತ್ತಿರಬಹುದು. ‘ಲಾಲ್‌ಬಾಗ್ ಉಳಿಸಿ, ಬೆಂಗಳೂರು ರಕ್ಷಿಸಿ’ ಎಂಬ ಘೋಷಣೆಯಡಿ ಪ್ರತಿಭಟನೆ ನಡೆಯಲಿದೆ’ ಎಂದರು.

‘ಸಂಸದ ತೇಜಸ್ವಿ ಸೂರ್ಯ ಅವರನ್ನು ಅವಹೇಳನ ಮಾಡುವುದು ತಪ್ಪು. ಇದು ಒಂದು ಲೋಕಸಭಾ ಕ್ಷೇತ್ರಕ್ಕೆ ಮಾಡುವ ಅಪಮಾನ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯ-ಮಂತ್ರಿಯವರು ಗೌರವ ಕೊಟ್ಟು ಮಾತಾಡುವುದನ್ನು ಕಲಿಯಲಿ’ ಎಂದು ಪ್ರತಿಕ್ರಿಯಿಸಿದರು.

ಯಾವಾಗ ಪ್ರಾರಂಭ ಮಾಡುತ್ತಾರೆ: ಎಚ್‌ಡಿಕೆ



‘ಸುರಂಗ ರಸ್ತೆಯ ಕೆಲಸ ಯಾವಾಗ ಪ್ರಾರಂಭ ಮಾಡುತ್ತಾರೋ ನೋಡೋಣ. ನುರಿತ ತಜ್ಞರು ಅಭಿಪ್ರಾಯ ಪಡೆಯುತ್ತಾರೋ ಇಲ್ಲವೋ ಗೊತ್ತಿಲ್ಲ. ಬೆಂಗಳೂರು ಜನ ಪ್ರತಿನಿತ್ಯ ಅನುಭವಿಸುತ್ತಿರುವ ಸಮಸ್ಯೆ ಬಗೆಹರಿಯಬೇಕು. ಸುರಂಗ ರಸ್ತೆ ಮಾಡುತ್ತಾರೋ, ಎಲಿವೇಟೆಡ್ ರಸ್ತೆ ಮಾಡುತ್ತಾರೋ ಅದು ಸರ್ಕಾರಕ್ಕೆ ಬಿಟ್ಟಿದ್ದು. ಜನರು ಪ್ರತಿನಿತ್ಯ ಸರ್ಕಾರದ ವೈಫಲ್ಯಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಜನರ ಬದುಕಿನಲ್ಲಿ ಚೆಲ್ಲಾಟ ಆಡಬಾರದು’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ನಗರದಲ್ಲಿ ಗುಂಡಿ ಮುಚ್ಚಲು ಅಧಿಕಾರಿಗಳಿಗೆ ವಿಧಿಸಿರುವ ಗಡುವು ಮುಗಿದಿದ್ದರೂ ಇನ್ನು ಗುಂಡಿಗಳು ಹಾಗೆಯೇ ಇವೆ. ಆ ಬಗ್ಗೆ ಮಾಧ್ಯಮಗಳು ಕೇಳಿರುವುದಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಕೇಳಿ’ ಎಂದಿರುವುದು ಬೇಜವಾಬ್ದಾರಿಯ ಪರಮಾವಧಿ. ಮುಖ್ಯಮಂತ್ರಿಯವರ ಮಾತಿಗೆ ಅಧಿಕಾರಿಗಳು ಎಷ್ಟು ಬೆಲೆ ಕೊಡುತ್ತಿದ್ದಾರೆ ಎನ್ನುವುದು ಬಹಿರಂಗವಾಗಿದೆ’ ಎಂದರು.

ನಗರದಲ್ಲಿ ಇಂದು

ಹೊಯ್ಸಳ ಹಸ್ಲ್–2025 ಓಟಕ್ಕೆ ಚಾಲನೆ: ಥಾವರಚಂದ್ ಗೆಹಲೋತ್, ಸ್ಥಳ: ನೈಸ್ ರಸ್ತೆ, ಬೆಳಿಗ್ಗೆ 6
ಹಿಂದೂಸ್ತಾನಿ ಸಂಗೀತ ಕಛೇರಿ: ರವೀಂದ್ರ ಸೊರಗಾವಿ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7
ಲಾಲ್‌ಬಾಗ್ ಸೌಹಾರ್ದ ನಡಿಗೆ: ಆಯೋಜನೆ: ಬೆಂಗಳೂರು ಟೌನ್‌ಹಾಲ್, ಸ್ಥಳ: ಲಾಲ್‌ಬಾಗ್ ಪಶ್ಚಿಮ ದ್ವಾರ, ಬೆಳಿಗ್ಗೆ 8.30
32ನೇ ವಾರ್ಷಿಕ ಸಂಗೀತೋತ್ಸವ: ಸಂಗೀತ ಸುರಭಿ ಪ್ರಶಸ್ತಿ ಪ್ರದಾನ: ಸ್ವೀಕರಿಸುವವರು: ಟಿ.ಎಸ್. ಸತ್ಯವತಿ, ಅತಿಥಿ: ಎಚ್.ಎಸ್. ಸುಧೀಂದ್ರ, ಆಯೋಜನೆ: ನಾದಸುರಭಿ, ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಆವರಣ, ಕೋರಮಂಗಲ, ಬೆಳಿಗ್ಗೆ 10
37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ: ಗೋಕುಲೋತ್ಸವ–ಕೊಳಲು ವಾದನ, ನಿರ್ದೇಶನ: ಎಚ್.ಎಸ್. ವೇಣುಗೋಪಾಲ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ತಿನ ಆವರಣ, ಕೆಂಪೇಗೌಡನಗರ, ಬೆಳಿಗ್ಗೆ 10
ಪ್ರತಿಭಾ ಪುರಸ್ಕಾರ ಸನ್ಮಾನ ಸಮಾರಂಭ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಉದ್ಘಾಟನೆ: ರಂಗಸ್ವಾಮಿ ನಟರಾಜ್, ಅತಿಥಿಗಳು: ದಿನೇಶ್ ಗುಂಡುರಾವ್, ಕೆ. ನಾರಾಯಣ್, ಪಿ.ಸಿ. ಮೋಹನ್, ರಿಜ್ವಾನ್ ಅರ್ಷದ್, ಪ್ರಸನ್ನಕುಮಾರ್ ಪಿ., ಅಧ್ಯಕ್ಷತೆ: ಎ. ವಿಜಯಕುಮಾರ್, ಆಯೋಜನೆ: ದೇವಾಂಗ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಕೃಷ್ಣೆಯಿಂದ ಕಾವೇರಿವರೆಗೆ: ಬೆಳಿಗ್ಗೆ 7.30ಕ್ಕೆ ‘ಕರ್ನಾಟಕದಲ್ಲಿ ಯೋಗ–ಪರಿಕಲ್ಪನೆಗಳು ಮತ್ತು ಪರಂಪರೆ’: ಮೇಧಾ ಭಾಸ್ಕರ್, 10ಕ್ಕೆ ‘ಕೃಷ್ಣೆ ಮತ್ತು ಕಾವೇರಿ ನದಿ ತೀರದ ಹಾಡುಗಳು’: ಚಂದನ ಬಾಲ ಕಲ್ಯಾಣ, ಸತ್ಯಜಿತ್ ಸಂಜು ಮತ್ತು ಆದರ್ಶ್ ಶೆಣೈ, 11ಕ್ಕೆ ‘ಹಂಪಿಯ ಕಾಣೆಯಾದ ಕಲ್ಲುಗಳು’: ಮಾಲಾ ಕುಮಾರ್, 11.30ಕ್ಕೆ ‘ಕನ್ನಡ ಚಿತ್ರರಂಗದ ಸ್ವರಯುಗ’: ಎನ್.ಎಸ್. ಶ್ರೀಧರಮೂರ್ತಿ, ಸುಂದರ್‌ರಾಜ್, ಹಂಸಲೇಖ, ಮಧ್ಯಾಹ್ನ 2ಕ್ಕೆ ‘ಡಿಜಿಟಲ್ ಕನ್ನಡ ಅಕ್ಷರಶೈಲಿ’: ಮಂಜುನಾಥ ಆರ್., 3ಕ್ಕೆ ‘ಇಳಿದು ಬಾ ತಾಯೆ’: ಸುಪ್ರಿಯಾ ರಘುನಂದನ್, ಮಂಗಳಾ ರವಿ, ಅನಘಾ ಹೆಗಡೆ, ಶಶಿಧರ ನರಸಿಂಹಸ್ವಾಮಿ, ಸ್ಮೃತಿ ಕುಮಾರ್, ಸೃಷ್ಟಿ ಉಮೇಶ್, ರಾಜ್ ಕಿರಣ್, ರವಿ ಕಿರಣ್, ಸೃಷ್ಟಿ ಶ್ರೀನಿವಾಸ್, 3ಕ್ಕೆ ‘ಚಿತ್ತಾರ–ಮಕ್ಕಳಿಗಾಗಿ ಜಾನಪದ ಕಲೆ’: ಗೀತಾ ಭಟ್, ಶೃತಿ ಬೆಳ್ಳಿ, ಸಂಜೆ 5ಕ್ಕೆ ‘ಡಿಜಿಟಲ್ ಕನ್ನಡ ಅಕ್ಷರಶೈಲಿ’: ಮಂಜುನಾಥ ಆರ್., 5.30ಕ್ಕೆ ‘ಕೃಷ್ಣೆ–ಕಾವೇರಿಯರ ಹರವಿನ ಬೆರಗು’: ಶ್ರೀನಿವಾಸ್ ಜಿ. ಕಪ್ಪಣ್ಣ, ಸವಿತಕ್ಕ, 7.30ಕ್ಕೆ ವಾಸು ದೀಕ್ಷಿತ್ ಕಲೆಕ್ಟಿವ್: ವಾಸು ದೀಕ್ಷಿತ್, ಮನು ಶ್ರೀವಾಸ್ತವ, ಜೋಯೆಲ್ ಸಕ್ಕರಿ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು.



ಸಂಯಮ ಕಥಕ್ ನೃತ್ಯ ನಾಟಕದ ದೃಶ್ಯ

‘ಸಂಯಮ’ ಕಥಕ್ ನೃತ್ಯ ನಾಟಕ ಪ್ರದರ್ಶನ: ಆಯೋಜನೆ: ಸ್ಪೇಸ್, ಸ್ಥಳ: ಎಡಿಎ ರಂಗಮಂದಿರ, ಸಂಜೆ 6.30


ಡಿ.ವಿ. ಪ್ರಹ್ಲಾದ್ ಅವರ ‘ಹಗಲ ಹೊಳೆ’, ‘ಬೊಂಬಾಟ್ ಜಪಾನಿನಲ್ಲಿ ಹತ್ತು ದಿನ’ ಪುಸ್ತಕಗಳ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿ: ಕೆ.ಈ. ರಾಧಾಕೃಷ್ಣ, ಪುಸ್ತಕಗಳ ಪರಿಚಯ: ಚ.ಹ. ರಘುನಾಥ, ಎಸ್. ಹೇಮಾ, ಆಯೋಜನೆ: ಸಮನ್ವಿತ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10



ಮಲ್ಲೇಪುರಂ ಜಿ.ವೆಂಕಟೇಶ್

ಕನ್ನಡ ರಾಜ್ಯೋತ್ಸವ, ಲಕ್ಷ್ಮೀನಾರಾಯಣ್ ಅವರ ‘ಕಾವ್ಯಾಮೃತ’ ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಉದ್ಘಾಟನೆ: ಸಿ. ಸೋಮಶೇಖರ್, ಅತಿಥಿಗಳು: ಜಾಣಗೆರೆ ವೆಂಕಟರಾಮಯ್ಯ, ಪಾಲನೇತ್ರ, ಅಧ್ಯಕ್ಷತೆ: ಪ್ರೇಮ ಸಿದ್ಧರಾಜು, ಆಯೋಜನೆ: ಸಾಯಿ ಮಾದವ ಚಾರಿಟಬಲ್ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10
ಮಾಸದ ಮಂಥನ: ಅತಿಥಿ: ಮಂಡ್ಯ ರಮೇಶ್, ಸ್ಥಳ: ನಂ. 17, ಸಾನ್ನಿಧ್ಯ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11
‘ಸೀತಾ ಪರಿತ್ಯಾಗ’ ತಾಳ ಮದ್ದಳೆ: ಹಿಮ್ಮೇಳ: ಭಾಗವತರು: ಕೇಶವ ಹೆಗಡೆ ಕೊಳಗಿ, ಮದ್ದಳೆ: ಎ.ಪಿ. ಫಾಟಕ್, ಮುಮ್ಮೇಳ: ಸರ್ಪಂಗಳ ಈಶ್ವರ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ವಾಸುದೇವ ರಂಗಾ ಭಟ್, ಮಧೂರು, ವಿ. ಗಣಪತಿ ಭಟ್, ಸಂಯೋಜನೆ: ಜಗದೀಶ ಹೊಸಬಾಳೆ, ವಿನಾಯಕ ವಾಜಗದ್ದೆ, ಸ್ಥಳ: ಕೆಆರ್‌ಇಡಿಎಲ್ ಸಭಾಂಗಣ, ನಾಗರಬಾವಿ, ಮಧ್ಯಾಹ್ನ 3.30
‘ಜುಪಿಟರ್-ಕಿಂಗ್ ಆಫ್ ದಿ ಪ್ಲಾನೆಟ್ಸ್ ಆ್ಯಂಡ್ ಇಟ್ಸ್ ಫ್ಯಾಮಿಲಿ’ ಉಪನ್ಯಾಸ: ಬಿ.ಆರ್. ಗುರುಪ್ರಸಾದ್, ಆಯೋಜನೆ ಮತ್ತು ಸ್ಥಳ: ಜವಹರಲಾಲ್ ನೆಹರೂ ತಾರಾಲಯ, ಸಂಜೆ 4

‘ತುಳು ಪಾಡ್ದನಗಳ ಲೋಕದೃಷ್ಟಿ’ ಕನ್ನಡ ಜಗತ್ತಿಗೆ ತುಳು ಲೋಕದ ಪರಿಚಯ ಮಾಲಿಕೆ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ತಾರಾನಾಥ ಗಟ್ಟಿ ಕಾಪಿಕಾಡ್, ಅತಿಥಿ: ಸುಧಾಕರ ಬನ್ನಂಜೆ, ಆಯೋಜನೆ: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಋತುಗಾನ ಪ್ರತಿಷ್ಠಾನ, ಸ್ಥಳ: ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4



ಪುರುಷೋತ್ತಮ ಬಿಳಿಮಲೆ

ಕವಿಪತ್ನಿ ದಿನಾಚರಣೆ, ನಿನ್ನೊಲುಮೆಯಿಂದಲೆ ಗೌರವ ಪುರಸ್ಕಾರ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಚಂದ್ರ ಅಶ್ವಥ್, ಅನಸೂಯ ಮಂಜುನಾಥ್, ಪ್ರಶಸ್ತಿ ಸ್ವೀಕರಿಸುವವರು: ಸಾವಿತ್ರ ವ್ಯಾಸರಾವ್, ಆಯೋಜನೆ: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4



ಬಿ.ಆರ್. ಲಕ್ಷ್ಮಣರಾವ್

‘ಮಾತೃ ವಂದನ’ ಧಾರ್ಮಿಕ ಸಂಗೀತ, ನೃತ್ಯ ಪ್ರದರ್ಶನ: ಗಾಯನ: ಇಮಾನ್ ದಾಸ್ ಮತ್ತು ತಂಡ, ರಾಜೇಶ್ ಯೂನಿವರ್ಸ್ ಮತ್ತು ತಂಡ, ಕಥಕ್ ನೃತ್ಯ ಪ್ರದರ್ಶನ: ಸ್ನಿಗ್ಧಾ ಡಿ.ಎಸ್., ಭರತನಾಟ್ಯ ಪ್ರದರ್ಶನ: ರೂಪಾ ಕಿರಣ್, ಅತಿಥಿ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಸಹಜ ಯೋಗ ಟುಡೇಸ್ ಮಹಾ ಸಮಾಜ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5
ಮಿನಿ ಕರ್ನಾಟಕ ಕ್ರೀಡಾಕೂಟ–2025: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಕೆ. ಗೋವಿಂದರಾಜ್, ಆಯೋಜನೆ: ಕರ್ನಾಟಕ ಒಲಿಂಪಿಕ್ ಸಂಸ್ಥೆ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಸಂಜೆ 5
‘ಚಿಟ್ಟೆ’ ನಾಟಕ ಪ್ರದರ್ಶನ: ರಚನೆ: ಬೇಲೂರು ರಘುನಂದನ್, ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, ‘ಶಾಶ್ವತ ಪರಿಹಾರ’ ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಸುಚಿತ್ರ ಸಿನಿಮಾ, ಬನಶಂಕರಿ ಎರಡನೇ ಹಂತ, ಸಂಜೆ 5ರಿಂದ
‘ತಾಜ್ ಮಹಲಿನ ಟೆಂಡರ್’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

‘ಮುಂಬೈನ ಮೂಲೆ, ಮೂಲೆಯಲ್ಲಿ ಕಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂಬೈನಲ್ಲೂ ಮೂಲೆ, ಮೂಲೆಯಲ್ಲಿ ಕಸದ ರಾಶಿ ಬಿದ್ದಿತ್ತು. ಬೇರೆ, ಬೇರೆ ಕಡೆಯಲ್ಲಿಯೂ ಬಿದ್ದಿರಬಹುದು. ಅಲ್ಲಿಗೆ ಶುಕ್ರವಾರ ಹೋಗಿದ್ದಾಗ ನಾನೇ ಅದನ್ನು ನೋಡಿದ್ದೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಮುಂಬೈ ನಗರದಲ್ಲಿ ಪ್ರಮುಖ ರಸ್ತೆಗಳ ಕಾಮಗಾರಿ ಹಾಗೂ ನಿರ್ವಹಣೆ ನಡೆಸಿದವರಿಗೆ ಆ ರಸ್ತೆ ಬದಿಗಳ ಕಸ ವಿಲೇವಾರಿ ಮಾಡುವ ಜವಾಬ್ದಾರಿಯನ್ನು ನೀಡಲಾಗಿದೆ ಎನ್ನುವ ಮಾಹಿತಿಯಿದೆ. ಬೆಂಗಳೂರಿನಲ್ಲೂ ಈ ಮಾದರಿ ಜಾರಿ ಮಾಡುವ ಕುರಿತು ಚರ್ಚೆ ಮತ್ತು ಆಲೋಚನೆ ನಡೆಸಲಾಗುತ್ತಿದೆ’ ಎಂದು ಸುದ್ದಿಗಾರರಿಗೆ ಶನಿವಾರ ಮಾಹಿತಿ ನೀಡಿದರು.

‘ರಸ್ತೆಬದಿ ಕಸ ಎಸೆದರೆ ಮತ್ತೆ ಅದು ಮರಳಿ ನಿಮ್ಮ ಮನೆಗೇ ಬರುತ್ತದೆ ಎನ್ನುವ ಎಚ್ಚರಿಕೆ ನೀಡುವುದರ ಜೊತೆಗೆ, ಇನ್ನೂ ಹೆಚ್ಚಿನ ಸಿಸಿಟಿವಿ ಕ್ಯಾಮೆರಾಗಳನ್ನು ಪೊಲೀಸ್ ಇಲಾಖೆ ಹಾಗೂ ಪಾಲಿಕೆ ನೆರವಿನಿಂದ ಅಳವಡಿಸಲಾಗುವುದು’ ಎಂದರು.

ಕಸ ಸಂಗ್ರಹಣೆಗೆ ಸರಿಯಾದ ವ್ಯವಸ್ಥೆಯಿಲ್ಲ ಎನ್ನುವ ನಾಗರಿಕರ ಆರೋಪದ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಇದೆಲ್ಲವೂ ಸುಳ್ಳು. ಪ್ರತಿದಿನವೂ ಮನೆಗಳಲ್ಲಿ ಕಸ ಸಂಗ್ರಹ ನಡೆಯುತ್ತಿದೆ. ಸಮಸ್ಯೆ ಎದುರಾಗಿದ್ದರೆ ಸೂಚಿತ ದೂರವಾಣಿ ಸಂಖ್ಯೆಗೆ ದೂರು ನೀಡಲಿ. ಇಡೀ ದೇಶದಲ್ಲಿಯೇ ಅತ್ಯುತ್ತಮ ವ್ಯವಸ್ಥೆ ರೂಪಿಸಿದ್ದೇವೆ’ ಎಂದು ಹೇಳಿದರು.



ನಗರದೆಲ್ಲೆಡೆ ಕಂಪು ಸೂಸಿದ ಕನ್ನಡ

ವಿವಿಧ ಸಂಘ–ಸಂಸ್ಥೆಗಳಿಂದ ಕರ್ನಾಟಕ ರಾಜ್ಯೋತ್ಸವ ಆಚರಣೆ
ರಾರಾಜಿಸಿದ ಹಳದಿ–ಕೆಂಪು ಬಣ್ಣದ ಕನ್ನಡ ಬಾವುಟಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಾಂಬೆ ಭುವನೇಶ್ವರಿಯ ಭಾವಚಿತ್ರದೊಂದಿಗೆ ಅದ್ದೂರಿ ಮೆರವಣಿಗೆ, ಹಳದಿ–ಕೆಂಪು ಬಣ್ಣದ ಕನ್ನಡ ಬಾವುಟಗಳ ಹಾರಾಟ, ಎಲ್ಲೆಲ್ಲೂ ಕನ್ನಡಾಭಿಮಾನ ಹೆಚ್ಚಿಸುವ ಗೀತೆಗಳು–ಜೈಕಾರ...

ನಗರದಲ್ಲಿ ಶನಿವಾರ ಕಂಡು ಬಂದ ದೃಶ್ಯಗಳಿವು. 70ನೇ ಕರ್ನಾಟಕ ರಾಜ್ಯೋತ್ಸವವನ್ನು ಕನ್ನಡಾಭಿಮಾನಿಗಳು ಸಂಭ್ರಮ ಸಡಗರದಿಂದ ಆಚರಿಸಿದರು. ನಗರದ ರಸ್ತೆಗಳು ಹಾಗೂ ಪ್ರಮುಖ ವೃತ್ತಗಳಲ್ಲಿ ಹಳದಿ–ಕೆಂಪು ಬಣ್ಣದ ಧ್ವಜಗಳು ರಾರಾಜಿಸಿದರೆ, ಇದೇ ಬಣ್ಣದ ಶಾಲು ಹೊದ್ದ ಕನ್ನಡ ಕಾರ್ಯಕರ್ತರು ಉತ್ಸಾಹದಿಂದ ನಗರದಲ್ಲಿ ಕನ್ನಡದ ಕಹಳೆ ಮೊಳಗಿಸಿದರು. ವಿವಿಧ ಸಂಘ–ಸಂಸ್ಥೆಗಳು ಹಮ್ಮಿಕೊಂಡಿದ್ದ ಕಾರ್ಯ–ಕ್ರಮಗಳು ಕನ್ನಡದ ಭಾಷೆಯ ಮಹತ್ವ ಸಾರಿದರೆ, ಜಾನಪದ ನೃತ್ಯಗಳು ನಾಡಿನ ಸಾಂಸ್ಕೃತಿಕ ವೈಭವವನ್ನು ಅನಾವರಣ ಮಾಡಿದವು.

ಬಸ್‌ಗಳು, ಕಾರುಗಳು, ಆಟೊ ರಿಕ್ಷಾಗಳು, ದ್ವಿಚಕ್ರ ವಾಹನಗಳು, ಹೋಟೆಲು, ಕಚೇರಿಗಳು, ಆಸ್ಪತ್ರೆಗಳು ಎಲ್ಲೆಲ್ಲೂ ನಾಡು–ನುಡಿಯ ಅಭಿಮಾನದ ಸಂಭ್ರಮ ಮನೆ ಮಾಡಿತ್ತು. ಕಂಠೀರವ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯ–ಕ್ರಮದಲ್ಲಿ ನಗರದ ವಿವಿಧ ಶಾಲೆಗಳ ಸಾವಿರಾರೂ ವಿದ್ಯಾರ್ಥಿಗಳು ಭಾಗ ವಹಿಸಿದ್ದರು.

ವೈಭವದ ಮೆರವಣಿಗೆ: ಕರ್ನಾಟಕ ರಾಜ್ಯೋತ್ಸವ ಸಮಿತಿ ಹಮ್ಮಿಕೊಂಡಿದ್ದ ಭುವನೇಶ್ವರಿ ಪೂಜೆ–ಉತ್ಸವವು ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಡೆಯಿತು. ಮೈಸೂರು ಬ್ಯಾಂಕ್ ವೃತ್ತದ ನೃಪತುಂಗ ಮಂಟಪದಲ್ಲಿ ಭುವನೇಶ್ವರಿ ಹಾಗೂ ಅಣ್ಣಮ್ಮ ದೇವತೆಯ ಈ ಮೆರವಣಿಗೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಉದ್ಯೋಗ ಮೀಸಲಾತಿ: ಕರ್ನಾಟಕ ರಕ್ಷಣಾ ವೇದಿಕೆಯು (ಕರವೇ) ಗಾಂಧಿನಗರದಲ್ಲಿರುವ ತನ್ನ ಕೇಂದ್ರ ಕಚೇರಿಯಲ್ಲಿ ಧ್ವಜಾರೋಹಣ ನಡೆಸಿದ ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ, 'ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ನೀಡುವ ಮಸೂದೆಯನ್ನು ಕೂಡಲೇ ಜಾರಿಗೊಳಿಸಬೇಕು. ದ್ವಿಭಾಷಾ ನೀತಿ ಅನುಷ್ಠಾನಗೊಳಿಸಬೇಕು. ಕನ್ನಡ ಪರ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು' ಎಂದು ಆಗ್ರಹಿಸಿದರು.

ಪುಸ್ತಕ ವಿತರಣೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ 'ಕನ್ನಡದ ಕಲರವ' ಕಾರ್ಯಕ್ರಮ ನಡೆಸಲಾಯಿತು. ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಅವರು ಕನ್ನಡದ ಪುಸ್ತಕಗಳನ್ನು ಪೊಲೀಸ್ ಠಾಣೆಗೆ ದಾನವಾಗಿ ಹಸ್ತಾಂತರಿಸಿದರು.

ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಪಿಂಚಣಿದಾರರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಿ.ಆರ್. ಲಕ್ಷ್ಮಣರಾವ್ ಅವರಿಗೆ 'ಕನ್ನಡ ಸಿರಿ ಪ್ರಶಸ್ತಿ' ಹಾಗೂ ಎಂ.ಎನ್. ವೆಂಕಟಸುಬ್ಬರಾವ್ ಮತ್ತು ಎಚ್.ಎನ್. ಗೋಪಾಲ್ ಅವರಿಗೆ 'ಪ್ರತಿಭಾಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಪ್ರತಿಮೆಗೆ ಮಾಲಾರ್ಪಣೆ: ಕನ್ನಡ ಗೆಳೆಯರ ಬಳಗವು ಕವಿ ಪ್ರತಿಮೆಗೆ ಮಾಲಾರ್ಪಣೆ–ಕನ್ನಡ ಚಿಂತನೆ ಕಾರ್ಯಕ್ರಮ ನಡೆಸಿತು. ತೀ.ನಂ.ಶ್ರೀ., ಕುವೆಂಪು, ಎಚ್. ನರಸಿಂಹಯ್ಯ ಹಾಗೂ ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಕಲರವ: ಐಟಿಪಿಎಲ್ ರಸ್ತೆಯಲ್ಲಿರುವ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕೆಂಪು ಮತ್ತು ಹಳದಿ ಬಣ್ಣದ ಹೂಗಳಿಂದ ಅಲಕೃಂತಗೊಂಡ ಭುವನೇಶ್ವರಿಯ ಭಾವಚಿತ್ರಕ್ಕೆ ಉಪ ಪ್ರಾಂಶುಪಾಲ ಬಿ.ನರಸಿಂಹ ಮೂರ್ತಿ ಪೂಜೆ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿದರು.

ಅನಿಕೇತನ ಬಿಡುಗಡೆ: ಬೆಂಗಳೂರು ನಗರ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಅನಿಕೇತನ' ಮಾಸಪತ್ರಿಕೆ ಬಿಡುಗಡೆ ಮಾಡಲಾಯಿತು. ಕುಲಪತಿ ಪ್ರೊ.ರಮೇಶ್ ಬಿ., 'ಶೇಷಾದ್ರಿಪುರಂ ಸೆಂಟ್ರಲ್ ಕಾಲೇಜಿನ ಕನ್ನಡ ಸಂಘದ ಶತಮಾನೋತ್ಸವವನ್ನು ಆಚರಿಸಲಾಗುವುದು' ಎಂದು ಘೋಷಿಸಿದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬಿಎಂಆರ್‌ಸಿಎಲ್, ಯಶವಂತಪುರದ ರಾಜರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾಸಂಸ್ಥೆ, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿಯಿಂದಲೂ ರಾಜ್ಯೋತ್ಸವ ಆಚರಿಸಲಾಯಿತು.



ರಾಜ್ಯೋತ್ಸವ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಲಾತಂಡಗಳು ಹೆಜ್ಜೆ ಹಾಕಿದವು

–ಪ್ರಜಾವಾಣಿ ಚಿತ್ರಗಳು



ಕಂಠೀರವ ಕ್ರೀಡಾಂಗಣದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು

ಶುಶ್ರೂಷಾಧಿಕಾರಿಗಳಿಗೆ ಸ್ಪರ್ಧೆ

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಕಾಯಂ ಶುಶ್ರೂಷಾಧಿಕಾರಿಗಳ ಸಂಘವು 'ಬೆಂಗಳೂರಿನಲ್ಲಿ ಕನ್ನಡದ ಸ್ಥಿತಿಗತಿ' ಎಂಬ ವಿಷಯದ ಬಗ್ಗೆ ಶುಶ್ರೂಷಾಧಿಕಾರಿಗಳಿಗೆ ಪ್ರಬಂಧ ಸ್ಪರ್ಧೆ ಹಮ್ಮಿಕೊಂಡಿತ್ತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಸ್ಪರ್ಧೆಯ ವಿಜೇತರನ್ನು ಘೋಷಿಸಲಾಯಿತು. ಕವಿತಾ ಎಚ್.ಎನ್. ಪ್ರಥಮ, ವೀಣಾ ಎಸ್. ದ್ವಿತೀಯ, ಪ್ರತಿಭಾ ಕೆ.ಎನ್., ರೂಪಾ ಮತ್ತು ಸುಮಾ ಅವರು ತೃತೀಯ ಬಹುಮಾನಕ್ಕೆ ಭಾಜನರಾದರು. ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ದೀಪಕ್, ಸಂಘದ ಅಧ್ಯಕ್ಷ ಅನಂತಕುಮಾರ್ ಉಪಸ್ಥಿತರಿದ್ದರು.

ಕಿದ್ವಾಯಿ ಸಂಸ್ಥೆ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಧ್ವಜಾರೋಹಣ ನೆರವೇರಿಸಿ, 'ಪ್ರತಿ ರೋಗಿಯೊಂದಿಗೆ ಕನ್ನಡದಲ್ಲಿ ಮಾತನಾಡಿ, ಪ್ರೀತಿಯಿಂದ ನಡೆದುಕೊಳ್ಳೋಣ' ಎಂದು ಹೇಳಿದರು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಬಿ.ಬಿ.ಸರೋಜಾ ಉಪಸ್ಥಿತರಿದ್ದರು.

ಕನ್ನಡ ಡಿಂಡಿಮ

ಜಯ ಕರ್ನಾಟಕ ಜನಪರ ವೇದಿಕೆಯು ಎಂ.ಜಿ. ರಸ್ತೆಯಲ್ಲಿ ಅದ್ದೂರಿ ಮೆರವಣಿಗೆ ನಡೆಸಿತು. ಭುವನೇಶ್ವರಿ ದೇವಿಯ ಭಾವಚಿತ್ರವನ್ನು ಹೂವಿನ ಪಲ್ಲಕ್ಕಿ ಮೇಲೆ ಇರಿಸಿ ನಡೆದ ಮೆರಣಿಗೆಯಲ್ಲಿ ಜಾನಪದ ಕಲಾ ತಂಡಗಳು ಹೆಜ್ಜೆ ಹಾಕಿದವು. ನೂರಾರು ಕನ್ನಡ ಪರ ಕಾರ್ಯಕರ್ತರು ಜೈಕಾರ ಕೂಗುತ್ತಾ ಹೆಜ್ಜೆ ಹಾಕಿದರು. ಆಟೊ ರಿಕ್ಷಾಗಳು ಬೃಹತ್ ಕನ್ನಡ ಧ್ವಜಗಳನ್ನು ಹೊತ್ತು ಸಾಗಿದವು.

ಚಾಮರಾಜಪೇಟೆ ನಾಡಹಬ್ಬ ಕನ್ನಡ ರಾಜ್ಯೋತ್ಸವ ಸಮಿತಿ ವತಿಯಿಂದ ನಡೆದ ರಾಜ್ಯೋತ್ಸವ ಮೆರವಣಿಗೆಯಲ್ಲಿ ವೀರಗಾಸೆ, ಪೂಜಾ ಕುಣಿತ ಸೇರಿ ವಿವಿಧ ಜಾನಪದ ಕಲಾ ತಂಡಗಳು ಪಾಲ್ಗೊಂಡಿದ್ದವು. ಉಮೇಶ್ ಮತ್ತು ತಂಡದಿಂದ ಸಂಜೆ ವಾದ್ಯಗೋಷ್ಠಿ ನಡೆಯಿತು.



'ರಾಜ್ಯೋತ್ಸವ ಪಾದಚಾರಿ ನಡಿಗೆ – 11ಕೆ' ಅಭಿಯಾನದಲ್ಲಿ ಎಂ. ಮಹೇಶ್ವರ ರಾವ್ ಮತ್ತು ನಾಗರಿಕರು ಭಾಗವಹಿಸಿದ್ದರು

'ರಾಜ್ಯೋತ್ಸವ ನಡಿಗೆ'

ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳನ್ನು ಸಂಭ್ರಮಿಸಲು ಮತ್ತು ಪಾದಚಾರಿ ಮಾರ್ಗಗಳ ಮಹತ್ವವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ 'ರಾಜ್ಯೋತ್ಸವ ಪಾದಚಾರಿ ನಡಿಗೆ – 11ಕೆ' ಅಭಿಯಾನವನ್ನು ಸಾರ್ವಜನಿಕರ ಸಹಭಾಗಿತ್ವದಲ್ಲಿ ಜಿಬಿಎ ಶನಿವಾರ ಹಮ್ಮಿಕೊಂಡಿತ್ತು.

ಶನಿವಾರ ಬೆಳಿಗ್ಗೆ 7ಕ್ಕೆ ವಿಧಾನಸೌಧದಿಂದ ಪ್ರಾರಂಭವಾದ ಈ ನಡಿಗೆಯಲ್ಲಿ 75ಕ್ಕೂ ಹೆಚ್ಚು ನಾಗರಿಕರು ಪಾಲ್ಗೊಂಡರು. ವಿಧಾನಸೌಧದಿಂದ ಹೊರಟ ನಡಿಗೆ ಕಬ್ಬನ್ ರಸ್ತೆ ಮೂಲಕ ಪೂರ್ವದತ್ತ ತೆರಳಿ ಹಲಸೂರು ಕೆರೆಯವರೆಗೆ ಸಾಗಿತು. ಅಲ್ಲಿಂದ ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇನ್‌ಫೆಂಟ್ರಿ ರಸ್ತೆಯ ಮೂಲಕ ವಿಧಾನಸೌಧ ಬಳಿಗೆ ವಾಪಸ್ ಆಯಿತು. ಎದುರಾದ ಅಡೆತಡೆಗಳ ಸಂಖ್ಯೆಯ ಆಧಾರದ ಮೇಲೆ ಪಾದಚಾರಿ ಮಾರ್ಗಗಳಿಗೆ ಅಂಕಗಳನ್ನು ನೀಡಿದರು. ಅಡೆತಡೆಗಳಲ್ಲಿ ಕಸ, ಭಗ್ನಾವಶೇಷಗಳು, ಮುರಿದ ಸ್ಲ್ಯಾಬ್, ಕಂಬಗಳು, ಬಿದ್ದ ಮರಗಳು ಇತ್ಯಾದಿ ಸೇರಿದ್ದವು.

ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರು ಸ್ಥಳಕ್ಕೆ ಭೇಟಿ ನೀಡಿ 'ರಾಜ್ಯೋತ್ಸವ ಪಾದಚಾರಿ ನಡಿಗೆ'ಯಲ್ಲಿ ಪಾಲ್ಗೊಂಡವರಿಗೆ ಬೆಂಬಲ ಸೂಚಿಸಿದರು.

ವಿದ್ಯಾರ್ಥಿಗಳೊಂದಿಗೆ ಸಂವಾದ

'ನಗರದ ಎಲ್ಲ ಶಾಲೆಗಳು ಮತ್ತು ಪಿಯು ಕಾಲೇಜುಗಳ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಗೆ ಕರೆತರುವ ಉದ್ದೇಶದಿಂದ ನ. 7ರಂದು ಬೆಳಿಗ್ಗೆ 9.30ಕ್ಕೆ ಪುರಭವನದಲ್ಲಿ 'ಮಕ್ಕಳ ಹವಾಮಾನ ಕ್ರಿಯಾ ಸಭೆ – 2025' ಆಯೋಜಿಸಲಾಗುತ್ತಿದೆ' ಎಂದು ಎಫ್‌ಇಸಿಸಿ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹವಾಮಾನ ಕ್ರಿಯಾ ಕೋಶದ ವತಿಯಿಂದ ನಡೆಯುತ್ತಿರುವ 'ಮಕ್ಕಳ ಹವಾಮಾನ ಕ್ರಿಯಾ ಸಭೆ' ಕುರಿತು ಮಾತನಾಡಿದ ಅವರು, 'ಹವಾಮಾನ ಬದಲಾವಣೆಯನ್ನು ಎದುರಿಸಲು ಮಕ್ಕಳ ಪಾತ್ರ ಪ್ರಮುಖ. ನಮ್ಮ ನಗರದ ನಿಜವಾದ ಬಲ ಮಕ್ಕಳು ಮತ್ತು ಯುವಕರು' ಎಂದು ಹೇಳಿದರು.

'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆಯ ಅನ್ವಯವಾಗಿ ಇಂತಹ ಕ್ಲಬ್‌ಗಳನ್ನು ನಗರದ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸುವುದು ನಮ್ಮ ಗುರಿಯಾಗಿದೆ' ಎಂದರು.

'ಕನ್ನಡ್ ಗೊತ್ತಿಲ್ಲ'ದವರು ಕನ್ನಡ ನುಡಿದಾಗ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಹೆಸರು ರೌಲ್', 'ನನ್ನ ಹೆಸರೂsss ಸೈಫಾಲಿ', 'ನನ್ನ ಹೆಸರು ಅಂಬರೀಷ್'...

ಇದು ಯಾವುದೋ ಸಂವಾದ–ಸಭೆಯಲ್ಲಿ ಜನರು ತಮ್ಮನ್ನು ತಾವು ಪರಿ–ಚಯಿಸಿಕೊಂಡದ್ದಲ್ಲ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶನಿವಾರ ಆಯೋಜಿಸಿದ್ದ 'ಕೃಷ್ಣೆಯಿಂದ ಕಾವೇರಿ ವರೆಗೆ...' ಕನ್ನಡ ಕಾರ್ಯಕ್ರಮ–ದಲ್ಲಿ, ಟೆಕ್ಕಿ ಅರ್ಪಿತ್ ಕುಮಾರ್ ಅವರು ನಡೆಸಿಕೊಟ್ಟ ಕಾರ್ಯಾಗಾರದಲ್ಲಿ ಕಿವಿಗೆ ಬಿದ್ದ ನುಡಿಗಳಿವು.

30ಕ್ಕೂ ಹೆಚ್ಚು ಜನರು ಭಾಗಿಯಾಗಿದ್ದ ಕಾರ್ಯಾಗಾರದಲ್ಲಿ, ಅನ್ಯಭಾಷಿಕರಿಗೆ ಪ್ರಾಯೋಗಿಕವಾಗಿ ಕನ್ನಡ ಕಲಿಸುವ ಯತ್ನ ಮಾಡಲಾಯಿತು. ಅಲ್ಲಿ ನೆರೆದಿದ್ದ ಕನ್ನಡ ಕಲಿಕಾಸಕ್ತರನ್ನು ಉದ್ದೇಶಿಸಿ ಅರ್ಪಿತ್, 'ನೀವು ಪೂರ್ಣವಾಗಿ ಕನ್ನಡದಲ್ಲಿ ಮಾತನಾಡಬೇಕು ಎಂದು ಗೂಗಲ್‌ನಲ್ಲಿ ಹುಡುಕಿ, ಕಲಿಯುವ ಪ್ರಯತ್ನ ಮಾಡಲೇಬೇಡಿ' ಎಂದು ಕಿವಿಮಾತು ಹೇಳಿದರು.

'ಇಂಗ್ಲಿಷ್ ಜತೆಗೆ ಕನ್ನಡ ಪದಗಳನ್ನು ಮಿಶ್ರಣ ಮಾಡಿ ಮಾತನಾಡಿ. ಮೊದಲಿಗೆ, 'ನನ್ನ ನೇಮ್...' ಎಂದು ಆರಂಭಿಸಿ. ನಂತರ 'ನನ್ನ ಹೆಸರು...' ಎಂದು ಮುಂದುವರೆಸಿ' ಎಂದು ಹೇಳಿಕೊಟ್ಟ ನಂತರ ಕಲಿಕಾಸಕ್ತರು ತಮ್ಮನ್ನು ಮೇಲಿನಂತೆ ಪರಿಚಯಿಸಿಕೊಂಡರು.

ನಿಮಗೆ ಯಾವುದೆಲ್ಲಾ ಕನ್ನಡ ಪದಗಳು ಗೊತ್ತು ಎಂದು ಪ್ರಶ್ನಿಸಿದಾಗ, 'ನಮಸ್ತೆ, ತಿಂಡಿ, ಊಟ, ಹೇಗಿದ್ದೀರಿ, ಬರುತ್ತೇನೆ, ಕೊಡಿ, ದಯವಿಟ್ಟು, ಸ್ವಲ್ಪ–ಸ್ವಲ್ಪ' ಎಂಬ ನುಡಿಗಳು ಕೇಳಿಬಂದವು. ಸಭಿಕರೊಬ್ಬರು ಮುಂದುವರೆದು, 'ನಾನು ಇಲಿ ಇದೀನಿ' ಎಂದರು. ಕಲಿಸುವವರು, 'ಇಲಿ ಅಂದರೆ ರ್‍ಯಾಟ್. ಇಲ್ಲಿ ಇದೀನಿ ಹೇಳಬೇಕು' ಎಂದು ತಿದ್ದಿದರು.

ಹೀಗೆ ಕನ್ನಡದಲ್ಲಿ ತಮ್ಮ ಊರು, ತಾಯಿನುಡಿ, ಕೆಲಸ, ಕನ್ನಡದ ಅಂಕಿಗಳನ್ನು ಬಳಸಿಕೊಂಡು ಸಣ್ಣ–ಸಣ್ಣ ವಾಕ್ಯಗಳನ್ನು ಹೇಳುವ ವೇಳೆಗೆ ಕಾರ್ಯಾಗಾರಕ್ಕೆ ತೆರೆಬಿತ್ತು. ಆದರೆ ಕಾರ್ಯಾಗಾರದ ಆಚೆಗೂ, 'ನನ್ನ ಊರು ಸಿಲಗುರಿ', 'ನನ್ನ ಹೆಸರು ಮಿಥಾಲಿ', ಎಂಬ ನುಡಿಗಳು ಕೇಳುತ್ತಲೇ ಇದ್ದವು.



ವಿದ್ಯಾರ್ಥಿನಿಯೊಂದಿಗೆ ನಾಗತಿಹಳ್ಳಿ ಚಂದ್ರಶೇಖರ್ ಅವರು ಮಾತುಕತೆ ನಡೆಸಿದರು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷ ಎಂ.ಸಿ.ರಮೇಶ್ ಜತೆಗಿದ್ದರು

ಪ್ರಜಾವಾಣಿ ಚಿತ್ರ

ಕೃಷ್ಣೆಯಿಂದ ಕಾವೇರಿವರೆಗೆ...

ಪೂಜಾ ಕುಣಿತ, ಸೋಮನ ಕುಣಿತದ ಮೇಳದೊಂದಿಗೆ ನಾಡಗೀತೆ. ನಂತರ ತಲೆಯೆತ್ತಿ ಹಾರಾಡಿದ ನಾಡಬಾವುಟ. ಅತ್ತ ಶರಣ–ಶರಣೆಯರ ವಚನಗಳ ಭಿತ್ತಿಪತ್ರ, ಇತ್ತ ಬೇಂದ್ರೆ ಕವನಗಳ ವಾಚನದ ಇಂಪು. ಇನ್ನೊಂದೆಡೆ ರಂಗನತಿಟ್ಟುವಿನ ಬಾನಾಡಿಗಳು ಚಿತ್ರದಲ್ಲಿ ಬಂಧಿಯಾಗಿದ್ದರೆ, ಮತ್ತೊಂದೆಡೆ ಹಂಪಿಯ ಬೋಳುಬಂಡೆಗಳ ಮೇಲೆ ಮಡುಗಟ್ಟಿದ ಗೋಧೂಳಿ ನೋಡುಗರ ಕಣ್ಣುಗಳಿಗೂ ಇಳಿಯುತ್ತಿತ್ತು...

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಕನ್ನಡ ರಾಜ್ಯೋತ್ಸವದ ದಿನ, ಬಿಐಸಿಯಲ್ಲಿ ಕನ್ನಡ ನಾಡು–ನುಡಿ–ನಡೆಯನ್ನು ಕಟ್ಟಿಕೊಡುವ ಯತ್ನದಲ್ಲಿ ರೂಪಿಸಿದ್ದ 'ಕೃಷ್ಣೆಯಿಂದ ಕಾವೇರಿವರೆಗೆ...' ಮೇಳದ ಭಿನ್ನ–ಭಿನ್ನ ಚಿತ್ರಪಟಗಳಿವು.

ಮೇಳಕ್ಕೆ ಬಂದವರಿಗೆ ಕನ್ನಡ ಕಲಿಸುವುದು, ಕನ್ನಡದ ಕವಿ–ಕಾವ್ಯಗಳನ್ನು ಪರಿಚಯಿಸುವುದು, ನೆಲದ ಜನಪದ ಕುಣಿತ, ಕಾಡು–ಬೆಟ್ಟಗಳನ್ನು ತೋರಿಸಿಕೊಡುವ ಹಲವು ಪ್ರದರ್ಶನಗಳು ಮೇಳದಲ್ಲಿದ್ದವು.

ಮೇಳಕ್ಕೆ ಚಾಲನೆ ನೀಡಿದ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು, ನೆರೆದಿದ್ದ ಮಕ್ಕಳ ತಲೆ ನೇವರಿಸಿ ಕನ್ನಡ ನಾಡುನುಡಿಗಳ ವೈಶಿಷ್ಟ್ಯವನ್ನು ವಿವರಿಸಿದರು.'ಕನ್ನಡದ ಸಂಸ್ಕೃತಿಯನ್ನು ಅನ್ಯಭಾಷಿಕರಿಗೆ ಕಲಿಸುವ ಈ ಪ್ರಯತ್ನ ಶ್ಲಾಘನೀಯ. ಇಂತಹ ಹತ್ತಾರು ಕಾರ್ಯಕ್ರಮಗಳು ನಡೆಯಲಿ. ಅನ್ಯಭಾಷಿಕರನ್ನೂ ಕರುನಾಡು ಒಳಗೊಳ್ಳಲಿ' ಎಂದರು. ಕಲಬುರಗಿಯ ಕಲಾ ಮಂಡಳಿಯ ಕಲಾವಿದರ 'ಬೀಸೋ ಹಾಡ', ವಿನಾಯಕ್ ತೊರವಿ ಅವರ ಹಿಂದುಸ್ತಾನಿ ಗಾಯನದ ಮುಂಜಾನೆಯ ರಾಗಗಳು ಗೀತಾಸಕ್ತರ ಹಸಿವು ನೀಗಿಸಿದವು. ದೇಸಿ ಮತ್ತು ದೇಶೀಯ ಕಲಾಪ್ರಕಾರಗಳಿಗೆ ಒಂದೆಡೆಯೇ ವೇದಿಕೆ ಒದಗಿಸುವ ಯತ್ನಕ್ಕೆ ಜನರು ತಲೆದೂಗಿದರು. ಈ ಎಲ್ಲವನ್ನೂ ಕಣ್ತುಂಬಿ–ಕಿವಿ ತುಂಬಿಕೊಳ್ಳುವ ವೇಳೆಗೆ ಬಿಸಿ ಬೇಳೆಯ ಬಾತು, ಕೊಡಗಿನ ಕೋಳಿ ಸಾರು, ಹಿಚುಕಿದ ಬೇಳೆಯ ಗೊಜ್ಜು ಕರೆಯುತ್ತಿತ್ತು.

ನಿಧನ ವಾರ್ತೆ

ವಿಟ್ಲ ಶಂಭು ಶರ್ಮ



ವಿಟ್ಲ (ದಕ್ಷಿಣ ಕನ್ನಡ): ಯಕ್ಷಗಾನ ಕಲಾವಿದ, ತಾಳಮದ್ದಳೆ ಅರ್ಥಧಾರಿ ವಿಟ್ಲ ಶಂಭು ಶರ್ಮ (74) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಉಪನ್ಯಾಸಕರಾಗಿ, ಯಕ್ಷಗಾನ ಅರ್ಥಧಾರಿಯಾಗಿ ಜನಪ್ರಿಯರಾಗಿದ್ದ ಅವರು ಪ್ರಸ್ತುತ ಪುತ್ತೂರು ಸಮೀಪದ ಮುರ ಎಂಬಲ್ಲಿ ವಾಸಿಸುತ್ತಿದ್ದರು. ಸುಬ್ರಹ್ಮಣ್ಯ, ಕದ್ರಿ ಮೊದಲಾದ ಮೇಳಗಳಲ್ಲಿ ಅತಿಥಿ ಕಲಾವಿದರಾಗಿ ಪಾತ್ರ ನಿರ್ವಹಿಸುತ್ತಿದ್ದರು.

'ಮಂಕುತಿಮ್ಮನ ಕಗ್ಗದಲ್ಲಿ ವಚನಗಳ ಅನುಭಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಕುತಿಮ್ಮನ ಕಗ್ಗದಲ್ಲಿ ವಚನಗಳ ಮುಂದುವರಿಕೆ ಕಂಡುಬರುತ್ತದೆ. ಏಕಕಾಲದಲ್ಲಿ ಸಾಮಾಜಿಕ ಸಂಹಿತೆ ಮತ್ತು ಅಧ್ಯಾತ್ಮದ ಅನುಭಾವವನ್ನು ವಚನಗಳು ಕಟ್ಟಿಕೊಡುವಂತೆ ಮಂಕುತಿಮ್ಮನ ಕಗ್ಗವೂ ನಮಗೆ ನೀಡುತ್ತದೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ಡಿವಿಜಿ ಕನ್ನಡ ಗೆಳೆಯರ ಬಳಗ ಕಹಳೆ ಬಂಡೆಯಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಡಿವಿಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

'ಗದ್ಯ ಮತ್ತು ಪದ್ಯಗಳಷ್ಟೇ ಅಲ್ಲದೇ ಪತ್ರಿಕಾ ರಂಗದಲ್ಲಿಯೂ ಕೆಲಸ ಮಾಡಿದ್ದ ಡಿ.ವಿ. ಗುಂಡಪ್ಪ ಹೊಸಗನ್ನಡದ ಬೇಸಾಯಗಾರ' ಎಂದು ಬಣ್ಣಿಸಿದರು.

ಕನ್ನಡ ಶ್ರೀಸಾಮಾನ್ಯರ ಕೂಟದ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ್, ವೀರಲೋಕದ ವೀರಕಪುತ್ರ ಶ್ರೀನಿವಾಸ್, ಮಹಮದೀಯರ ಕನ್ನಡ ವೇದಿಕೆ ಅಧ್ಯಕ್ಷ ಸಮೀವುಲ್ಲಾಖಾನ್, ಬಸವನಗುಡಿ ವರ್ತಕರ ಸಂಘದ ಅಧ್ಯಕ್ಷ ವೆಂಕಟೇಶ್, ನ್ಯೂರೋ ಸರ್ಜನ್ ಡಾ. ಭಾನುಪ್ರಕಾಶ್, ಕೆವಿಕೆಯ ಹರ್ಷ, ಕಾಂಗ್ರೆಸ್ ಮುಖಂಡ ಬಲರಾಮ್, ಬಿಜೆಪಿ ನಾಯಕ ರುದ್ರೇಶ್, ಕನ್ನಡ ಹೋರಾಟಗಾರ್ತಿ ಭಾರತಿ ಗೌಡ, ಗೌಡರ ಸೇನೆಯ ಕೃಷ್ಣೇಗೌಡ, ಡಿವಿಜಿ ಕನ್ನಡ ಬಳಗದ ಟಿ ಶರ್ಟ್ ಜಗದೀಶ ಮುಳಬಾಗಿಲು ಭಾಗವಹಿಸಿದ್ದರು.

ಜಾಕಿ ಸಮೂಹದ ಸೀಮೇಂದ್ರ ಮತ್ತು ಗೆಳೆಯರು ಕನ್ನಡ ಗೀತೆಗಳನ್ನು ಹಾಡಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಪ್ನ ಬುಕ್ ಹೌಸ್‌ನಲ್ಲಿ ಪುಸ್ತಕ ಜಾತ್ರೆ

ಪುಸ್ತಕಗಳ ಸಗಟು ಖರೀದಿಗೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕಗಳ ಸಗಟು ಖರೀದಿಗೆ ರಾಜ್ಯ ಸರ್ಕಾರ ಕ್ರಮ–ಕೈಗೊಳ್ಳಬೇಕು' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಪ್ನ ಬುಕ್ ಹೌಸ್ ಶನಿವಾರ ಆಯೋಜಿಸಿದ್ದ ಪುಸ್ತಕ ಜಾತ್ರೆಯಲ್ಲಿ ಅವರು ಮಾತನಾಡಿದರು.

'ನಾಲ್ಕೈದು ವರ್ಷಗಳಿಂದ ಕನ್ನಡ ಪುಸ್ತಕಗಳ ಸಗಟು ಖರೀದಿ ಆಗಿಲ್ಲ. ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕನ್ನಡ ಸಾಹಿತ್ಯ ಸಮಗ್ರವಾಗಿ ಲಭ್ಯ ಇರಬೇಕು. ಸರ್ಕಾರ ಸಗಟು ಪುಸ್ತಕ ಖರೀದಿಯನ್ನು ಕಾಟಾಚಾರಕ್ಕೆ ಮಾಡಬಾರದು. ನಮ್ಮ ಕನ್ನಡ, ನಮ್ಮ ಸಾಹಿತ್ಯ, ನಮ್ಮ ಸಾಹಿತಿಗಳು ಎನ್ನುವ ಅಕ್ಕರೆಯಿಂದ ಪುಸ್ತಕ ಖರೀದಿಸಬೇಕು' ಎಂದು ಸಲಹೆ ನೀಡಿದರು.

'ಪುಸ್ತಕ ಸಂಸ್ಕೃತಿ ಬೆಳೆದಷ್ಟು ಭಾಷೆ ಸದೃಢವಾಗಿ ಬೆಳೆಯುತ್ತದೆ. ಅನೇಕ ಮಹಾನ್ ಸಾಹಿತಿಗಳು, ಕವಿಗಳು, ಇನ್ನಿತರ ಬರಹಗಾರರು ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ತರಾಸು ಅವರ ದುರ್ಗಾಸ್ತಮಾನ ಕಾದಂಬರಿಯನ್ನು ಅನೇಕ ಸಲ ಓದಿದ್ದೇನೆ. ಈಗ ಮತ್ತೊಮ್ಮೆ ಓದುತ್ತಿದ್ದೇನೆ' ಎಂದು ಹೇಳಿದರು.

'ಇವತ್ತಿನ ಕಾಲಘಟ್ಟದಲ್ಲಿ ಪ್ರಕಾಶನ ಸಂಸ್ಥೆಯನ್ನು ಕಟ್ಟಿ ಬೆಳೆಸುವುದು, ಉಳಿಸಿಕೊಳ್ಳುವುದು ಕಷ್ಟದ ಕೆಲಸ. ಆದರೂ ಕರ್ನಾಟಕದಲ್ಲಿ ಅಸಂಖ್ಯಾತ ಪ್ರಕಾಶನ ಸಂಸ್ಥೆಗಳು ಕನ್ನಡದ ಮೇಲಿನ ಮಮತೆಯಿಂದ ಪ್ರಕಾಶನ ಕಾರ್ಯ ಮಾಡುತ್ತಿವೆ. ಸಪ್ನ ಪುಸ್ತಕ ಮಳಿಗೆ ಈ ನಿಟ್ಟಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

ಸಿಎಂಗೆ ಪತ್ರ: ಸಾರ್ವಜನಿಕ ಗ್ರಂಥಾಲಯಗಳಿಗೆ ಕನ್ನಡ ಪುಸ್ತಕಗಳನ್ನು ಸಗಟು ಖರೀದಿ ಮಾಡುವ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯಸಭೆ ಸದಸ್ಯೆ ಸುಧಾ ಮೂರ್ತಿ, ಸಾಹಿತಿ ಜಾಣಗೆರೆ ವೆಂಕಟರಾಮಯ್ಯ, ನಟ ಅನಿರುದ್ಧ ಜತಕರ, ನಟಿ ಅಂಕಿತ ಅಮರ್, ಸಪ್ನ ಪುಸ್ತಕ ಮಳಿಗೆಯ ನಿತಿನ್ ಶಾ, ದೊಡ್ಡೇಗೌಡ, ಸಾಹಿತಿಗಳಾದ ಎಚ್. ಡುಂಡಿರಾಜ್, ಎಂ.ಎಸ್. ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್ ಉಪಸ್ಥಿತರಿದ್ದರು.



ಸಪ್ನ ಬುಕ್ ಹೌಸ್ ಆಯೋಜಿಸಿದ್ದ ಪುಸ್ತಕ ಜಾತ್ರೆಯಲ್ಲಿ ಎಚ್‌ಡಿ. ಕುಮಾರಸ್ವಾಮಿ ಹಾಗೂ ಸುಧಾಮೂರ್ತಿ ಅವರು ಪರಸ್ಪರ ಕುಶಲೋಪರಿ ವಿಚಾರಿಸಿದರು

ತೋಟಕ್ಕೆ ಕಾಡುಪ್ರಾಣಿಗಳ ದಾಳಿ



ಎಐ ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ...

ಅಡಿಕೆ ಅಥವಾ ತೆಂಗಿನ ಮರವನ್ನು ಪ್ರಾಣಿಗಳು ಮುರಿದುಹಾಕಿದರೆ ಪರಿಹಾರ ಇದೆ. ತೆಂಗಿನ ಕಾಯಿ, ಬಾಳೆಗೊನೆ ನಾಶ ಮಾಡಿದರೆ ಪರಿಹಾರ ಸಿಗುವುದಿಲ್ಲ' ಎನ್ನುತ್ತಾರೆ ರೈತರು.

ರಾಮಚಂದ್ರ ಅವರದ್ದೂ ಇದೇ ಕತೆ. ಸುಮಾರು ಒಂದು ಎಕರೆಯಷ್ಟು ಅಡಿಕೆ ತೋಟವಿದೆ. ತೋಟದ ಸುತ್ತಲಿನ ಗಡಿಯಲ್ಲಿ ತೆಂಗು ಇದ್ದರೆ, ಮನೆಯ ಮುಂದಿನ ಸ್ವಲ್ಪ ಖಾಲಿ ಜಾಗದಲ್ಲಿ ಅಲ್ಪಸ್ವಲ್ಪ ತರಕಾರಿ ಬೆಳೆಯುತ್ತಿದ್ದರು. ಆದರೆ ಕೆಲವು ವರ್ಷಗಳಿಂದ ಬೆಳೆಯಲ್ಲಿ ಅರ್ಧ ಭಾಗವೂ ಕೈಗೆ ಸಿಗುತ್ತಿಲ್ಲ ಎನ್ನುವಂತಾಗಿದೆ.

ಎಲೆಚುಕ್ಕಿ ರೋಗದಿಂದ ಅಡಿಕೆ ಇಳುವರಿ ಕಡಿಮೆಯಾಗಿದೆ. ಈ ಬಾರಿ ವಿಪರೀತ ಮಳೆಯಿಂದಾಗಿ ಕೊಳೆರೋಗವು ಅರ್ಧದಷ್ಟು ಅಡಿಕೆಯನ್ನು ನಾಶಮಾಡಿದೆ. ಬೇಸಿಗೆ ಆರಂಭವಾಗುತ್ತಿದ್ದಂತೆ ಕೋತಿಗಳು ತೋಟಕ್ಕೆ ಲಗ್ಗೆ ಇಡುತ್ತವೆ. ತೆಂಗು, ಕೊಕ್ಕೊ, ಹಲಸು ಎಲ್ಲವನ್ನೂ ಅವು ಅರ್ಧಂಬರ್ಧ ತಿಂದುಕೊಳ್ಳುತ್ತವೆ. ಏನೂ ಸಿಗದಿದ್ದಾಗ, ಅಡಿಕೆ ಹಣ್ಣಾದ ಅಡಿಕೆಗಳನ್ನೂ ಕಿತ್ತು, ಸಿಪ್ಪೆಯಲ್ಲಿರುವ ನೀರನ್ನು ಹೀರಿ ಎಸೆಯುತ್ತವೆ.

'ಮರಗಳ ಮೇಲೆ ಕೋತಿಗಳ ಕಾಟವಾದರೆ ತೋಟದ ನೆಲದಲ್ಲಿ ಕಾಡುಹಂದಿಗಳ ನಿತ್ಯದ ಹೋರಾಟವಿರುತ್ತದೆ. ಮರದಿಂದ ಬಿದ್ದ ತೆಂಗಿನ ಕಾಯಿಯನ್ನು ಕಾಡು ಹಂದಿಗಳು ತಿಂದುಹಾಕುತ್ತವೆ. ಅವುಗಳ ಬಿಟ್ಟರೆ ಮುಳ್ಳು ಹಂದಿಗಳೇ. ಒಟ್ಟಿನಲ್ಲಿ ನಮ್ಮ ಕೈಗೆ ಬರುವುದು ಚಿಪ್ಪು ಮಾತ್ರ' ಎನ್ನುತ್ತಾರೆ ಸುಳ್ಯದ ರೈತ ಗಣೇಶ ಎಂ.

ಕೋತಿಗಳಷ್ಟೇ ಅಲ್ಲ, ಈಚಿನ ಒಂದೆರಡು ವರ್ಷಗಳಲ್ಲಿ ಕೆಂಪಳಿಲುಗಳ ಕಾಟವೂ ಆರಂಭವಾಗಿದೆ. ಅವು ತೆಂಗಿನ ಕಾಯಿಗೆ ಸುಂದರ ರಂಧ್ರ ಕೊರೆದು, ಎಳನೀರು ಹೀರಿ ಹೋಗಿರುತ್ತವೆ. ಕಾಯಿ ಹಾಳಾಗಿದೆ ಎಂಬುದು ನಮ್ಮ ಗಮನಕ್ಕೆ ಬರುವುದು ಅದು ನೆಲಕ್ಕೆ ಬಿದ್ದಾಗಲೇ ಎನ್ನುತ್ತಾರೆ ಅವರು.

'ಎರಡು ಎಕರೆ ತೋಟದಲ್ಲಿ ಸಾಂಪ್ರದಾಯಿಕ ಉಪಬೆಳೆಯಾಗಿ ಬಾಳೆ ಬೆಳೆದಿದ್ದೇನೆ. ಸರಿಯಾಗಿ ಬೆಳೆ ಬಂದರೆ ಒಂದೆರಡು ಕ್ವಿಂಟಲ್ ಬಾಳೆ ಗೊನೆಗಳನ್ನಾದರೂ ಮಾರಬಹುದು. ಆದರೆ ಕೆಲ ವರ್ಷ ನಾವು ಮಕ್ಕಳಿಗೆ ಕೊಡಲು ಸಹ ಸಂಬಂಧಿಕರ ಮನೆಯಿಂದ ಬಾಳೆ ಗೊನೆ ತರಬೇಕಾಯಿತು. ಕೋತಿಗಳ ಕಾಟದಿಂದ ಒಂದೇ ಒಂದು ಬಾಳೆ ಗೊನೆಯೂ ನಮಗೆ ಸಿಕ್ಕಿಲ್ಲ' ಎಂದು ಮುಂಡಾಜೆಯ ರೈತ ಹರ್ಷ ಹೇಳಿದರು.

ಹಿಂಡುಹಿಂಡಾಗಿ ತೋಟಕ್ಕೆ ಬರುವ ಕೋತಿಗಳು ಒಂದೇ ದಿನದಲ್ಲಿ ತೋಟವನ್ನು ರಣಾಂಗಣವನ್ನಾಗಿ ಮಾಡಿಬಿಡುತ್ತವೆ. ಮೊದಮೊದಲು ಪಟಾಕಿ ಅಥವಾ ಮಂಕಿ ಗನ್‌ಗೆ ಹೆದರಿ ಓಡುತ್ತಿದ್ದವು. ಈಗ ಅವುಗಳಿಗೆ ಭಯ ಇಲ್ಲ. ಬಂದರೆ, ನಾಲ್ಕಾರು ದಿನಗಳ ಕಾಲ ತೋಟದಲ್ಲೇ ಇದ್ದು ಹೋಗುತ್ತವೆ ಎಂದು ಪುತ್ತೂರು ತಾಲ್ಲೂಕು ಈಶ್ವರಮಂಗಲ ಭಾಗದ ರೈತರು ಹೇಳುತ್ತಾರೆ.

'ಐದು ವರ್ಷಗಳ ಹಿಂದೆ ಮನೆಯ ಖರ್ಚುವೆಚ್ಚಕ್ಕೆ ಬೇಕಾದಷ್ಟು ಬಳಸಿ, ನೂರು ಲೀಟರ್‌ನಷ್ಟು ಕೊಬ್ಬರಿ ಎಣ್ಣೆಯನ್ನೂ ಮಾಡಿಸಿ, ಸುಮಾರು ಎಂಟು ಸಾವಿರದಷ್ಟು ತೆಂಗಿನ ಕಾಯಿ ಮಾರಾಟ ಮಾಡಿದ್ದೆ. ತೋಟ, ತೆಂಗಿನ ಮರಗಳು ಈಗಲೂ ಅಷ್ಟೇ ಇವೆ. ಆದರೆ ಈಚಿನ ಎರಡು ವರ್ಷಗಳಿಂದ ತೆಂಗಿನ ಕಾಯಿ ಮಾರಾಟ ದೂರದ ಮಾತು, ಮನೆಯ ಖರ್ಚಿಗೆ ಬೇಕಾದಷ್ಟು ಕೊಬ್ಬರಿ ಎಣ್ಣೆ ಮಾಡಿಸಲೂ ಆಗುತ್ತಿಲ್ಲ' ಎನ್ನುತ್ತಾರೆ ಈಶ್ವರಮಂಗಲದ ರೈತ ಶಿವಪ್ರಸಾದ್.

ಪ್ರತಿ ವರ್ಷ ಮುಂಗಾರಿನ ಗಾಳಿ ಮಳೆಗೆ ಹಳೆಯ ತೋಟದಲ್ಲಿ ಐದಾರು ಅಡಿಕೆ ಗಿಡಗಳಾದರೂ ಮುರಿದು ಬೀಳುವುದು ಸಾಮಾನ್ಯ. ಹೀಗೆ ಮುರಿದ ಗಿಡದ ಜಾಗದಲ್ಲಿ ಹೊಸ ಗಿಡಗಳನ್ನು ನಾಟಿ ಮಾಡಲೂ ಸಾಧ್ಯವಾಗುತ್ತಿಲ್ಲ. ನಾಟಿ ಮಾಡಿದ ವಾರದೊಳಗೆ ಹಂದಿಗಳು ಅವುಗಳನ್ನು 'ಅಡಿಮೇಲು' ಮಾಡಿರುತ್ತವೆ. ಅಡಿಕೆಗೆ ಮಾತ್ರವಲ್ಲ, ಅಡಿಕೆ ತೋಟದ ಉಪ ಬೆಳೆಗಳಿಗೂ ಈ ಸಮಸ್ಯೆ ಇದೆ. ಹಂದಿಗಳಿಗೆ ಏನೂ ಸಿಗದಿದ್ದರೆ, ಇರುವ ಬಾಳೆ ಗಿಡಗಳನ್ನೂ ಉರುಳಿಸುತ್ತವೆ. ಹೊಸದಾಗಿ ಬಾಳೆ ನೆಟ್ಟರೆ ಉಳಿಸಿಕೊಳ್ಳಲು ಹರಸಾಹಸ ಮಾಡಬೇಕು ಎನ್ನುತ್ತಾರೆ ಹರ್ಷ.

ಅಡಿಕೆ, ತೆಂಗಿನ ಗಿಡದ ಬುಡಕ್ಕೆ ಹಾಕಿದ ಗೊಬ್ಬರವನ್ನು ಹಂದಿಗಳು ರಾತ್ರಿ ಬೆಳಗಾಗುವಷ್ಟರಲ್ಲಿ ಚಲ್ಲಾಪಿಲ್ಲಿ ಮಾಡಿರುತ್ತವೆ. ಅಡಿಕೆ ತೋಟದಲ್ಲಿ ಉಪ ಬೆಳೆಯಾಗಿ ಕೊಕ್ಕೊ ಬೆಳೆವವರ ಸಂಖ್ಯೆ ಒಂದು ಕಾಲದಲ್ಲಿ ಬಹಳಷ್ಟಿತ್ತು. ದರ ಕುಸಿತ ಹಾಗೂ ಇತರ ವಿವಿಧ ಕಾರಣಗಳಿಂದ ಅನೇಕರು ಈ ಬೆಳೆಯನ್ನು ಕೈಬಿಟ್ಟಿದ್ದಾರೆ. 'ಬಂದಷ್ಟು ಬರಲಿ' ಎಂಬ ಕಾರಣಕ್ಕೆ ಕೆಲವರು ಗಿಡಗಳನ್ನು ಕಡಿಯದೆ ಬಿಟ್ಟಿದ್ದಾರೆ. ಈಚಿನ ದಿನಗಳಲ್ಲಿ ಕೊಕ್ಕೊಗೆ ಉತ್ತಮ ದರ ಲಭಿಸುತ್ತಿದೆ. ಆದರೆ ಅಳಿಲುಗಳಿಂದ ಹಣ್ಣುಗಳನ್ನು ರಕ್ಷಿಸುವುದು ಕಷ್ಟವಾಗುತ್ತಿದೆ. ಹಣ್ಣುಗಳಿಗೆ ರಂಧ್ರ ಕೊರೆಯುವ ಅಳಿಲುಗಳು, ಒಳಗಿನ ತಿರುಳು ತಿಂದು ನಾಶಮಾಡುತ್ತಿವೆ. ಗಿಡದಲ್ಲಿ ಉಳಿಯುವುದು ಸಿಪ್ಪೆ ಮಾತ್ರ. ಶೇ 15ರಿಂದ 20ರಷ್ಟು ಹಣ್ಣುಗಳು ಹೀಗೆ ನಾಶವಾಗುತ್ತಿವೆ ಎಂದು ರೈತರು ಹೇಳುತ್ತಾರೆ.

ನವಿಲಿನ ರುದ್ರ ನರ್ತನ: ಕಾರ್ಕಳ, ಸುಬ್ರಹ್ಮಣ್ಯ, ಕಡಬ, ಸುಳ್ಯ ಮುಂತಾದ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ನಿತ್ಯವೂ ನವಿಲುಗಳು ಕಾಣಿಸುವುದು ಸಾಮಾನ್ಯ. ಈಚಿನ ಕೆಲವು ವರ್ಷಗಳಿಂದ ಅವುಗಳ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ. ಮುಂಜಾನೆ ಎದ್ದು ಮನೆಯ ಬಾಗಿಲು ತೆರೆದರೆ ಅಂಗಳದಲ್ಲಿ ನವಿಲುಗಳು ನರ್ತಿಸುವುದನ್ನು ರೈತರು ನೋಡುತ್ತಿದ್ದಾರೆ. ಕಾಳುಜೋಳ, ಮುಸುಕಿನ ಜೋಳ ಬೆಳೆಯುವ ಮಧ್ಯ ಕರ್ನಾಟಕದ ಹೊಲಗಳಲ್ಲೂ ನವಿಲಿನ ಹಾವಳಿ ಹೆಚ್ಚಾಗಿದೆ.


ಆರಂಭದಲ್ಲಿ ಈ ದೃಶ್ಯದಿಂದ ಪುಳಕಿತರಾಗಿದ್ದ ರೈತರಿಗೆ ಈಗ ನವಿಲುಗಳ ನರ್ತನ ಖುಷಿ ಕೊಡುತ್ತಿಲ್ಲ. ನವಿಲುಗಳ ಸಂತತಿ ಹೆಚ್ಚಾಗಿರುವುದರಿಂದ ತರಕಾರಿ ಬೆಳೆ ಉಳಿಸಿಕೊಳ್ಳುವುದು ಕಷ್ಟವಾಗುತ್ತಿದೆ ಎನ್ನುತ್ತಾರೆ ರೈತರು. ಬೆಳೆ ಮಾತ್ರವಲ್ಲ, ಗಿಡಗಳ ಚಿಗುರನ್ನೇ ನವಿಲುಗಳು ತಿಂದು ನಾಶಮಾಡುತ್ತಿವೆ. ಅವರೆ, ತೊಗರಿ, ಮೆಣಸಿನಕಾಯಿ, ಟೊಮೆಟೊ... ಹೀಗೆ ನವಿಲುಗಳು ತಿನ್ನದ ಅಥವಾ ಹಾಳು ಮಾಡದೆ ಇರುವ ಬೆಳೆಯೇ ಇಲ್ಲ. ಮುಸುಕಿನ ಜೋಳ ಬಿತ್ತನೆ ಮಾಡಿ ಕಾಳು ಮೊಳಕೆಯೊಡೆದು ಪೈರು ಆಗುವವರೆಗೂ ಒಂದು ವಾರ ರೈತರು ಹೊಲದಲ್ಲೇ ಕಾವಲು ನಿಂತರಷ್ಟೇ ಜೋಳ ಬೆಳೆಯಲು ಸಾಧ್ಯ. ಜನರ ಓಡಾಟ ಹೆಚ್ಚಾಗಿ ಇಲ್ಲದ ಪ್ರದೇಶದಲ್ಲಿ ಹಿಂಡು ಹಿಂಡಾಗಿ ಬರುವ ನವಿಲುಗಳು ರಾಗಿ ತೆನೆಗಳನ್ನು ತಿಂದು ಹಾಕುತ್ತಿವೆ.

ಪ್ರಾಣಕ್ಕೂ ಎರವಾಗುವ ಕಾಡುಕೋಣ: ಚಿಕ್ಕಮಗಳೂರು ಜಿಲ್ಲೆಯ ವಿವಿಧ ಭಾಗಗಳು, ಹಾಸನ ಜಿಲ್ಲೆಯ ಆಲೂರು, ಸಕಲೇಶಪುರ ಭಾಗ, ದಕ್ಷಿಣ ಕನ್ನಡದ ಕಡಬ, ಸುಳ್ಯ, ಸುಬ್ರಹ್ಮಣ್ಯ ಭಾಗದಲ್ಲಿ ಕಾಡುಕೋಣಗಳ ಕಾಟವೂ ಇದೆ. ಇವು ಕೃಷಿಗೆ ಹಾನಿ ಮಾಡುವುದರ ಜೊತೆಗೆ ರೈತರ ಪ್ರಾಣಕ್ಕೂ ಎರವಾಗುತ್ತಿವೆ.

ಜೋಡಿಯಾಗಿ ನಾಡಿಗೆ ಬರುವ ಕಾಡುಕೋಣಗಳು ರೈತರ ತೋಟಗಳಲ್ಲೇ ಓಡಾಡುತ್ತಿರುತ್ತವೆ. ಅಕಸ್ಮಾತ್ ಮನುಷ್ಯರು ಎದುರಾದರೆ ಅವರ ಮೇಲೆ ದಾಳಿ ನಡೆಸುತ್ತವೆ. ಕಾಡುಕೋಣದ ದಾಳಿಗೆ ಕಾಫಿ ಬೆಳೆಗಾರ ಮೃತಪಟ್ಟ ಘಟನೆ ಮೂಡಿಗೆರೆ ತಾಲ್ಲೂಕು ದುರ್ಗದಹಳ್ಳಿ ಗ್ರಾಮದಲ್ಲಿ ತಿಂಗಳ ಹಿಂದೆಯಷ್ಟೇ ಸಂಭವಿಸಿದೆ. ಈ ಹಿಂದೆಯೂ ಹಲವರು ಸತ್ತಿದ್ದಾರೆ, ಅನೇಕ ಮಂದಿ ಗಾಯಗೊಂಡಿದ್ದಾರೆ.

'ತೆಂಗು ಬೆಳೆಯಲ್ಲಿ ಕಾಲು ಭಾಗದಷ್ಟೂ ಕೈ ಸೇರುವುದಿಲ್ಲ. ಅಡಿಕೆಯಲ್ಲಿ ಬಹುಪಾಲು ರೋಗ ರುಜಿನದಿಂದ ಹಾಗೂ ಒಂದಿಷ್ಟು ಪಾಲು ಕೋತಿಗಳ ದಾಳಿಯಿಂದ ಹಾಳಾಗುತ್ತಿದೆ, ಅಡಿಕೆ ತೋಟದ ಉಪ ಬೆಳೆಗಳಿಗೆ ಕಾಡುಹಂದಿ, ಮುಳ್ಳುಹಂದಿ, ಅಳಿಲುಗಳ ಕಾಟ. ತರಕಾರಿಯನ್ನು ನವಿಲುಗಳು ಉಣ್ಣುತ್ತವೆ... ಹೀಗಿರುವಾಗ ನಾವು ಮಾಡುವುದಾದರೂ ಏನು' ಎಂಬುದು ರೈತರ ಪ್ರಶ್ನೆಯಾಗಿದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.
ಪೂರಕ ಮಾಹಿತಿ: ಜಿ.ಎಚ್. ವೆಂಕಟೇಶ್



ತೋಟದೊಳಗೆ ಕಾಡುಕೋಣಗಳ ಓಡಾಟ

ಕಾಡೇ ಸಮಸ್ಯೆ, ಕಾಡೇ ಪರಿಹಾರ!

'ಕಾಡಿನಲ್ಲಿ ಪ್ರಾಣಿಗಳಿಗೆ ಆಹಾರ ಸಿಗದ ಕಾರಣ ಅವು ಆಹಾರ ಅರಸಿಕೊಂಡು ನಾಡಿಗೆ ಬರುತ್ತಿವೆ, ಬೆಳೆ ಹಾನಿ ಮಾಡುತ್ತಿವೆ' ಎಂಬುದು ಸಾಮಾನ್ಯ ಗ್ರಹಿಕೆ. ಕೋತಿಗಳು ಮತ್ತು ಆನೆಗಳ ವಿಚಾರದಲ್ಲಿ ನಿಜ ಇರಬಹುದು. ಆದರೆ ನಮ್ಮ ಭಾಗದಲ್ಲಿ ಅಡಿಕೆ ತೋಟಗಳ ಸುತ್ತ ಕಾಡು ಬೆಳೆದಿರುವುದೇ ಪ್ರಾಣಿಗಳ ಹಾವಳಿಗೆ ಕಾರಣ ಎನ್ನುತ್ತಾರೆ ಕಾಸರಗೋಡಿನ ರೈತ ವೆಂಕಟರಮಣ ಭಟ್.

ಹಿಂದೆ ಅಡಿಕೆ ಮರಗಳಿಗೆ ವರ್ಷ– ಎರಡು ವರ್ಷಕ್ಕೊಮ್ಮೆ ಹಸಿ ಸೊಪ್ಪನ್ನು ಗೊಬ್ಬರವಾಗಿ ಕೊಡುವ ಸಂಪ್ರದಾಯವಿತ್ತು. ತೋಟದ ಸುತ್ತಮುತ್ತಲಿನ ಕುಮ್ಕಿ ಜಾಗದಲ್ಲಿದ್ದ ಪೊದೆ, ಮರಗಳನ್ನು ಸವರಿ ಸೊಪ್ಪನ್ನು ಅಡಿಕೆ, ತೆಂಗಿನ ಮರದ ಬುಡಕ್ಕೆ ಹಾಕಲಾಗುತ್ತಿತ್ತು. ಇದರಿಂದಾಗಿ ಎರಡು ಮೂರು ವರ್ಷಕ್ಕೊಮ್ಮೆ ಕಾಡು ಸ್ವಚ್ಛವಾಗುತ್ತಿತ್ತು.

ಅಲ್ಲದೆ, ಕಾಡುಗಳಲ್ಲಿ ಗೇರು ಬೀಜ (ಗೋಡಂಬಿ) ಬೆಳೆಯುತ್ತಿದ್ದುದರಿಂದ ಜನರ ಓಡಾಟ ನಿತ್ಯ ನಿರಂತರವಾಗಿರುತ್ತಿತ್ತು. ಆದರೆ ಈಗ ಕಾರ್ಮಿಕರ ಕೊರತೆಯಿಂದ ಸೊಪ್ಪು ಕಡಿದು ತೋಟದವರೆಗೆ ತರುವುದೇ ದುಬಾರಿಯಾಗುತ್ತದೆ. ಇದಕ್ಕಿಂದ ಅಗ್ಗದ ದರಕ್ಕೆ ರಸಗೊಬ್ಬರ, ಕೋಳಿ, ಕುರಿ ಗೊಬ್ಬರ ಲಭಿಸುವುದರಿಂದ ಅಡಿಕೆ– ತೆಂಗಿಗೆ ಹಸಿ ಸೊಪ್ಪು ಕೊಡುವುದನ್ನೇ ರೈತರು ಬಿಟ್ಟಿದ್ದಾರೆ. ಗೋಡಂಬಿ ಕೃಷಿಯೂ ಬಹುತೇಕ ನಾಶವಾಗಿರುವುದರಿಂದ ತೋಟಗಳ ಅಕ್ಕಪಕ್ಕದ ಕುರುಚಲು ಕಾಡಿನಲ್ಲಿ ಮನುಷ್ಯ ಸಂಚಾರ ಇಲ್ಲದಂತಾಗಿದೆ. ಪರಿಣಾಮ, ಕಾಡುಹಂದಿ ಸೇರಿದಂತೆ ಎಲ್ಲಾ ಪ್ರಾಣಿಗಳಿಗೆ ಅವು ಆಶ್ರಯ ತಾಣಗಳಾಗಿವೆ. ಆಶ್ರಯಕ್ಕೆ ಕಾಡು, ಹೊಟ್ಟೆಪಾಡಿಗೆ ತೋಟಗಳು... ಅವುಗಳ ಬದುಕು ಈಗ ನಮಗಿಂತ ಸುಲಭವಾಗಿದೆ ಎನ್ನುತ್ತಾರೆ ರೈತರು.

ಇದನ್ನು ತೋಟಗಾರಿಕಾ ಇಲಾಖೆಯವರು ಒಪ್ಪುವುದಿಲ್ಲ. 'ಕುಮ್ಕಿ ಜಮೀನಿನಲ್ಲಿ ಕೃಷಿಗೆ ಪೂರಕವಾಗುವ ಮತ್ತು ಹಣ್ಣುಗಳನ್ನು ಕೊಡುವ ಗಿಡಗಳನ್ನು ಬೆಳೆಸಬೇಕು ಎಂಬುದು ಉದ್ದೇಶ. ಹೀಗೆ ಮಾಡಿದರೆ ಕಾಡು ಪ್ರಾಣಿಗಳು ತೋಟಗಳಿಗೆ ಬರುವುದಿಲ್ಲ. ಕಾಡಿನಲ್ಲಿ ಆಹಾರ ಸಿಕ್ಕರೆ ಯಾವುದೇ ಕಾಡು ಪ್ರಾಣಿ ತೋಟಗಳಿಗೆ ಬಂದು ಹಾನಿ ಮಾಡುವುದಿಲ್ಲ. ಆದರೆ ರೈತರು ಕುಮ್ಕಿ ಜಮೀನಿನಲ್ಲೂ ಕಾಡು ಕಡಿದು ಅಡಿಕೆ, ರಬ್ಬರ್ ತೋಟ ಮಾಡಿದ್ದಾರೆ. ಇತ್ತ ಅರಣ್ಯದಲ್ಲೂ ಹಣ್ಣಿನ ಗಿಡಗಳು ಇಲ್ಲದಿರುವುದರಿಂದ ಆಹಾರಕ್ಕಾಗಿ ಪ್ರಾಣಿಗಳು ತೋಟಗಳಿಗೆ ಬರುತ್ತಿವೆ' ಎಂದು ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

> **ಬೆಟ್ಟದ ತಪ್ಪಲು, ಕೆರೆ ಅಂಚಿಗಷ್ಟೇ ಸೀಮಿತವಾಗಿದ್ದ ನವಿಲುಗಳು ಈಗ ಗ್ರಾಮದ ಅರಳಿ ಕಟ್ಟೆವರೆಗೂ ಬರುತ್ತಿವೆ. ನವಿಲುಗಳ ಹಾವಳಿಯಿಂದ ಬೆಳೆಗಳನ್ನು ಯಾವ ರೀತಿ ರಕ್ಷಣೆ ಮಾಡಿಕೊಳ್ಳಬೇಕು ಎನ್ನುವುದೇ ಈಗ ಬಯಲುಸೀಮೆ ಜಿಲ್ಲೆಗಳ ರೈತರಿಗೆ ಸವಾಲಾಗಿದೆ. ರೈತರ ತಾಳ್ಮೆಯ ಕಟ್ಟೆ ಒಡೆಯುವ ಮುನ್ನ ಅರಣ್ಯ ಇಲಾಖೆ ಕ್ರಮಕ್ಕೆ ಮುಂದಾಗಬೇಕು**
> **ಮುತ್ತೇಗೌಡ,** ರೈತ, ತಿಪ್ಪೂರು ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು

> **ಕಾಡಿನಲ್ಲಿ ರಾತ್ರಿ ಹೊತ್ತು ಮಂಗಗಳ ಬೇಟೆಯಾಡುವ ಚಿರತೆ, ಗಿಡುಗ, ಹೆಬ್ಬಾವುಗಳ ಸಂಖ್ಯೆ ಕಡಿಮೆ ಆಗಿದೆ. ಹೀಗಾಗಿ ಮಂಗಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕಾಡಿನಲ್ಲಿ ಹಣ್ಣು, ಕಾಯಿ, ಎಲೆ, ಚಿಗುರು, ತೊಗಟೆಯ ಸಸ್ಯ ವೈವಿಧ್ಯ ಇಲ್ಲದೇ ಅಕೇಶಿಯಾ, ನೀಲಗಿರಿ ನೆಡುತೋಪು ಹೆಚ್ಚುತ್ತಿರುವುದು ಮಂಗಗಳು ತೋಟಗಳಿಗೆ ನುಗ್ಗಲು ಕಾರಣ**
> **ಅಖಿಲೇಶ್ ಚಿಪ್ಪಳಿ,** ಪರಿಸರವಾದಿ

> **ಮಲೆನಾಡಿನಲ್ಲಿ ಮಂಗಗಳ ಉಪಟಳ ತಪ್ಪಿಸಲು ಮಂಕಿ ಪಾರ್ಕ್ ಸ್ಥಾಪಿಸಲು ಸಾಗರ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ಐದು ಕಡೆ ಜಾಗ ಗುರುತಿಸಿದ್ದೆವು. ಸ್ಥಳೀಯವಾಗಿ ವಿರೋಧ ವ್ಯಕ್ತವಾದ ಕಾರಣ ಯೋಜನೆ ಕೈಬಿಟ್ಟಿದ್ದೇವೆ**
> **ಮೋಹನ್‌ಕುಮಾರ್,** ಸಾಗರ ವಿಭಾಗದ ಡಿಸಿಎಫ್

> **ಹಿಂದೆ ಪ್ರತಿ ಹಳ್ಳಿಯಲ್ಲೂ ಒಂದಷ್ಟು ಬಯಲು ಪ್ರದೇಶ ಇರುತ್ತಿತ್ತು. ಅಲ್ಲಿ ಬೇರೆಬೇರೆ ಹಣ್ಣಿನ ಗಿಡಗಳಿರುತ್ತಿದ್ದವು. ಆ ಪ್ರದೇಶಗಳೆಲ್ಲ ಈಗ ಅಡಿಕೆ, ತೆಂಗಿನ ತೋಟಗಳಾಗಿವೆ. ಕಾಡುಪ್ರಾಣಿಗಳ ಸಂತತಿಯೂ ಹಲವು ಪಟ್ಟು ಹೆಚ್ಚಿದೆ. ಇದರಿಂದ ಅವುಗಳನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ**
> **ಕೆ. ಪ್ರವೀಣ,** ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ, ಮಂಗಳೂರು



ಅಡಿಕೆ ಮರದ ಬುಡವನ್ನು ಹಂದಿಗಳು ಬಗೆದಿಟ್ಟಿವೆ

ಮಂಕಿ ಪಾರ್ಕ್: ಅವೈಜ್ಞಾನಿಕವೇ?

ಒಂದೆರಡು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಭಾಗದಲ್ಲಿ ಕೃಷಿಗೆ ಹಾನಿ ಉಂಟುಮಾಡುವ ಕೋತಿಗಳನ್ನು ಹಿಡಿದು ಸ್ಥಳಾಂತರಿಸುವ ಅಕ್ರಮ ದಂಧೆ ಆರಂಭವಾಗಿತ್ತು. ರೈತರಿಂದ ₹ 8–10 ಸಾವಿರ ಪಡೆದು, ಕೋತಿಗಳನ್ನು ಬೋನಿನಲ್ಲಿ ಸೆರೆಹಿಡಿದು ಚಾರ್ಮಾಡಿ ಘಾಟಿಗೆ ಒಯ್ದು ಬಿಡಲಾಗಿತ್ತು ('ಘಾಟಿಯಲ್ಲಿ ಬಿಟ್ಟಿದ್ದೇವೆ' ಎಂದು ಹಿಡಿದವರು ನಂಬಿಸಿದ್ದರು). ಹೀಗೆ ಹಣ ಕೊಟ್ಟು ಕೋತಿಗಳನ್ನು ಸಾಗಿಸಿದರೂ, ಕೆಲವೇ ದಿನಗಳಲ್ಲಿ ಅಷ್ಟೇ ಕೋತಿಗಳು ಮತ್ತೆ ತೋಟಕ್ಕೆ ಲಗ್ಗೆ ಇಡುತ್ತಿದ್ದವು. ಇದರಿಂದಾಗಿ ಕೋತಿಗಳನ್ನು ಹಿಡಿದವರು ಸ್ವಲ್ಪವೇ ದೂರದಲ್ಲಿ ಅವುಗಳನ್ನು ಬಿಟ್ಟಿರಬಹುದು ಎಂಬ ಶಂಕೆ ರೈತರಲ್ಲಿ ಮೂಡಿದ್ದರಿಂದ ಇಂಥವರಿಗೆ ಹಣ ಕೊಡುವುದನ್ನು ರೈತರು ನಿಲ್ಲಿಸಿದ್ದಾರೆ.

ಇದರ ಮಧ್ಯದಲ್ಲೇ ಕಡಬ ತಾಲ್ಲೂಕಿನ ನೆಟ್ಟಣ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ 'ಮಂಕಿ ಪಾರ್ಕ್' ಮಾಡುವ ಬಗ್ಗೆ ಸರ್ಕಾರಿ ಮಟ್ಟದಲ್ಲಿ ಚಿಂತನೆ ನಡೆದಿತ್ತು. ರಕ್ಷಿತ ಅರಣ್ಯದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸುವುದೇ ಈ ಯೋಜನೆ. ಅರಣ್ಯದಲ್ಲೇ ಆಹಾರ ಸಿಕ್ಕರೆ ಕೋತಿಗಳು ತೋಟಕ್ಕೆ ಬರುವುದಿಲ್ಲ ಎಂಬುದು ನಂಬಿಕೆ.

ಶಿವಮೊಗ್ಗ ಜಿಲ್ಲೆಯಲ್ಲಿ ₹6.25 ಕೋಟಿ ವೆಚ್ಚದಲ್ಲಿ 'ಮಂಕಿ ಪಾರ್ಕ್' ನಿರ್ಮಿಸಲು ಸರ್ಕಾರ ಉದ್ದೇಶಿಸಿತ್ತು. ಅದಕ್ಕಾಗಿ ಸಾಗರ ತಾಲ್ಲೂಕಿನ ತಲಕಳಲೆ, ಹೊಸನಗರ ತಾಲ್ಲೂಕಿನ ನಿಟ್ಟೂರು– ನಾಗೋಡಿ, ಸಂಪೇಕಟ್ಟೆ– ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತ್ತಿಕೈ ಭಾಗದ 170 ಎಕರೆ, ಮಾಸ್ತಿಕಟ್ಟೆಯ ವಾರಾಹಿ ಯೋಜನಾ ಪ್ರದೇಶ ಹಾಗೂ ಶರಾವತಿ ಹಿನ್ನೀರಿನ ನಡುಗಡ್ಡೆಗಳಲ್ಲಿ ಜಾಗ ಗುರುತಿಸಲಾಗಿತ್ತು.

ಆದರೆ, ಮಂಗಗಳನ್ನು ಒಂದೆಡೆ ಹಿಡಿದಿಡಲು ಸಾಧ್ಯವಿಲ್ಲ. ಯೋಜನೆ ಅವಾಸ್ತವಿಕ ಎಂಬ ಟೀಕೆಗಳು ಎದುರಾದವು. ಹೀಗಾಗಿ ಅರಣ್ಯ ಇಲಾಖೆ ಮಂಕಿಪಾರ್ಕ್ ಯೋಜನೆಯನ್ನು ಕೈಬಿಟ್ಟಿದೆ.

'ಹಂದಿ ಕೊಲ್ಲಲು ಅವಕಾಶ ಇದೆ'

ಕೃಷಿಗೆ ಹಾನಿ ಮಾಡುವ ಕಾಡು ಹಂದಿಗಳನ್ನು ಕೊಲ್ಲಲು ಕೇರಳದಲ್ಲಿ ಕೆಲವು ನಿಬಂಧನೆಗಳಡಿ ಪರವಾನಗಿ ನೀಡಲಾಗಿದೆ. ಅದೇ ರೀತಿ ಇಲ್ಲಿಯೂ ಅವಕಾಶ ನೀಡಬೇಕು ಎಂದು ಈ ಭಾಗದ ರೈತರು ಹಲವು ಬಾರಿ ಒತ್ತಾಯಿಸಿದ್ದಾರೆ.

'ಕೇರಳ ಮಾದರಿ' ಇಲ್ಲಿ ಅವಕಾಶ ಇಲ್ಲದಿದ್ದರೂ ಹಂದಿಗಳನ್ನು ಕೊಲ್ಲಲು ಅವಕಾಶವಿದೆ ಎನ್ನುತ್ತಾರೆ ಡಿಸಿಎಫ್ಒ ಆ್ಯಂಟನಿ.

'ಸತತವಾಗಿ ಕಾಡುಹಂದಿಗಳು ಬಂದು ಬೆಳೆ ನಾಶ ಮಾಡುತ್ತಿದ್ದರೆ, ಅರಣ್ಯ ಇಲಾಖೆಗೆ ರೈತರು ಮಾಹಿತಿ ನೀಡಬೇಕು. ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸುತ್ತಾರೆ. ಹಂದಿಗಳು ನಿಜವಾಗಿಯೂ ಅಪಾಯಕಾರಿ, ಭಾರಿ ಪ್ರಮಾಣದಲ್ಲಿ ಬೆಳೆ ನಾಶ ಮಾಡುತ್ತವೆ ಎಂಬುದು ಖಚಿತವಾದರೆ ಅವುಗಳ ಹತ್ಯೆಗೆ ಪರವಾನಗಿ ನೀಡಲಾಗುತ್ತದೆ. ಆದರೆ ಸೂಚಿಸಿದ ಹಂದಿಗಳನ್ನಷ್ಟೇ ಕೊಲ್ಲಬಹುದು. ಬೇರೆ ಹಂದಿಗಳ ಬೇಟೆಗೆ ಅವಕಾಶ ಇರುವುದಿಲ್ಲ' ಎಂದು ಅವರು ತಿಳಿಸಿದರು.

ಕೃಷಿಗೆ ಹಾನಿ ಉಂಟುಮಾಡುವ ಕೋತಿ ಅಥವಾ ಇನ್ನಿತರ ಪ್ರಾಣಿಗಳನ್ನು ಹಿಡಿದು ಸ್ಥಳಾಂತರಿಸುವುದು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ. ಕೆಲವು ನಿಯಮಾವಳಿಗಳಿಗೆ ಒಳಪಟ್ಟು ಅವರು ಆ ಕಾರ್ಯ ಮಾಡಬಹುದು. ಆದರೆ ಅಂಥ ಪರಿಣತರು ಮತ್ತು ಅದಕ್ಕೆ ಬೇಕಾದಷ್ಟು ಸಂಪನ್ಮೂಲ ಗ್ರಾಮ ಪಂಚಾಯಿತಿಯವರಲ್ಲಿ ಇರುವುದಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

'ಪರಿಹಾರ ಕುರಿತು ತಪ್ಪು ಕಲ್ಪನೆ'

'ಆನೆ ಹಾವಳಿ ಬಿಟ್ಟು ಬೇರೆ ಕಾಡು ಪ್ರಾಣಿಗಳು ಮಾಡುವ ಹಾನಿಗೆ ಪರಿಹಾರ ಇಲ್ಲ ಎಂಬುದು ತಪ್ಪು ಕಲ್ಪನೆ. ಈ ವರೆಗೆ ಒಂದು ಕೋಟಿ ರೂಪಾಯಿಗೂ ಹೆಚ್ಚಿನ ಪರಿಹಾರವನ್ನು ಅರಣ್ಯ ಇಲಾಖೆಯಿಂದ ರೈತರಿಗೆ ನೀಡಲಾಗಿದೆ' ಎಂದು ದಕ್ಷಿಣ ಕನ್ನಡ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಆ್ಯಂಟನಿ ಮರಿಯಪ್ಪ ಹೇಳುತ್ತಾರೆ.

ಯಾವುದೇ ಕಾಡು ಪ್ರಾಣಿ ಗಿಡಗಳಿಗೆ ಹಾನಿ ಮಾಡಿದರೆ, ಬಾಳೆ ಗಿಡಗಳನ್ನು ನಾಶ ಮಾಡಿದ್ದರೆ ರೈತರು ಇಲಾಖೆಗೆ ಮಾಹಿತಿ ನೀಡಿ ಪರಿಹಾರ ಪಡೆಯಬಹುದು. ಅವರು ಕಚೇರಿಗೂ ಬರಬೇಕಿಲ್ಲ, ಮಾಹಿತಿ ಕೊಟ್ಟರೆ ಇಲಾಖೆಯ ಅಧಿಕಾರಿಗಳೇ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿ, ಕೃಷಿ ಭೂಮಿಯ ದಾಖಲೆಗಳನ್ನು ಪಡೆದು ಪರಿಹಾರ ಒದಗಿಸುತ್ತಾರೆ. ಅಗತ್ಯ ದಾಖಲೆಗಳನ್ನು ಕೊಟ್ಟು, ಡಿಜಿಟಲ್ ರೂಪದಲ್ಲಿ ಹಾನಿಯ ವರದಿ ಮಾಡಿದ ನಾಲ್ಕು ತಿಂಗಳೊಳಗೆ ಪರಿಹಾರ ಮೊತ್ತ ನೇರವಾಗಿ ರೈತರ ಖಾತೆಗೆ ಬರುತ್ತದೆ.

'ಹಣ್ಣುಗಳು ನಾಶವಾದರೆ ಪರಿಹಾರಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಕೋತಿಗಳು ಉಂಟುಮಾಡುವ ಹಾನಿಗೆ ಪರಿಹಾರ ಪಡೆಯಲು ರೈತರಿಗೆ ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ಆ್ಯಂಟನಿ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 02-11-2000

• ಕನ್ನಡ ಸಾಫ್ಟ್‌ವೇರ್ ಪ್ರಮಾಣೀಕರಣಕ್ಕೆ ಆದೇಶ: ಕೃಷ್ಣ

ಬೆಂಗಳೂರು, ನ.1– ಎಲ್ಲ ಕನ್ನಡ ಸಾಫ್ಟ್‌ವೇರ್ ಉತ್ಪಾದಕರೂ ತಮ್ಮ ಕಂಪ್ಯೂಟರ್ ಕೀಲಿಮಣೆಯಲ್ಲಿ ಸರ್ಕಾರ ನಿಗದಪಡಿಸಿರುವ ಪ್ರಮಾಣೀಕೃತ ಸಾಫ್ಟ್‌ವೇರ್ ಸಂಕೇತ ಬಳಸಲು ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

ವಿಶ್ವದಾದ್ಯಂತ 376 ಕಂಪನಿಗಳು ಭಾಗವಹಿಸಿರುವ, ಏಷ್ಯಾದ ಅತಿ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಮೇಳ 'ಬೆಂಗಳೂರು ಐಟಿ ಡಾಟ್‌ಕಾಮ್'ನಲ್ಲಿ ಇಂದು ಮುಖ್ಯಮಂತ್ರಿ ಕೃಷ್ಣ ಅವರು ಇದನ್ನು ಪ್ರಕಟಿಸಿದರು.

ಆವರಣದಲ್ಲಿ ಬೆಳಿಗ್ಗೆ ಈ ಪ್ರತಿಷ್ಠಿತ ಮೇಳವನ್ನು ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷ ಕೆ.ಸಿ. ಪಂತ್ ಉದ್ಘಾಟಿಸಿದರು.

75 ವರ್ಷಗಳ ಹಿಂದೆ

ಗುರುವಾರ, 02-11-1950

• 'ನಾಡಿನ ಕೈಗಾರಿಕೋದ್ಯಮಿಗಳು, ವರ್ತಕರು ಕಾಲಗತಿ ಅರಿಯಬೇಕು'

ಅಹಮದಾಬಾದ್, ನ.1– 'ಕೈಗಾರಿಕೋದ್ಯಮಿಗಳು ಮತ್ತು ವರ್ತಕರು ಕಾಲಗತಿಯ ಸೂಚನೆಯೇನೆಂಬುದನ್ನು ಸರಿಯಾಗಿ ಅರಿತು ರಾಷ್ಟ್ರೋನ್ನತಿ ಸಾಧನೆಗಾಗಿ ಶ್ರಮಿಸಬೇಕು' ಹೀಗೆಂದು ಉಪಮಹಾಪ್ರಧಾನಿ ಸರ್ದಾರ್ ಪಟೇಲರು ಅಹಮದಾಬಾದಿನ ಗಿರಣಿ ಮಾಲೀಕರ ಮತ್ತು ಗುಜರಾತಿನ ವಾಣಿಜ್ಯ ಸಂಘದವರು ಇಂದು ಸಂಜೆ ತಮಗಿತ್ತ ಸತ್ಕಾರವೊಂದರ ಸಮಯದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಮುಂದುವರಿದು 'ಅಪರಿಮಿತ ತ್ಯಾಗ, ಕಷ್ಟಗಳಿಂದ ಗಳಿಸಿರುವ ಸ್ವಾತಂತ್ರ್ಯವನ್ನು ಸುಭದ್ರಗೊಳಿಸುವುದೇ ನಮ್ಮೆಲ್ಲರ ಏಕ ಮಾತ್ರ ಗುರಿ' ಎಂದು ನುಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

02 ನವೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಏಕಾದಶಿ ಗಂ. 7-32 ನಂತರ ದ್ವಾದಶಿ ಗಂ.29-08 **ನಕ್ಷತ್ರ:** ಪೂರ್ವಾಭಾದ್ರ ಗಂ 17-04 **ಯೋಗ:** ವ್ಯಾಘಾತ ಗಂ 23-10 ಕರಣ: ವಿಷ್ಟಿ ಗಂ. 7-32 ತುಲಾ ಮಾಸದ 16 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 3 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-29 **ಸೂರ್ಯಾಸ್ತ:** 06-00, ಮುಸ್ಲಿಂ ದಿನಾಂಕ : 10 ಜುಮಾದುಲ್ಲಾವಲ್, ದಿನ ವಿಶೇಷ : ತುಳಸಿ ವಿವಾಹ **ಅದೃಷ್ಟ ಸಂಖ್ಯೆ:** 2, 3

ಮೇಷ: ಬಿರುಸಿನ ಚಟುವಟಿಕೆಗಳಿಂದ ಬಿಡುವು ಮಾಡಿಕೊಂಡು ಮನೆಯವರೊಡನೆ ಮನರಂಜನಾಯುಕ್ತವಾಗಿ ಕಾಲ ಕಳೆಯುವಂತಾಗಲಿದೆ. ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಖರ್ಚು ಉಂಟಾಗುತ್ತದೆ.

ವೃಷಭ: ಮನೋರೋಗದಿಂದ ಬಳಲುತ್ತಿರುವವರು ಚಿಕಿತ್ಸೆಯನ್ನು ಪಡೆದುಕೊಳ್ಳಿರಿ. ಸಾಂಸಾರಿಕವಾಗಿ ಅಭಿವೃದ್ಧಿಯ ವಿಷಯದಲ್ಲಿ ಶುಭ ವಾರ್ತೆಗಳನ್ನು ಕೇಳುವಿರಿ. ಮುತ್ತು-ರತ್ನಗಳ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಮಿಥುನ: ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸ್ನೇಹಿತರನ್ನು ಭೇಟಿಯಾದ ಕಾರಣ ಸಂತೋಷ ಇಮ್ಮಡಿಗೊಳ್ಳಲಿದೆ. ಕಾರ್ಯ ಕ್ಷೇತ್ರದಲ್ಲಿ ವಿವಿಧ ರೀತಿಯ ಅಭಿವೃದ್ಧಿ ಚಟುವಟಿಕೆಗಳಿಂದ ಬಹುಮಟ್ಟಿಗೆ ಮನಸ್ಸು ಸಂತೃಪ್ತಗೊಳ್ಳಲಿದೆ.

ಕರ್ಕಾಟಕ: ವೃತ್ತಿ ಜೀವನದಲ್ಲಿ ಧೈರ್ಯದಿಂದ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಕಣ್ಣೆದುರೇ ದುಷ್ಕರ್ಮಗಳು ನಡೆಯುತ್ತಿದ್ದರೂ ಏನೂ ಮಾಡಲಾಗದ ದುಃಸ್ಥಿತಿ ನಿಮ್ಮದಾಗಬಹುದು.

ಸಿಂಹ: ಮನೆಯಲ್ಲಿ ಮಾತಿನಿಂದ ಉಂಟಾದ ಬಿಗು ವಾತಾವರಣ ದಿನದ ಅಂತ್ಯದ ಸಮಯದಲ್ಲಿ ತಿಳಿಯಾಗಿ ಮನಸ್ಸಿಗೆ ಸಮಾಧಾನ ಉಂಟಾಗುವುದು. ಕೌಟುಂಬಿಕ ಕಲಹಗಳು ಗೋಚರಕ್ಕೆ ಬಂದಾವು.

ಕನ್ಯಾ: ಕೆಲವು ವಿಷಯಗಳು ಬೇಸರ ಹುಟ್ಟಿಸಿದರೂ, ನಿಮ್ಮ ಪ್ರೀತಿಪಾತ್ರರೊಂದಿಗೆ ಕಳೆಯುವ ಸಮಯ ಹಿಂದಿನ ಲವಲವಿಕೆಯನ್ನು ಮೂಡಿಸುತ್ತದೆ. ಕಿರಿಯರ ಮಾತನ್ನು ಕಡೆಗಣಿಸದೆ ಪರಾಮರ್ಶಿಸಿ.

ತುಲಾ: ಸಂದರ್ಭವನ್ನು ನೋಡಿಕೊಂಡು ಮನೋಭಿಲಾಷೆ ಬೇಡಿಕೆಯನ್ನು ಅಧಿಕಾರಿಗಳ ಮುಂದಿಡುವುದರಿಂದ ಈಡೇರುತ್ತದೆ. ಈ ದಿನ ವಿವಿಧ ರೀತಿಯಲ್ಲಿ ಆಗುವ ಧನಾಗಮನ ಉತ್ತಮವಾಗಿರಲಿದೆ.

ವೃಶ್ಚಿಕ: ಮುಂದಾಲೋಚನೆ ಇಲ್ಲದೆ ಶುರುಮಾಡಿದ ಕಾರ್ಯವು ಅನಿರೀಕ್ಷಿತ ಉತ್ತಮ ಫಲ ಕೊಡುವುದರಿಂದ ಸಂತೋಷ ಹೊಂದುವಿರಿ. ಮನೆ ದೇವರ ದರ್ಶನ ಅಥವಾ ಸ್ಮರಣೆ ಶುಭವನ್ನು ತರುತ್ತದೆ.

ಧನು: ಹಿರಿಯ ನಾಗರಿಕರನ್ನು ಮನೆಯಲ್ಲಿಯೇ ಶುಶ್ರೂಷೆ ಮಾಡುವ ಆಯಾಗಳಿಗೆ ನಿರೀಕ್ಷೆಯ ಹಣ ಸಿಗಲಾಗದು. ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಹರಿತ ವಸ್ತುಗಳಿಂದ ಸಣ್ಣ-ಪುಟ್ಟ ಗಾಯ ಆಗುವ ಸಾಧ್ಯತೆ ಇದೆ.

ಮಕರ: ಮನೆಯ ಜನರ ಜಗಳದಲ್ಲಿ ಮಾತಿನ ಅವಶ್ಯಕತೆ ಬಂದಾಗಲೂ ಮನಸ್ಸಿನಲ್ಲಿರುವ ಮಾತುಗಳನ್ನೆ ಹೇಳಲು ಸಾಧ್ಯವಾಗುವುದಿಲ್ಲ. ನ್ಯಾಯಾಲಯದದ ಮೊರೆ ಹೋಗುವಂಥ ಕೃತ್ಯಗಳು ನಡೆಯಲಿದೆ.

ಕುಂಭ: ವಿವಿಧ ಕಾರಣಗಳಿಂದಾಗಿ ಮನೆಗೆ ಬಂದ ಅತಿಥಿಗಳನ್ನು ಸರಿಯಾಗಿ ಸತ್ಕರಿಸಲಾಗದೆ ದಿನದ ಕಡೆಯಲ್ಲಿ ಬೇಸರ ಪಡುವಿರಿ. ರುದ್ರಾರಾಧನೆಯನ್ನು ಮಾಡುವುದರಿಂದ ಬಯಸಿದ ದ್ರವ್ಯವು ಶೀಘ್ರದಲ್ಲಿ ಪ್ರಾಪ್ತಿ.

ಮೀನ: ಮಹತ್ವಾಕಾಂಕ್ಷೆಯಿಂದ ಗುರಿಯನ್ನು ತಲುಪುವುದು ಕಷ್ಟವೇ ನಲ್ಲವಾದರು ಪ್ರಯತ್ನ ಮುಖ್ಯ. ಕುದುರೆ ಸಾಕುವುದರ ಜತೆಗೆ ಸವಾರಿಯನ್ನು ಮಾಡುವವರಿಗೆ ಉತ್ತಮ ಅವಕಾಶ ದೊರೆಯಲಿದೆ.

ಪದಬಂಧ 6211

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರ ಖರೀದಿಸುವುದು ಹೀಗೆ ಸಲೀಸು! (3)
3.ಮುಪ್ಪು ಸಾವು ಇಲ್ಲದಿರುವಿಕೆ (5)
6.ಸರಸದ ಮಾತುಕತೆ (3)
7.ವನದ ಹತ್ತಿರವಿರುವವನು ಗ್ರೀಸ್ ದೇಶದವನು (3)
8.ಸರಕ್ಕನೇ ಧರಿಸಿರುವ ಮಾಲೆ! (2)
10.ಅಶಕ್ತನ ತಿನ್ನುತ್ತಿರುವ ಆಹಾರ! (3)
12.ಗುಣವನ್ನು ಹೊಗಳುವುದು ಉಲ್ಟಾ ಕಾಣುತ್ತಿದೆ (4)
14.ದಮಯಂತಿ ಪತಿ ತಯಾರಿಸಿದ ರುಚಿಕಟ್ಟಾದ ಅಡುಗೆ (4)
16.ತಿರುಗಿದಾಗ ಕಾಣಿಸಿದ ಉಸುಕು (3)
18.ಕನಸಲ್ಲಿ ಕಾಣಿಸಿದ ಕೊಳೆ (2)
20.ಹುತ್ತ ಇಲ್ಲಿದೆ (3)
22.ಕೋಪಗೊಂಡಿರುವ ಹೆಂಗಸು (3)
23.ಬಾಡ ಗ್ರಾಮದಲ್ಲಿ ಜನಿಸಿದ ದಾಸಶ್ರೇಷ್ಠರು (5)
24.ಬಿದಿರಿನ ತಟ್ಟಿ (3)

ಮೇಲಿಂದ ಕೆಳಕ್ಕೆ
1.ನೆರವಿಗಾಗಿ ನೀಡುವ ಹಣ (5)
2.ರಸ ಒಸರುವ ಜಿಹ್ವೆ (3)
3.ಸಂಸ್ಕೃತ ಹುಟ್ಟಿರುವ ಭಾಷೆ ಅಥವಾ ಪದ (4)
4.ರಾಯರಿಂದ ಬಂದಿರುವ ನಿರೂಪ! (3)
5. ಹಟವನ್ನು ಹೀಗೂ ಹೇಳುತ್ತಾರೆ (2)
9.ತಿಳಿವಳಿಕೆ ಇಲ್ಲದವನು ತಿರುಗಿದ್ದಾನಲ್ಲಾ! (3)
10.ಬೆಂದಕ್ಕಿ ಕಾಳು (3)
11.ಮನದಲ್ಲೇ ವಿಚಾರ ಮಾಡುವಿಕೆಯು ತಿರುವುಮುರುವಾಗಿದೆ (3)
13.ಹಾಡುಗಾರ ಇಲ್ಲಿದ್ದಾನೆ (3)
15.ಕಿವಿಯಿಂದ ಕಿವಿಗೆ ಹರಡುವ ಮಾತು (5)
17.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
19.ಸರಿ ಸಮಾನನಾದವನು ಇಲ್ಲಿದ್ದಾನೆ (3)
20.ನಿಯಮಿತವಾಗಿ ಕಾಣಿಸಿಕೊಳ್ಳುವ ಹೆಂಗಸು (3)
21.ಉತ್ತರದವರ ಚಿಕ್ಕಪ್ಪ (2)

1		2	■	3		4		5
	■	6			■		■	
7			■		■	8	9	■
	■	■	10		11	■		■
12	13			■	14			15
■		■	16	17		■	■	
■	18	19	■		■	20		
21	■		■	22			■	
23					■	24		

6210ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬತ್ತಳಿಕೆ 3.ಮಧುಕರ 5.ರಪಣ 7.ಮಂದಿ 8.ಗತಿ 10.ಮಂಟಪ 11.ಮುನಿಸು 13.ಸಮ 15.ಚೌತಿ 16.ಮುಕ್ತಕ 18.ಸರಕಾರ 19.ಡಕಾಯಿತ

ಮೇಲಿಂದ ಕೆಳಕ್ಕೆ: 1.ಬಹಿರಂಗ 2.ಕೆರ 3.ಮಣ 4.ರಸೀದಿ 6.ಪಲ್ಲಟ 7.ಮಂದಹಾಸ 9.ತಿರುಪತಿ 12.ನಿಯುಕ್ತ 14.ಮಡಿವಂತ 15.ಚೌರಸ 16.ಮುರ 17.ಕಡ

ಸುಡೊಕು 6595

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		7		8			2	
	3						7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

6594 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬ್ಯಾಂಕ್‌ನಲ್ಲೇ ಸಿಲುಕಿದ ಇಎಂಡಿ

ಬಿಬಿಎಂಪಿ ಅವಧಿಯ ಟೆಂಡರ್‌ಗೆ ಪಾವತಿಸಿದ್ದ ₹ 50 ಕೋಟಿ ಮುಂಗಡ ಹಣ

• ಆರ್. ಮಂಜುನಾಥ್

ಮುಖ್ಯಾಂಶಗಳು

- ಬಡ್ಡಿಯಿಲ್ಲದೆ ಬ್ಯಾಂಕ್‌ನಲ್ಲೇ ಉಳಿದ ಹಣ
- ನಗರ ಪಾಲಿಕೆಗಳಿಗೆ ಹಸ್ತಾಂತರವಾಗದ ಟೆಂಡರ್ ಪ್ರಕ್ರಿಯೆಗಳು

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅವಧಿಯಲ್ಲಿ ಕರೆಯಲಾಗಿದ್ದ ನೂರಾರು ಟೆಂಡರ್‌ಗಳು ಅಂತಿಮವಾಗದೆ ಇರುವುದರಿಂದ ನಾಲ್ಕು ತಿಂಗಳಿಂದ ಗುತ್ತಿಗೆದಾರರು ಪಾವತಿಸಿರುವ ₹50 ಕೋಟಿಗೂ ಹೆಚ್ಚು ಮುಂಗಡ ಹಣ (ಇಎಂಡಿ) ಬ್ಯಾಂಕ್‌ಗಳಲ್ಲೇ ಉಳಿದಿದೆ.

ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದು ನಗರ ಪಾಲಿಕೆಗಳು ಸೆಪ್ಟೆಂಬರ್ 2ರಂದು ರಚನೆಯಾದವು. ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂಬ ಅರಿವಿದ್ದರೂ ಅಧಿಕಾರಿಗಳು ಸೆ.2ರವರೆಗೂ ವಿವಿಧ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದರು.


ಜಿಬಿಎ ಅಸ್ತಿತ್ವಕ್ಕೆ ಬಂದ ನಂತರ ಎಲ್ಲ ಟೆಂಡರ್‌ಗಳ ಪ್ರಕ್ರಿಯೆ ಸ್ಥಗಿತಗೊಂಡಿವೆ. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಆಹ್ವಾನಿಸಿದ್ದ ಸಾವಿರಾರು ಟೆಂಡರ್‌ಗಳ ಪ್ರಕ್ರಿಯೆ ಪೂರ್ಣ ಮುಗಿದಿಲ್ಲ. ಹೀಗಾಗಿ, ಒಂದು ಟೆಂಡರ್ ಮೊತ್ತದ ಶೇ 1ರಷ್ಟನ್ನು ಇಎಂಡಿಯಾಗಿ ಗುತ್ತಿಗೆದಾರರು ಪಾವತಿಸಿದ್ದ ₹50 ಕೋಟಿಗೂ ಹೆಚ್ಚು ಹಣ ಬ್ಯಾಂಕ್‌ಗಳಲ್ಲಿಯೇ ಇದೆ.

ಗುತ್ತಿಗೆದಾರರು ಪಾವತಿಸಿರುವ ಇಎಂಡಿ ಮೊತ್ತಕ್ಕೆ ಬಿಬಿಎಂಪಿಯಾಗಲಿ, ಬ್ಯಾಂಕ್ ಆಗಲಿ ಬಡ್ಡಿ ನೀಡುವುದಿಲ್ಲ. ಇಎಂಡಿ ಮೊತ್ತವನ್ನು ಇ-ಸಂಗ್ರಹಣಾ (ಇ-ಪ್ರೊಕ್ಯೂರ್‌ಮೆಂಟ್) ತಂತ್ರಾಂಶದ ಮೂಲಕ ಬ್ಯಾಂಕ್‌ಗಳಿಗೆ ಪಾವತಿಸಲಾಗಿದೆ. ಈ ಮೊತ್ತ ಬ್ಯಾಂಕ್‌ಗಳಲ್ಲೇ ಸಿಲುಕಿದೆ.

ಬಿಬಿಎಂಪಿ ಇದ್ದಾಗ ಜುಲೈನಿಂದ ಆಹ್ವಾನಿಸಲಾಗಿದ್ದ ಟೆಂಡರ್‌ಗಳ ಪ್ರಕ್ರಿಯೆ ಇನ್ನೂ 'ಫ್ರೀಜ್'ನಲ್ಲೇ ಇದೆ. ನೂರಾರು ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದರೂ ಅದು ಯಾವ ನಗರ ಪಾಲಿಕೆ ವ್ಯಾಪ್ತಿಗೆ ಸೇರಬೇಕೋ ಅಲ್ಲಿಗೆ ಅವುಗಳನ್ನು ಇನ್ನೂ ವರ್ಗಾಯಿಸಿಲ್ಲ. ಈ ಕಾಮಗಾರಿಗಳಿಗೆ ಬಿಡ್ ಸಲ್ಲಿಸಿದ್ದ ಗುತ್ತಿಗೆದಾರರ ಇಎಂಡಿಯನ್ನೂ ಅವರಿಗೆ ವಾಪಸ್ ನೀಡಿಲ್ಲ.

ಇನ್ನು ಕೊನೆಯ ಎರಡು ತಿಂಗಳಲ್ಲಿ ತರಾತುರಿಯಲ್ಲಿ ನಾನಾ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿತ್ತು. ನೂರಾರು ಗುತ್ತಿಗೆದಾರರು ಇಎಂಡಿ ಪಾವತಿಸಿ ಬಿಡ್ ಸಲ್ಲಿಸಿದ್ದಾರೆ. ಇಂತಹ ಟೆಂಡರ್‌ಗಳ ಪ್ರಕ್ರಿಯೆ ಪೂರ್ಣಗೊಳ್ಳದೆ ಇರುವುದರಿಂದ ಇಎಂಡಿ ಮೊತ್ತ ಬ್ಯಾಂಕ್‌ಗಳಲ್ಲೇ ಇದೆ.

ಇಎಂಡಿ ವಾಪಸ್ ನೀಡಲು ಮನವಿ


ನಂದಕುಮಾರ್

'ಬಿಬಿಎಂಪಿ ಅಸ್ತಿತ್ವದಲ್ಲಿದ್ದಾಗ ಹಲವು ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯನ್ನು ಗ್ರೇಟರ್ ಬೆಂಗಳೂರು ಅಥವಾ ನಗರ ಪಾಲಿಕೆಗಳು ಇನ್ನೂ ಪೂರ್ಣಗೊಳಿಸಿಲ್ಲ. ಗುತ್ತಿಗೆದಾರರು ₹50 ಕೋಟಿಗೂ ಹೆಚ್ಚು ಹಣವನ್ನು ಇಎಂಡಿಯಾಗಿ ಪಾವತಿಸಿದ್ದು, ಅದು ಬ್ಯಾಂಕ್‌ನಲ್ಲೇ ಉಳಿದಿದೆ. ಇಎಂಡಿಗೆ ಯಾವುದೇ ಬಡ್ಡಿ ನೀಡದಿರುವುದರಿಂದ ಬ್ಯಾಂಕ್‌ಗೆ ಲಾಭವಾಗಿದೆ. ಜಿಬಿಎ– ನಗರ ಪಾಲಿಕೆಗಳು ಕಳೆದುಕೊಳ್ಳುವುದೇನೂ ಇಲ್ಲ. ಆದರೆ, ಗುತ್ತಿಗೆದಾರರು ತಮ್ಮ ಹಣವನ್ನು ಕಳೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ, ಕೂಡಲೇ ಟೆಂಡರ್ ಪ್ರಕ್ರಿಯೆಗಳನ್ನು ಮುಗಿಸಿ ಇಎಂಡಿ ಹಿಂದಿರುಗಿಬೇಕು. ಇಲ್ಲವೇ, ಎಲ್ಲ ಟೆಂಡರ್‌ಗಳನ್ನು ರದ್ದು ಮಾಡಿ ಇಎಂಡಿ ವಾಪಸ್ ನೀಡಬೇಕು' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

'ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಗೆ ಅಕ್ಟೋಬರ್ 4ರಂದು ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಇದೀಗ, ಇ–ಆಡಳಿತದವರು ಮೂರು ತಿಂಗಳ ನಂತರದ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸೂಚಿಸಿರುವುದರಿಂದ ಗುತ್ತಿಗೆದಾರರು ಆತಂಕಗೊಂಡಿದ್ದು ಕೂಡಲೇ ಇಎಂಡಿ ವಾಪಸ್ ಮಾಡಬೇಕು' ಎಂದು ಆಗ್ರಹಿಸಿದರು.

ಮುಟ್ಟುಗೋಲಿಗೆ ಆದೇಶ

ಇ–ಸಂಗ್ರಹಣಾ ತಂತ್ರಾಂಶ 1.0 ಆವೃತ್ತಿಯಲ್ಲಿ ಟೆಂಡರ್/ ಹರಾಜುಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಇಎಂಡಿ ಮೊತ್ತವನ್ನು ಮೂರು ತಿಂಗಳಲ್ಲಿ ಮರುಪಾವತಿಸಬೇಕು. ಇಲ್ಲದಿದ್ದರೆ ಆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಬೇಕು ಎಂದು ಇ–ಆಡಳಿತ ಅ.24ರಂದು ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ (ಕೆಪಿಪಿಪಿ) 1.0 ಆವೃತ್ತಿಯನ್ನು ಅ.14ರಿಂದ ನಿಷ್ಕ್ರಿಯಗೊಳಿಸಲಾಗಿದೆ. ಹೀಗಾಗಿ, ಅದರಲ್ಲಿ ಬಾಕಿ ಇರುವ ಟೆಂಡರ್/ ಹರಾಜುಗಳನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ, ಎಲ್ಲ ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಂಡು, ಆಯಾ ಇಲಾಖೆಯವರು ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಬೇಕು ಎಂದು ಇ–ಆಡಳಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೂಚಿಸಿದ್ದಾರೆ.

ಸಿಇಒ ವಿರುದ್ಧ ಎಫ್‌ಐಆರ್

ಇಪಿಎಫ್‌ಒ ಸ್ಟಾಫ್ ಸೊಸೈಟಿ: ಹಣ ದುರುಪಯೋಗ ಪ್ರಕರಣ

ಪ್ರಜಾವಾಣಿ ವಾರ್ತೆ


ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ದೂರು ನೀಡಲು ಬಂದಿದ್ದ ಹೂಡಿಕೆದಾರರು

ಬೆಂಗಳೂರು: ನಗರದ ರಿಚ್‌ಮಂಡ್ ವೃತ್ತದ ಬಳಿಯಿರುವ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ(ಇಪಿಎಫ್‌ಒ) ಸ್ಟಾಫ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಹಣದ ದುರುಪಯೋಗ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.

ಸಿಇಒ ಗೋಪಿ ಹಾಗೂ ಲೆಕ್ಕಾಧಿಕಾರಿ ಜಗದೀಶ್ ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಇಬ್ಬರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು. ಸೊಸೈಟಿಯ ಅಧ್ಯಕ್ಷ ಸಿ.ಜೆ.ಮುರುಳೀಧರ್ ಅವರು ದೂರು ನೀಡಿದ್ದರು ಎಂಬುದು ಗೊತ್ತಾಗಿದೆ.

ಸೊಸೈಟಿ ಖಾತೆ ಪರಿಶೀಲನೆ ನಡೆಸಿದಾಗ ಕೆಲವು ಖಾತೆಗಳಿಗೆ ಅನಧಿಕೃತವಾಗಿ ಹಣ ವರ್ಗಾವಣೆ ಆಗಿರುವುದು ಕಂಡಬಂದಿದೆ ಎಂದು ದೂರು ನೀಡಿದ್ದಾರೆ. ಸೊಸೈಟಿಯ ದಾಖಲೆಗಳನ್ನು ಪರಿಶೀಲನೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಸೊಸೈಟಿಯಲ್ಲಿ ಹೂಡಿಕೆ ಮಾಡಿದ್ದ ಹಣಕ್ಕೆ ಪ್ರತಿ ತಿಂಗಳು ಬಡ್ಡಿ ಖಾತೆಗೆ ಬರುತ್ತಿತ್ತು. ಮೂರು ತಿಂಗಳಿಂದ ಹಣ ಬಂದಿಲ್ಲ. ಪರಿಶೀಲನೆ ನಡೆಸಿದಾಗ ವಂಚನೆ ನಡೆದಿರುವುದು ಗೊತ್ತಾಗಿದೆ ಎಂದು ಹೂಡಿಕೆದಾರರೊಬ್ಬರು ಹೇಳಿದರು.

ನೂರಾರು ಉದ್ಯೋಗಿಗಳು ತಮ್ಮ ಸಂಬಳದ ಸ್ವಲ್ಪ ಭಾಗವನ್ನು ಹೂಡಿಕೆ ಮಾಡಿದ್ದರು. ಭವಿಷ್ಯದಲ್ಲಿ ಆ ಹಣವು ನೆರವಿಗೆ ಬರಲಿದೆ ಎಂದು ಅವರು ಭಾವಿಸಿದ್ದರು. ಆದರೆ, ಇದೀಗ ಸೊಸೈಟಿ ಖಾತೆಯೇ ಖಾಲಿಯಾಗಿದೆ. ಉಳಿತಾಯದ ಹಣವೇ ಇಲ್ಲವಾಗಿದೆ ಎಂದು ಹೂಡಿಕೆದಾರ ಬಿ.ಮಹದೇವಯ್ಯ ಅವರು ನೋವು ತೋಡಿಕೊಂಡರು.

'ಎಫ್‌ಐಆರ್ ದಾಖಲಾದ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಇಪಿಎಫ್‌ಒ ಉದ್ಯೋಗಿಗಳಿಗೆ ಮಾತ್ರ ಸೊಸೈಟಿಯಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿತ್ತು. ನಾನೂ ಎರಡು ಲಕ್ಷ ರೂಪಾಯಿ ಹೂಡಿಕೆ ಮಾಡಿದ್ದೆ. ಆರು ತಿಂಗಳ ಹಿಂದೆ ನಾನು ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಹೂಡಿಕೆ ಹಣ ದುರುಪಯೋಗ ಆಗಿರುವುದು ಗೊತ್ತಾಯಿತು. ಇದೀಗ ದೂರು ನೀಡಲಾಗಿದೆ' ಎಂದು ಅಧ್ಯಕ್ಷ ಮುರಳೀಧರ್ ತಿಳಿಸಿದರು.

61 ವರ್ಷದ ಹಿಂದೆ ಇಪಿಎಫ್‌ಒ ಸಿಬ್ಬಂದಿ 'ಇಪಿಎಫ್‌ಒ ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ' ರಚಿಸಿಕೊಂಡಿದ್ದರು. ಉಳಿತಾಯದ ಹಣವನ್ನು ಹೂಡಿಕೆ ಮಾಡುತ್ತಿದ್ದರು. ಅವಶ್ಯ ಇರುವ ಸಿಬ್ಬಂದಿಗೆ ಈ ಸೊಸೈಟಿ ಸಾಲ ನೀಡುತ್ತಿತ್ತು. ಶುಕ್ರವಾರ ಹಾಗೂ ಶನಿವಾರ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಹೂಡಿಕೆದಾರರು ಬಂದಿದ್ದರು. ತನಿಖಾಧಿಕಾರಿಗಳ ಎದುರು ತಮ್ಮ ಅಳಲು ತೋಡಿಕೊಂಡರು.

ನೇಣು ಹಾಕಿಕೊಂಡು ಯುವತಿ ಆತ್ಮಹತ್ಯೆ

ಬೆಂಗಳೂರು: ಸುಬ್ರಹ್ಮಣ್ಯನಗರದಲ್ಲಿ ನೆಲಸಿದ್ದ ಯುವತಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುಪ್ರಿಯಾ (26) ಆತ್ಮಹತ್ಯೆ ಮಾಡಿಕೊಂಡ ಯುವತಿ. ಸುಪ್ರಿಯಾ ಅವರದ್ದು ದಾವಣಗೆರೆ. ಸುಬ್ರಹ್ಮಣ್ಯ ನಗರದಲ್ಲಿ ನೆಲಸಿದ್ದರು.

ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸುಬ್ರಹ್ಮಣ್ಯನಗರದ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿರುವ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಎಂಬಿಎ ವ್ಯಾಸಂಗ ಮಾಡಿದ್ದರು. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಇದರೊಂದಿಗೆ ಬೈಕ್ ರೈಡಿಂಗ್ ತರಬೇತಿಗೂ ತೆರಳುತ್ತಿದ್ದರು. ಆದರೆ, ಇತ್ತೀಚೆಗೆ ವೈಯಕ್ತಿಕ ಕಾರಣಕ್ಕೆ ಖಿನ್ನತೆಗೆ ಒಳಗಾಗಿದ್ದರು. ಹೀಗಾಗಿ ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ ಎಂದು ಮೂಲಗಳು ಹೇಳಿವೆ.

ಸುಪ್ರಿಯಾ ಅವರು ನೆಲಸಿದ್ದ ಮನೆಯಲ್ಲಿ ವಾಸನೆ ಬರುತ್ತಿತ್ತು. ಅನುಮಾನಗೊಂಡಿದ್ದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಬಾಗಿಲು ಒಡೆದು ಒಳಹೋಗಿ ನೋಡಿದಾಗ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಮೃತದೇಹ ಪತ್ತೆ ಆಯಿತು ಎಂದು ಮೂಲಗಳು ಹೇಳಿವೆ.

ಗೋವಿಂದರಾಜನಗರ ಠಾಣೆ ಪೊಲೀಸರಿಗೆ ಶರಣಾದ ಆರೋಪಿ

ಡಂಬಲ್ಸ್‌ನಿಂದ ಹೊಡೆದು ಮ್ಯಾನೇಜರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಟ್ ಆನ್ ಮತ್ತು ಆಫ್ ವಿಚಾರಕ್ಕೆ ಮ್ಯಾನೇಜರ್ ಹಾಗೂ ನೌಕರನ ನಡುವೆ ನಡೆದ ಗಲಾಟೆಯು ಮ್ಯಾನೇಜರ್ ಕೊಲೆಯಲ್ಲಿ ಅಂತ್ಯವಾದ ಘಟನೆ ಗೋವಿಂದರಾಜನಗರದ ಸರಸ್ವತಿನಗರದಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ.


ಭೀಮೇಶ್ ಬಾಬು

ಡಾಟಾ ಡಿಜಿಟಲ್ ಕಂಪನಿಯ ವ್ಯವಸ್ಥಾಪಕ, ಚಿತ್ರದುರ್ಗದ ಭೀಮೇಶ್ ಬಾಬು (41) ಕೊಲೆಯಾದವರು.

ಕೃತ್ಯ ಎಸಗಿದ ಬಳಿಕ ಆಂಧ್ರಪ್ರದೇಶದ ವಿಜಯವಾಡ ಜಿಲ್ಲೆಯ ಆರೋಪಿ, ಕಂಪನಿಯ ನೌಕರ ಸೋಮಲವಂಶಿ (24) ಎಂಬಾತ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ ಎಂದು ಮೂಲಗಳು ಹೇಳಿವೆ.


ಸೋಮಲವಂಶಿ

ಸರಸ್ವತಿ ನಗರದಲ್ಲಿ ಈ ಸಂಸ್ಥೆಯ ಕಚೇರಿಯಿದೆ. ಬೇರೆ ಬೇರೆ ಸ್ಥಳಗಳಲ್ಲಿ ಚಿತ್ರೀಕರಣಗೊಂಡ ಸಿನಿಮಾ, ಕಿರುಚಿತ್ರ, ಧಾರಾವಾಹಿಗಳ ವಿಡಿಯೊವನ್ನು ಈ ಕಂಪನಿಯಲ್ಲಿ ಎಡಿಟಿಂಗ್ ಮಾಡಿ ನಿರ್ಮಾಪಕರು ಹಾಗೂ ನಿರ್ದೇಶಕರಿಗೆ ಕೊಡಲಾಗುತ್ತಿದೆ.

ಕಂಪನಿಯ ವ್ಯವಸ್ಥಾಪಕ ಭೀಮೇಶ್ ಅವರೊಂದಿಗೆ ಆರೋಪಿ ಸೋಮಲವಂಶಿ ಸೇರಿ ಐವರು ನೌಕರರು ಕೆಲಸ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ನಾಲ್ವರು ನೌಕರರು ಕೆಲಸ ಮುಗಿಸಿಕೊಂಡು ಮನೆಗೆ ತೆರಳಿದ್ದರು. ಭೀಮೇಶ್ ಹಾಗೂ ಸೋಮಲವಂಶಿ ಇಬ್ಬರೇ ಇದ್ದರು. ಆ ಸಂದರ್ಭದಲ್ಲಿ ಆರೋಪಿ, ಲೈಟ್ ಆನ್ ಹಾಗೂ ಆಫ್ ಮಾಡುತ್ತಿದ್ದ. ಕೋಪಗೊಂಡ ಭೀಮೇಶ್ ಪ್ರಶ್ನೆ ಮಾಡಿದ್ದರು. ಬಳಿಕ ಕಚೇರಿ ಪಕ್ಕದಲ್ಲಿದ್ದ ಮನೆಗೆ ತೆರಳಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿ, ವ್ಯವಸ್ಥಾಪಕರ ಕಣ್ಣಿಗೆ ಖಾರದಪುಡಿ ಎರಚಿ ಡಂಬಲ್ಸ್‌ನಿಂದ ತಲೆಗೆ ಹೊಡೆದಿದ್ದ. ಗಾಯಗೊಂಡಿದ್ದ ಅವರು ನಾಯಂಡಹಳ್ಳಿಯಲ್ಲಿ ನೆಲಸಿದ್ದ ಸ್ನೇಹಿತನಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ನೇಹಿತ ಸ್ಥಳಕ್ಕೆ ಬಂದು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಭೀಮೇಶ್ ಮೃತಪಟ್ಟಿದ್ದರು. ಆರೋಪಿ ಠಾಣೆಗೆ ತೆರಳಿ ಡಂಬಲ್ಸ್‌ನಿಂದ ಹೊಡೆದು ಕೊಲೆ ಮಾಡಿರುವುದಾಗಿ ಹೇಳಿ ಪೊಲೀಸರಿಗೆ ಶರಣಾಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಸಿನಿಮಾ ದೃಶ್ಯಗಳಿದ್ದ ಹಾರ್ಡ್ ಡಿಸ್ಕ್ ಕಳ್ಳತನ


ಜಯಶೀಲನ್

ಬಿಡುಗಡೆಗೆ ಸಿದ್ಧವಾಗಿದ್ದ ಸಿನಿಮಾ ದೃಶ್ಯಗಳಿದ್ದ ಹಾರ್ಡ್ ಡಿಸ್ಕ್ ಕಳ್ಳತನ ಮಾಡಿದ್ದ ತಮಿಳುನಾಡಿನ ರಾಮ್ ಜೀ ತಂಡದ ಸದಸ್ಯ ಜಯಶೀಲನ್ ಎಂಬಾತನನ್ನು ವಿಜಯನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಹಾರ್ಡ್ ಡಿಸ್ಕ್, ಒಂದು ಟ್ಯಾಬ್, ಒಂದು ಬ್ಯಾಗ್ ವಶಕ್ಕೆ ಪಡೆಯಲಾಗಿದೆ. ಕೃತ್ಯಕ್ಕೆ ಸಾಥ್ ನೀಡಿದ್ದ ಆತನ ಪುತ್ರ ಪರಾರಿ ಆಗಿದ್ದಾನೆ. ಆತನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಐ ಆ್ಯಮ್ ಗಾಡ್' ಹೆಸರಿನ ಸಿನಿಮಾ ನಿರ್ಮಾಪಕ ಹಾಗೂ ನಾಯಕ ಸಹ ಆಗಿರುವ ರವಿಗೌಡ ಅವರು ವಿಜಯನಗರದ ಕಾಫಿ ಡೇ ಬಳಿ ಕಾರು ನಿಲುಗಡೆ ಮಾಡಿ ಕಾಫಿ ಕುಡಿಯಲು ತೆರಳಿದ್ದರು. ವಾಪಸ್ ಬಂದು ನೋಡಿದಾಗ ಕಾರಿನ ಗ್ಲಾಸ್ ಒಡೆದು ಎಲೆಕ್ಟ್ರಾನಿಕ್ ಉಪಕರಣ, ಟ್ಯಾಬ್, ಹಾರ್ಡ್‌ಡಿಸ್ಕ್ ಕಳ್ಳತನ ಮಾಡಿರುವುದು ಗೊತ್ತಾಗಿತ್ತು. ತಕ್ಷಣವೇ ಅವರು ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಸಿಸಿ ಟಿವಿ ದೃಶ್ಯಗಳನ್ನು ಪರಿಶೀಲನೆ ನಡೆಸಿದಾಗ ರಾಮ್ ಜೀ ಗ್ಯಾಂಗ್ ಸದಸ್ಯರ ಕೃತ್ಯ ಬಯಲಾಯಿತು. ನಂತರ, ತಮಿಳುನಾಡಿಗೆ ತೆರಳಿದ ಪೊಲೀಸರು ಆರೋಪಿ ಜಯಶೀಲನ್ ಅವರನ್ನು ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಆರೋಪಿಗಳು ಜಯನಗರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುವುದು ಗೊತ್ತಾಗಿದೆ. ರಾಮ್ ಜೀ ಗ್ಯಾಂಗ್ ನಗರದಲ್ಲಿ ಕಳ್ಳತನ ಪ್ರಕರಣದಲ್ಲಿ ಸಕ್ರಿಯ ಆಗಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಚಿನ್ನಾಭರಣ ಸುಲಿಗೆ: ಸರಗಳ್ಳರ ಸೆರೆ

ಅಪರಾಧ ಸುದ್ದಿ

ರಸ್ತೆಯಲ್ಲಿ ಹೋಗುವ ಒಂಟಿ ಮಹಿಳೆಯರನ್ನೇ ಗುರಿಯಾಗಿಸಿ ಚಿನ್ನದ ಸರ, ಮೊಬೈಲ್ ಹಾಗೂ ನಗದು ಸುಲಿಗೆ ಮಾಡಿ ಪರಾರಿ ಆಗುತ್ತಿದ್ದ ಐವರು ಸರಗಳ್ಳರನ್ನು ಕೆಂಗೇರಿ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕೆಂಗೇರಿಯ ನವೀನ್ (32), ಮಹೇಶ್ (26), ಸುದೀಪ್ (24), ದರ್ಶನ್ (23) ಮತ್ತು ಕೋಲಾರದ ಆರ್‌ಆರ್ ನಗರದ ನಿವಾಸಿ ಹರ್ಷವರ್ಧನ್ (23) ಬಂಧಿತರು.

ಬಂಧಿತರಿಂದ 75 ಗ್ರಾಂ ಚಿನ್ನಾಭರಣ, ನಾಲ್ಕು ಮೊಬೈಲ್ ಹಾಗೂ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೇಮಾವತಿ ಅವರು ಅಕ್ಟೋಬರ್ 20ರಂದು ಸಂಜೆ 6.30ರ ಸುಮಾರಿಗೆ ಕೆಂಗೇರಿ ಉಪನಗರದ 80 ಅಡಿ ರಸ್ತೆಯ ಜೆ.ಕೆ ಮೋಟಾರ್ ಕಾರ್ ಕೇರ್ ಸೆಂಟರ್ ಎದುರಿನ ಪಾದಚಾರಿ ಮಾರ್ಗದಲ್ಲಿ ನಡೆದು ತೆರಳುತ್ತಿದ್ದರು. ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ಸರಗಳ್ಳರು, 75 ಗ್ರಾಂ ತೂಕದ ಎರಡು ಚಿನ್ನದ ಸರಗಳನ್ನು ಎಗರಿಸಿ ಪರಾರಿ ಆಗಿದ್ದರು. ಹೇಮಾವತಿ ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಲು ಎರಡು ವಿಶೇಷ ತಂಡಗಳನ್ನು ರಚಿಸಲಾಗಿತ್ತು.

ಕೃತ್ಯ ನಡೆದ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಿದಾಗ ಆರೋಪಿಗಳ ಸುಳಿವು ಲಭಿಸಿತ್ತು. ಬಳಿಕ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಇನ್‌ಸ್ಪೆಕ್ಟರ್ ಜಗದೀಶ್ ಅವರನ್ನು ಒಳಗೊಂಡ ಸಿಬ್ಬಂದಿ ಕಾರ್ಯಾಚರಣೆ ನಡೆಸಿತ್ತು.

‘ಜೋಶಿ ಆತ್ಮಾವಲೋಕನಕ್ಕೆ ಸಕಾಲ’

ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರು ವೈಯಕ್ತಿಕ ಟೀಕೆ–ಟಿಪ್ಪಣಿಗಳನ್ನು ಗೌರವದಿಂದ ಸ್ವೀಕರಿಸಿ, ಸನ್ನಡತೆ ತೋರುವ ಬದಲು ಪ್ರತೀಕಾರದ ಮನಸ್ಥಿತಿ ತೋರಿದ್ದರಿಂದಲೇ ಆಡಳಿತಾಧಿಕಾರಿ ನೇಮಿಸುವ ಪರಿಸ್ಥಿತಿ ನಿರ್ಮಾಣವಾಯಿತು’ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕನ್ನಡ ಸಂಘರ್ಷ ಸಮಿತಿ ನಗರದಲ್ಲಿ ಹಮ್ಮಿಕೊಂಡಿದ್ದ 47ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಬಿ.ಎಂ. ನಾರಾಯಣಸ್ವಾಮಿ ಅವರಿಗೆ ‘ಕನ್ನಡ ಕಟ್ಟಾಳು’ ಹಾಗೂ ಜಯಲಕ್ಷ್ಮಿ ಪಾಟೀಲ ಅವರಿಗೆ ‘ನಿಸ್ಸೀಮ ಕನ್ನಡತಿ’ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು.

‘ಪರಿಷತ್ತಿನ ಇತಿಹಾಸದಲ್ಲಿ ಎರಡನೇ ಬಾರಿ ಆಡಳಿತಾಧಿಕಾರಿ ನೇಮಿಸುವ ಸಂದರ್ಭ ಬಂದಿದ್ದು ಒಳ್ಳೆಯ ಸೂಚನೆಯಲ್ಲ. ಹಿಂದೆ ಆಯಾ ಸಂದರ್ಭಕ್ಕೆ ವಿವಾದಗಳು ಕಾಣಿಸಿಕೊಂಡರೂ, ತಕ್ಷಣ ಬಗೆಹರಿಯುತ್ತಿದ್ದವು. ಆದರೆ, ಕಸಾಪ ಈಗ ಬಹಳ ಇಕ್ಕಟ್ಟು, ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಂತೆ ಅನಿಸುತ್ತಿದೆ. ಜೋಶಿ ಅವರು ಈ ಹಿಂದೆ ವಿವಿಧ ಹುದ್ದೆಗಳಲ್ಲಿ ಅಧಿಕಾರದಲ್ಲಿದ್ದಾಗ ಒಳ್ಳೆಯ ಹೆಸರು ಮಾಡಿದ್ದಾರೆ. ಆದರೆ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅವರು ತಮ್ಮ ಗೌರವವನ್ನು ಕಡಿಮೆ ಮಾಡಿಕೊಂಡಿದ್ದಲ್ಲದೇ, ಪರಿಷತ್ತಿನ ಘನತೆಯನ್ನೂ ಕುಗ್ಗಿಸಿದ್ದಾರೆ. ಅವರು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ’ ಎಂದು ಹೇಳಿದರು.

‘ಸಾಹಿತ್ಯ ಪರಿಷತ್ತನ್ನು ಸಾಹಿತಿಗಳ ವಿರುದ್ಧ ಎನ್ನುವ ರೀತಿಯಲ್ಲಿ ಮಾಡಿರುವುದು ವಿಷಾದನೀಯ. ಸಾಹಿತಿಗಳನ್ನೇ ಅಪರಾಧಿಗಳ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ಆಗಬಾರದಿತ್ತು. ಸಾಹಿತಿಗಳು ಪ್ರಶ್ನಿಸುವುದು, ಪ್ರತಿಭಟಿಸುವುದು ಸಹಜ. ಅದು ಸಾಹಿತಿಗಳ ಗುಣ. ಪರಿಷತ್ತಿನ ಹಿತದೃಷ್ಟಿಯಿಂದ ಸಲಹೆ ಸೂಚನೆಗಳನ್ನು ಕೊಟ್ಟರೆ, ಅಧ್ಯಕ್ಷ ಸ್ಥಾನ ದಲ್ಲಿರುವವರು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಅವರು ಸಮಿತಿಯ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಕನ್ನಡ ಪರ ಹೋರಾಟಗಾರ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ತಾ.ಸಿ.ತಿಮ್ಮಯ್ಯ, ಜಂಟಿ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಬಿ.ಎಂ. ನಾರಾಯಣಸ್ವಾಮಿ ಅವರಿಗೆ ‘ಕನ್ನಡ ಕಟ್ಟಾಳು’ ಹಾಗೂ ಜಯಲಕ್ಷ್ಮಿ ಪಾಟೀಲ ಅವರಿಗೆ ‘ನಿಸ್ಸೀಮ ಕನ್ನಡತಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎ.ಎಸ್‌.ನಾಗರಾಜಸ್ವಾಮಿ, ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ತಾ.ಸಿ. ತಿಮ್ಮಯ್ಯ, ಸಂತೋಷ ಹಾನಗಲ್, ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಗಾಯತ್ರಿ ರಾಮಣ್ಣ, ಇಂದಿರಾ ಶರಣ್ ಜಮ್ಮಲದಿನ್ನಿ ಹಾಗೂ ಬಿ.ಸಿ.ಜಗದೀಶ್ ಉಪಸ್ಥಿತರಿದ್ದರು

‘ಸಾಧುವಾದ ನಡವಳಿಕೆಯಲ್ಲ’

‘ಸಾಹಿತಿ ಹರಿಹರಪ್ರಿಯ ಅವರಿಗೆ ವ್ಯವಸ್ಥೆ, ಸಮಾಜ ಮತ್ತು ಸರ್ಕಾರದ ಬಗ್ಗೆ ಅಸಮಾಧಾನ ಇದ್ದರೆ, ಅವರು ಗೌರವ ಡಾಕ್ಟರೇಟ್, ಪ್ರಶಸ್ತಿಗಳನ್ನು ಹಿಂದಿರುಗಿಸುವ ಕೆಲಸ ಮಾಡಬಹುದಿತ್ತು. ಆದರೆ, ಸುಟ್ಟು ಹಾಕಿದ್ದು ಸಾಧುವಾದ ನಡವಳಿಕೆ ಅಲ್ಲ. ಈ ಪರಿಸ್ಥಿತಿಗೆ ಅವರ ಅಪ್ರಿಯ ನಡವಳಿಕೆಯೇ ಕಾರಣ. ಅವರು ಸೌಜನ್ಯದಿಂದ ನಡೆದುಕೊಂಡಿದ್ದರೆ ಅವರನ್ನು ಯಾರೂ ದೂರ ಇಡುತ್ತಿರಲಿಲ್ಲ. ಅವರು ನೋವಿನಿಂದಲೂ ಆ ರೀತಿ ಮಾಡಿರಬಹುದು. ಅವರ ಮನವಿಗಳಿಗೆ ಸರ್ಕಾರ ಸ್ಪಂದಿಸಲಿ’ ಎಂದು ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ರೇವ್ ಪಾರ್ಟಿ: ತಡರಾತ್ರಿ ಹೋಂ ಸ್ಟೇ ಮೇಲೆ ದಾಳಿ

90 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ರಾಮನಗರ: ಕೆಂಗೇರಿ ಬಳಿ ಹೋಂ ಸ್ಟೇಯಲ್ಲಿ ಶುಕ್ರವಾರ ತಡರಾತ್ರಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ದಾಳಿ ನಡೆಸಿದ ಪೊಲೀಸರು ಪಾರ್ಟಿಯಲ್ಲಿದ್ದ 90 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹೋಂ ಸ್ಟೇ ಮಾಲೀಕ, ಹಾಗೂ ಪಾರ್ಟಿ ಆಯೋಜಕನನ್ನು ಬಂಧಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ದೇವಗೆರೆಯಲ್ಲಿರುವ ಆದ್ವಿ ವಿಲ್ಲಾ ಸ್ಟೇ ಮತ್ತು ಆಯಾನ್ ರಿಟ್ರೀಟ್ ಹೋಂ ಸ್ಟೇಯಲ್ಲಿ ರೇವ್ ಪಾರ್ಟಿ ನಡೆಯುತ್ತಿತ್ತು. ಕಗ್ಗಲೀಪುರ ಠಾಣೆ ಪೊಲೀಸರು ದಾಳಿ ನಡೆಸಿದ್ದರು.

ಪಾರ್ಟಿಯಲ್ಲಿದ್ದ 90 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹೋಂ ಸ್ಟೇ ಮಾಲೀಕ ಸುಹಾಸ್ ಹಾಗೂ ಪಾರ್ಟಿ ಆಯೋಜಕ ಶಾಹಿದ್ ಎಂಬಾತನನ್ನು ಬಂಧಿಸಿದ್ದಾರೆ.

ಪಾರ್ಟಿಯಲ್ಲಿದ್ದ ಯುವಕ– ಯುವತಿಯರು 19-23 ವರ್ಷದೊಳಗಿನವರಾಗಿದ್ದಾರೆ. ಎಲ್ಲರೂ ಬೆಂಗಳೂರಿನವರಾಗಿದ್ದು ಕಾಲೇಜು ವಿದ್ಯಾರ್ಥಿಗಳೂ ಇದ್ದಾರೆ.

ಗಾಂಜಾ ಸೇರಿದಂತೆ ಇತರ ನಿಷೇಧಿತ ಮಾದಕವಸ್ತುಗಳನ್ನು ಪಾರ್ಟಿಯಲ್ಲಿ ಬಳಸಿರುವ ಶಂಕೆ ವ್ಯಕ್ತವಾಗಿದೆ. ಎಲ್ಲರಿಗೂ ರಾಮನಗರದ ಜಿಲ್ಲಾಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿ, ರಕ್ತದ ಮಾದರಿ ಸಂಗ್ರಹಿಸಲಾಗಿದೆ ಎಂದು ಪೊಲೀಸರು ಹೇಳಿದರು.



ರೇವ್ ಪಾರ್ಟಿಯಲ್ಲಿ ಪಾಲ್ಗೊಂಡವರನ್ನೂ ವೈದ್ಯಕೀಯ ಪರೀಕ್ಷೆ ಮಾಡಿಸುವುದಕ್ಕಾಗಿ ಪೊಲೀಸರು ಶನಿವಾರ ಬೆಳಿಗ್ಗೆ ರಾಮನಗರ ಜಿಲ್ಲಾಸ್ಪತ್ರೆಗೆ ಕರೆತಂದಿದ್ದರು

ಪಾರ್ಟಿಯಲ್ಲಿ ಮೂವರು ಅಪ್ರಾಪ್ತರು

ಅಪರಾಧ ಸುದ್ದಿ

‘ಹೋಂ ಸ್ಟೇಯಲ್ಲಿ ಪಾರ್ಟಿ ಆಯೋಜಿಸಿ ಸ್ಥಳೀಯರಿಗೆ ತೊಂದರೆ ಕೊಡುತ್ತಿದ್ದಾರೆ ಎಂಬ ದೂರು ಕಗ್ಗಲೀಪುರ ಠಾಣೆಗೆ ಬಂದಿತ್ತು. ಆ ಮೇರೆಗೆ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ದಾಳಿ ನಡೆದಿದೆ. ಪಾರ್ಟಿಯಲ್ಲಿ ಮೂವರು ಅಪ್ರಾಪ್ತರೂ ಸಹ ಇದ್ದರು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಸುದ್ದಿಗಾರರಿಗೆ ತಿಳಿಸಿದರು.


‘ಸ್ಥಳದಲ್ಲಿ ಗಾಂಜಾ ಸೇರಿದಂತೆ ಮಾದಕವಸ್ತು ಇಂಜೆಕ್ಷನ್ ಸಿರಿಂಜ್‌ಗಳು ಪತ್ತೆಯಾಗಿವೆ. ಎಲ್ಲವನ್ನೂ ವಶಕ್ಕೆ ಪಡೆಯಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಹೋಂ ಸ್ಟೇ ಮಾಲೀಕ, ಆಯೋಜಕ ಸೇರಿದಂತೆ 90 ಮಂದಿ ವಿರುದ್ಧ ಎಫ್‌ಐಆರ್ ಮಾಡಲಾಗಿದೆ. ಇಬ್ಬರನ್ನು ಬಂಧಿಸಲಾಗಿದೆ. ತನಿಖೆಗೆ ಹಾಜರಾಗುವಂತೆ ಉಳಿದವರಿಗೆ ನೋಟಿಸ್ ನೀಡಲಾಗಿದೆ’ ಎಂದು ಹೇಳಿದರು.

ಯುವಕ– ಯುವತಿಯರನ್ನು ಪಾರ್ಟಿಗೆ ಕರೆ ತರುವುದಕ್ಕಾಗಿ ‘ಜೆನ್‌–ಝಿ’ ಎಂಬ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿಕೊಳ್ಳಲಾಗಿತ್ತು. ಅಕ್ರಮವಾಗಿ ತೆರೆದಿದ್ದ ಹೋಂ ಸ್ಟೇಯಲ್ಲಿ ನಡೆಯುತ್ತಿದ್ದ ಪಾರ್ಟಿಯಲ್ಲಿ ಮದ್ಯ, ಗಾಂಜಾ ಹಾಗೂ ಇತರ ಮಾದಕವಸ್ತು ಸೇವನೆ, ಅಶ್ಲೀಲ ನೃತ್ಯ, ಹಾಡು ಹಾಗೂ ಧ್ವನಿವರ್ಧಕ ಬಳಸಲಾಗಿತ್ತು ಎಂದು ಪೊಲೀಸರು ತಿಳಿಸಿದರು.

‘ಸುಳ್ಳು ಭರವಸೆಗಳೇ ಕಾಂಗ್ರೆಸ್ ಅಸ್ತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಸಮಯದಲ್ಲಿ ಸುಳ್ಳು ಭರವಸೆ, ಅಪಪ್ರಚಾರಗಳು ಕಾಂಗ್ರೆಸ್ ಬತ್ತಳಿಕೆಯ ಅಸ್ತ್ರಗಳು. ಹಾಗಾಗಿಯೇ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ 134 ಭರವಸೆಯಲ್ಲಿ 9 ಮಾತ್ರ ಈಡೇರಿಸಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.



ವಿಜಯೇಂದ್ರ

‘ಪ್ರಜಾವಾಣಿ’ಯಲ್ಲಿ ಶನಿವಾರ ಪ್ರಕಟವಾದ ವರದಿಯನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿರುವ ಅವರು, ‘ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್. ರಘುನಂದನ್ ನೇತೃತ್ವದ ಸಿವಿಕ್ ಸಂಘಟನೆ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿವೆ. ಜನಸಾಮಾನ್ಯರ ಮೇಲೆ ನಿರಂತರ ತೆರಿಗೆ ಹೊರೆ ಹೇರಲಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಭ್ರಷ್ಟಾಚಾರದ ವ್ಯಾಪ್ತಿ ಎಲ್ಲೆ ಮೀರಿದೆ ಎನ್ನುವ ಬಿಜೆಪಿ ಆರೋಪವನ್ನು ಸಿವಿಕ್ ವರದಿ ಸಾಕ್ಷೀಕರಿಸಿದೆ’ ಎಂದಿದ್ದಾರೆ.

‘ಅಧಿಕಾರಕ್ಕೆ ಬರಲು ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ಸರ್ಕಾರಕ್ಕೆ, ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆ ಇಲ್ಲ. ಕಾಂಗ್ರೆಸ್ ಐದು ವರ್ಷ ಪೂರೈಸಿಬಿಟ್ಟರೆ ರಾಜ್ಯವನ್ನು ದೇವರೇ ಕಾಪಾಡಬೇಕು’ ಎಂದು ಹೇಳಿದ್ದಾರೆ.



ಕಾರ್ಯಕ್ರಮದಲ್ಲಿ ಸಂಗೀತ ಚಿಕಿತ್ಸೆ ವಿಧಾನದ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು

ಪಾರ್ಶ್ವವಾಯು ಪೀಡಿತರಿಗೆ ಸಂಗೀತ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪಾರ್ಶ್ವವಾಯು ದಿನದ ಅಂಗವಾಗಿ ಮಣಿಪಾಲ್ ಆಸ್ಪತ್ರೆಗಳ ಸಮೂಹವು ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯೆನ್ಸ್ ಮ್ಯೂಸಿಯಂನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ಪಾರ್ಶ್ವವಾಯು ಪೀಡಿತರು ಸಂಗೀತದ ಮೂಲಕ ಚೇತರಿಸಿಕೊಳ್ಳುವ ಚಿಕಿತ್ಸಾ ವಿಧಾನದ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

‘ಪಾರ್ಶ್ವವಾಯುವಿನಿಂದ ಚೇತರಿಸಿಕೊಳ್ಳುತ್ತಿರುವವರ ಮೇಲೆ ಸಂಗೀತವು ಅಸಾಧಾರಣ ಪ್ರಭಾವವನ್ನು ಬೀರಿ, ಅವರ ಪುನಃಶ್ಚೇತನ ಹಾಗೂ ಚೇತರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ’ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟರು.

ಆಸ್ಪತ್ರೆಯ ನರರೋಗ ತಜ್ಞೆ ಡಾ. ರಿಚಾ ಸಿಂಗ್, ‘ಸಂಗೀತ ಚಿಕಿತ್ಸೆಯಿಂದ ಚೇತರಿಕೆಯ ಫಲಿತಾಂಶ ಗಮನಾರ್ಹವಾಗಿ ಸುಧಾರಿಸುತ್ತದೆ. ಈ ಚಿಕಿತ್ಸೆಗಳನ್ನು ಮುಂದುವರಿಸುವವರು ದೀರ್ಘಾವಧಿಯಲ್ಲಿ ಉತ್ತಮವಾಗಿ ಚೇತರಿಸಿಕೊಳ್ಳುತ್ತಾರೆ’ ಎಂದು ಅವರು ಹೇಳಿದರು.

ಪಾರ್ಶ್ವವಾಯುವಿನಿಂದ ಚೇತರಿಸಿಕೊಂಡವರು, ಅವರ ಆರೈಕೆದಾರರು ಮತ್ತು ವೈದ್ಯಕೀಯ ವೃತ್ತಿಪರರು ತಮ್ಮ ಅನುಭವ ಹಂಚಿಕೊಂಡರು.

ಕರ್ನಾಟಕ ರಾಜ್ಯೋತ್ಸವದಂದು ಸಹಿ ಸಂಗ್ರಹ ಅಭಿಯಾನ

ಧರ್ಮಸ್ಥಳ ಪ್ರಕರಣ: ನ್ಯಾಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಲ್ಲಿ ನೊಂದವರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಹಿತಿಗಳು ಹಾಗೂ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಶುಕ್ರವಾರ ಸಹಿ ಸಂಗ್ರಹ ಅಭಿಯಾನ ನಡೆಸಿದರು.

‘ಧರ್ಮಸ್ಥಳ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹತ್ತಾರು ವರ್ಷಗಳಿಂದ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ, ‘ಕೊಂದವರು ಯಾರು?’ ಎಂಬ ಸತ್ಯವನ್ನು ರಾಜ್ಯ ಸರ್ಕಾರ ಪತ್ತೆ ಹಚ್ಚಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಕರ್ನಾಟಕ ರಾಜ್ಯೋತ್ಸವ ದಿನದಂದು ನ್ಯಾಯಕ್ಕಾಗಿ ಆಗ್ರಹಿಸುತ್ತಿದ್ದೇವೆ’ ಎಂದು ಅಭಿಯಾನದಲ್ಲಿ ಪಾಲ್ಗೊಂಡಿದ್ದವರು ಹೇಳಿದರು.

ಎಲ್ಲ ಪ್ರಕರಣಗಳ ತನಿಖೆಯನ್ನೂ ಸಂಪೂರ್ಣಗೊಳಿಸುವ ತನಕ ಎಸ್‌ಐಟಿ ತನಿಖೆಯನ್ನು ಸರ್ಕಾರ ಸ್ಥಗಿತಗೊಳಿಸಬಾರದು ಎಂದು ಸಾಹಿತಿಗಳು ಹಾಗೂ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಆಗ್ರಹಿಸಿದರು.

‘ಸಾಕ್ಷಿಗಳು ಮತ್ತು ದೂರುದಾರರಿಗೆ ಭಯವಿಲ್ಲದೆ ತನಿಖೆಗೆ ಸಹಕರಿಸಲು ಎಸ್‌ಐಟಿ ಭದ್ರತೆ ಕಲ್ಪಿಸಬೇಕು. ತನಿಖೆಯಲ್ಲಿ ಗೋಪ್ಯತೆ ಕಾಪಾಡಬೇಕು. ಸಂತ್ರಸ್ತರ ಕುಟುಂಬಗಳಿಗೆ ಸರ್ಕಾರವು ರಕ್ಷಣೆ ಮತ್ತು ಪರಿಹಾರ ಕಲ್ಪಿಸಬೇಕು. ಹೈಕೋರ್ಟ್ ತೀರ್ಪಿನಂತೆ ಸೌಜನ್ಯ ಪ್ರಕರಣದಲ್ಲಿ ತನಿಖೆ ನಡೆಸುವಾಗ ಗಂಭೀರ ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ಜರುಗಿಸಬೇಕು. ಜಾತಿ, ವರ್ಗ, ಮತ ಮತ್ತು ರಾಜಕೀಯ ಪ್ರಾಬಲ್ಯ ಬಳಸಿಕೊಂಡು ಸತ್ಯವನ್ನು ಹತ್ತಿಕ್ಕಲು ಅಥವಾ ತನಿಖೆಯ ಮೇಲೆ ಒತ್ತಡ ಹೇರಲು ಪ್ರಯತ್ನಿಸುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು’ ಒತ್ತಾಯಿಸಿದರು.

ಅಭಿಯಾನದಲ್ಲಿ ಡಾ. ವಸುಂಧರಾ ಭೂಪತಿ, ದು.ಸರಸ್ವತಿ, ಇಂದಿರಾ ಕೃಷ್ಣಪ್ಪ, ಕೆ.ಷರೀಫಾ, ಎನ್.ಗಾಯತ್ರಿ, ಚಂಪಾವತಿ, ಗೌರಮ್ಮ, ಮೀನಾಕ್ಷಿ, ಇಂದ್ರಮ್ಮ, ಜ್ಯೋತಿ ಎ., ಕೆ.ಎಸ್. ವಿಮಲಾ, ಶಾಂತಮ್ಮ, ಮಧು ಭೂಷಣ್, ಮಮತಾ ಯಜಮಾನ್, ಗೌರಿ, ಗೀತಾ ಸಾಧನಾ, ವೀಣಾ ಹರಿಗೋವಿಂದ್, ಮಲ್ಲಿಗೆ ಸಿರಿಮನೆ, ಸುಷ್ಮಾ ವರ್ಮಾ ಪಾಲ್ಗೊಂಡಿದ್ದರು.



ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಅಪರಾಧ ಪ್ರಕರಣಗಳ ಸಂತ್ರಸ್ತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಸಹಿ ಸಂಗ್ರಹ ಅಭಿಯಾನ ನಡೆಯಿತು

ರಾಷ್ಟ್ರೋತ್ಥಾನ ಸಾಹಿತ್ಯ: ಕನ್ನಡ ಪುಸ್ತಕ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯವು ಕೆಂಪೇಗೌಡ ನಗರದ ಕೇಶವಶಿಲ್ಪದಲ್ಲಿ ಹಮ್ಮಿಕೊಂಡಿರುವ 5ನೇ ಕನ್ನಡ ಪುಸ್ತಕ ಹಬ್ಬಕ್ಕೆ ಶನಿವಾರ ಚಾಲನೆ ದೊರೆಯಿತು. ಡಿ.7 ರವರೆಗೆ ಈ ಹಬ್ಬ ನಡೆಯಲಿದ್ದು, ಪ್ರಮುಖ ಪ್ರಕಾಶನಗಳ ಪುಸ್ತಕಗಳ ಮೇಲೆ ಶೇ 50ರವರೆಗೂ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಹಬ್ಬವನ್ನು ಉದ್ಘಾಟಿಸಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ‘ಕರ್ನಾಟಕ ಏಕೀಕರಣದ ಇತಿಹಾಸವನ್ನು ಸ್ಮರಣೆ ಮಾಡಬೇಕಾದ ಅಗತ್ಯವಿದ್ದು, ಹಿಂದೆ ಆಡಳಿತ ನಡೆಸಿದ ಎಲ್ಲ ರಾಜರ ಕಾಲದಲ್ಲೂ ಕನ್ನಡವೇ ಅಧಿಕೃತ ಭಾಷೆಯಾಗಿತ್ತು. ಏಕೀಕರಣದ ಚಳವಳಿಗೆ ರಾಷ್ಟ್ರೀಯ ಚಳವಳಿಯೇ ಪ್ರೇರಣೆ. ನಮ್ಮ ಪೂರ್ವಜರ ತ್ಯಾಗ– ಪ್ರೋತ್ಸಾಹಗಳಿಂದ 1973ರಲ್ಲಿ ಕರ್ನಾಟಕ ರಾಜ್ಯ ಉದಯವಾಯಿತು. ಕನ್ನಡದ ಓದುಗರನ್ನು ಹೆಚ್ಚಿಸುವುದೇ ಕನ್ನಡಕ್ಕಾಗಿ ಮಾಡುವ ದೊಡ್ಡ ಕೆಲಸ’ ಎಂದು ಹೇಳಿದರು.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ‘ಕೇರಳದಲ್ಲಿ ಗೃಹಿಣಿಯರು ಮನೆಗೆ ತರಕಾರಿ, ದಿನಸಿ ಪಟ್ಟಿ ಮಾಡುವ ಹಾಗೆ ಮಕ್ಕಳಿಗೆ ಬೇಕಾದ ಪುಸ್ತಕಗಳನ್ನೂ ಪಟ್ಟಿ ಮಾಡಿ ತರಿಸುತ್ತಾರೆ. ಹಾಗಾಗಿ, ಅಲ್ಲಿ ಪುಸ್ತಕಗಳು ಹತ್ತು ಹಲವು ಮುದ್ರಣ ಕಾಣುತ್ತವೆ. ನಮ್ಮಲ್ಲೂ ತರಕಾರಿ ತರುವಂತೆ ಪುಸ್ತಕಗಳನ್ನೂ ತರುವಂತಾಗಬೇಕು. ಮನೆಯಲ್ಲಿ ಫ್ರಿಡ್ಜ್, ವಾಶಿಂಗ್ ಮಷಿನ್‌ಗೆ ಜಾಗ ಮಾಡುವಂತೆ ಪುಸ್ತಕಗಳಿಗೂ ಗೂಡು ಕಟ್ಟಬೇಕು’ ಎಂದರು.

ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್, ‘ಕನ್ನಡ ಹಬ್ಬಕ್ಕೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಈ ಬಾರಿ ಹೆಚ್ಚು ಕಡೆ ಪುಸ್ತಕ ಹಬ್ಬ ನಡೆಸುವ ಆಲೋಚನೆ ಇದೆ’ ಎಂದು ಹೇಳಿದರು.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗದ ಸದಸ್ಯ (ಸಾಮರ್ಥ್ಯ ನಿರ್ಮಾಣ ಆಯೋಗ) ಆರ್. ಬಾಲಸುಬ್ರಹ್ಮಣ್ಯ, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ ಗೌರವ ಕಾರ್ಯದರ್ಶಿ ವಿ. ನಾಗರಾಜ್, ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕ ವಿಘ್ನೇಶ್ವರ ಭಟ್ ಉಪಸ್ಥಿತರಿದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 70 ಸಾಧಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್ ತಂಗಡಗಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

‘ಅರ್ಹರಿಗೆ ಪ್ರಶಸ್ತಿ, ಬಾರದ ಅಪಸ್ವರ’

ವಿವಿಧ ಕ್ಷೇತ್ರದ 70 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಸಮಿತಿ ಅರ್ಹರನ್ನು ಆಯ್ಕೆ ಮಾಡಿದೆ. ಯಾವುದೇ ಅಪಸ್ವರ ಬಾರದಿರುವುದು ನನಗೆ ಸಂತೋಷ ಉಂಟು ಮಾಡಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 70 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಯಾರ ಹೆಸರನ್ನೂ ನಾನು ಪ್ರಶಸ್ತಿಗೆ ಶಿಫಾರಸು ಮಾಡಿಲ್ಲ. ಆಯ್ಕೆ ಸಮಿತಿಯೇ ಸಾಧಕರನ್ನು ಅಂತಿಮವಾಗಿ ಆಯ್ಕೆ ಮಾಡಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ಬಂದಿದೆ. ಪ್ರಶಸ್ತಿ ಪಡೆದವರಿಗೆ ಜವಾಬ್ದಾರಿ ಹೆಚ್ಚಿದ್ದು, ಅವರವರ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡುವಂತಾಗಬೇಕು. ಸಾಧಕರು ಸಾಧನೆ ಮಾಡುವ ಮೂಲಕ ಅವರ ಬದುಕನ್ನು ಸಾರ್ಥಕತೆ ಮಾಡಿಕೊಂಡಿದ್ದಾರೆ’ ಎಂದು ಹೇಳಿದರು.

‘ಅರ್ಜಿ ಹಾಕದೆ ಅರ್ಹರನ್ನು ಗುರುತಿಸಿ ಪ್ರಶಸ್ತಿ ನೀಡಿದ್ದೇವೆ. ಪ್ರಶಸ್ತಿ ಸಿಗದವರು ನಿರಾಸೆಯಾಗಬಾರದು. ಮುಂದಿನ ಬಾರಿ ಅಂಥವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು’ ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಗಳಿಸಿದ ಸಂಪತ್ತು ಕ್ಷಣಿಕ. ಆದರೆ, ಪಡೆದ ಜ್ಞಾನ, ಮಾಡಿದ ಸಾಧನೆ ಶಾಶ್ವತ. ಸಾಧನೆ ಇಲ್ಲದೇ ಸತ್ತರೆ ಸಾವಿಗೆ ಅವಮಾನ. ಆದರ್ಶ ಇಲ್ಲದೇ ಬದುಕಿದರೆ ಬದುಕಿಗೆ ಅವಮಾನ. ಅವಕಾಶ ಪಡೆದವನು ಅದೃಷ್ಟವಂತ, ಅವಕಾಶ ಸೃಷ್ಟಿಸಿಕೊಳ್ಳುವವನು ಬುದ್ಧಿವಂತ. ಹೀಗೆ ಹಲವಾರು ನುಡಿಗಟ್ಟುಗಳನ್ನು ಹೇಳುವ ಮೂಲಕ ಪ್ರಶಸ್ತಿ ಪುರಸ್ಕೃತರ ಸಾಧನೆಯನ್ನು ಬಣ್ಣಿಸಿದರು.

‘ನಮ್ಮ ನಡುವೆ ಇನ್ನೂ ಅನೇಕ ಸಾಧಕರಿದ್ದಾರೆ. ಆದರೆ, ಆಯಾ ಆಚರಣೆ ವರ್ಷಕ್ಕೆ ತಕ್ಕಂತೆ ಪ್ರಶಸ್ತಿ ನೀಡಬೇಕು ಎನ್ನುವ ನಿಯಮವನ್ನು ಮಾಡಿಕೊಂಡಿರುವ ಕಾರಣಕ್ಕೆ ಈ ಬಾರಿ 70 ಸಾಧಕರನ್ನು ಗುರುತಿಸಲಾಗಿದೆ’ ಎಂದರು.

ಸಂಕೀರ್ಣ ವಿಭಾಗದಲ್ಲಿ ಆಯ್ಕೆಯಾಗಿರುವ ಪೆನ್ನ ಒಬಳಯ್ಯ ಅವರ ಪರವಾಗಿ ಪುತ್ರಿ ಪ್ರಶಸ್ತಿ ಸ್ವೀಕರಿಸಿದರು.

ಪ್ರಶಸ್ತಿಯು ₹5 ಲಕ್ಷ ನಗದು, 25 ಗ್ರಾಂ ಚಿನ್ನ ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಇಲಾಖೆ ಕಾರ್ಯದರ್ಶಿ ಟಿಎಚ್ಎಂ ಕುಮಾರ್, ನಿರ್ದೇಶಕಿ ಗಾಯತ್ರಿ, ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಇದ್ದರು.

ವಿಶ್ವ ಮಾನವರಾಗೋಣ: ಪ್ರಕಾಶ್ ರಾಜ್

‘ದೇಶದಲ್ಲಿ ನಡೆಯುತ್ತಿರುವ ವಿದ್ರೋಹ ಕೃತ್ಯ ತಡೆಗೆ ಈ ಸರ್ಕಾರ ಕಠಿಣ ಕ್ರಮಕೈಗೊಳ್ಳುತ್ತಿದೆ. ಸರ್ವಜನಾಂಗದ ಶಾಂತಿಯ ತೋಟದಲ್ಲಿ ನಾವೆಲ್ಲರೂ ವಿಶ್ವ ಮಾನವರಾಗಬೇಕು’ ಎಂದು ನಟ ಪ್ರಕಾಶ್ ರಾಜ್ ಹೇಳಿದರು.

ಪ್ರಶಸ್ತಿ ಪುರಸ್ಕೃತರ ಪರವಾಗಿ ಮಾತನಾಡಿದ ಅವರು, ‘ರಾಜ್ಯೋತ್ಸವ ಅಂದರೆ ಭಾಷಾಭಿಮಾನ ಅಲ್ಲ. ಭಾಷೆಯ ಗರ್ಭ, ಭಾವವೆಂದರೆ ಬಸವಣ್ಣ, ಕನ್ನಡದ ಭಾಷೆಯ ಭಾವ ಸರ್ವ ಜನಾಂಗದ ಶಾಂತಿಯ ತೋಟ. ಇದು ಕುವೆಂಪು ಅವರ ಸಂದೇಶ. ಎಲ್ಲ ಧರ್ಮದರನ್ನು ಅಪ್ಪಿಕೊಂಡು ಬದುಕು ನಡೆಸುವುದೇ ರಾಜ್ಯೋತ್ಸವ’ ಎಂದರು.

‘ಅಧಿಕಾರ ಕೇಂದ್ರದಿಂದ ಕಬ್ಜಾ’

ಒಂದನೇ ಪುಟದಿಂದ...

‘ಒಕ್ಕೂಟ ಸರ್ಕಾರದ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದೇವೆ. ಜನ ಸಮುದಾಯವು ಕೂಡ ಗಂಭೀರವಾಗಿ ಪ್ರಶ್ನಿಸಬೇಕಾದ ಅನಿವಾರ್ಯ ಸಂದರ್ಭ ಉದ್ಭವಿಸಿದೆ’ ಎಂದು ಸಿದ್ದರಾಮಯ್ಯ ಹೇಳಿದರು. ‘ಮಾಹಿತಿ ತಂತ್ರಜ್ಞಾನ ಯುಗ ಈಗ ಕೃತಕ ಬುದ್ಧಿಮತ್ತೆಯ ಯುಗವಾಗಿ ಮಾರ್ಪಾಡಾಗುತ್ತಿದೆ. ಇದರಿಂದ ಉದ್ಯೋಗ ನಷ್ಟವಾಗಬಹುದು ಎಂಬ ಆತಂಕವೂ ಎದುರಾಗಿದೆ. ಉದ್ಯೋಗ ನಷ್ಟವಾಗ ದಂತೆ ನೋಡಿಕೊಳ್ಳಲು ಸರ್ಕಾರ ಬದ್ಧವಾಗಿದೆ. ಕನ್ನಡವನ್ನು ಹೊಸ ತಂತ್ರಜ್ಞಾನದ ಭಾಷೆಯನ್ನಾಗಿಸಲು ವಿದ್ವಾಂಸರು, ತಾಂತ್ರಿಕ ತಜ್ಞರು ಮುಂದಾಗಬೇಕು’ ಎಂದು ಮನವಿ ಮಾಡಿದರು.

‘ನಾನು ದ್ವಿಭಾಷಾ ನೀತಿ ಪರ’

ಒಂದನೇ ಪುಟದಿಂದ...

ಕಂಠೀರವ ಕ್ರೀಡಾಂಗಣ ಮತ್ತು ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಅವರು ಹಿಂದಿ ಹೇರಿಕೆ ವಿರುದ್ಧ ಮಾತನಾಡಿದರು.

ಈ ಬಾರಿ ₹2,500 ಕೋಟಿ ವೆಚ್ಚದಲ್ಲಿ 800 ಸರ್ಕಾರಿ ಶಾಲೆಗಳನ್ನು, 100 ಉರ್ದು ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ.

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಸಿಎಂ ಹೇಳಿದ್ದೇನು?

- ಹಿಂದಿ ಭಾಷೆ ಹೇರಿಕೆಗೆ ಹುನ್ನಾರ ನಡೆಯುತ್ತಿದೆ. ಹಿಂದಿ, ಸಂಸ್ಕೃತ ಭಾಷೆಗಳ ಅಭಿವೃದ್ಧಿಗಷ್ಟೇ ಅನುದಾನ ನೀಡಲಾಗುತ್ತಿದೆ. ಕನ್ನಡ ಸೇರಿದಂತೆ ಉಳಿದ ಭಾಷೆಗಳನ್ನು ಕೇಂದ್ರ ನಿರ್ಲಕ್ಷಿಸುತ್ತಿದೆ.
- ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಕರ್ನಾಟಕಕ್ಕೆ ಕೊಡುತ್ತಿಲ್ಲ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದ್ದರೂ ಅನುದಾನಗಳನ್ನು ಕೊಡದೆ ಅನ್ಯಾಯ ಮಾಡಲಾಗುತ್ತಿದೆ.
- ಶಿಕ್ಷಣದಲ್ಲಿ ಕನ್ನಡವನ್ನು ನಿರ್ಲಕ್ಷಿಸಿ ಹಿಂದಿ ಮತ್ತು ಇಂಗ್ಲಿಷ್‌ಗೆ ಆದ್ಯತೆ ನೀಡುತ್ತಿರುವುದರಿಂದ ಬೇರೆ ಯಾವುದೇ ಭಾಷೆಗೆ ಬಾರದ ಆತಂಕ ಕನ್ನಡಕ್ಕೆ ಎದುರಾಗಿದೆ.

‘ಜ್ಞಾನಪೀಠ, ಭಾರತ ರತ್ನ ಪುರಸ್ಕೃತರ ಹುಟ್ಟೂರಿಗೆ ತಲಾ ₹ 1 ಕೋಟಿ’

ಕಲಬುರಗಿ: ‘ಜ್ಞಾನಪೀಠ ಮತ್ತು ಭಾರತ ರತ್ನ ಪ್ರಶಸ್ತಿ ಪುರಸ್ಕೃತರಾದ, ಕನ್ನಡದ ಮಹನೀಯರ ಹುಟ್ಟೂರಿನ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ತಲಾ ₹ 1 ಕೋಟಿ ಅನುದಾನ ಬಿಡುಗಡೆ ಮಾಡಲಾಗುವುದು’ ಎಂದು ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಇಲ್ಲಿ ಘೋಷಣೆ ಮಾಡಿದರು.

‘ಜ್ಞಾನಪೀಠ ಪುರಸ್ಕೃತರಾದ ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಹಾಗೂ ‘ಭಾರತ ರತ್ನ’ ಪ್ರಶಸ್ತಿ ಪುರಸ್ಕೃತರಾದ ಸರ್ ಎಂ.ವಿಶ್ವೇಶ್ವರಯ್ಯ, ಭೀಮಸೇನ ಜೋಶಿ ಅವರ ಹುಟ್ಟೂರುಗಳ ಅಭಿವೃದ್ಧಿಗೆ ಅನುದಾನ ನೀಡಲಾಗುತ್ತದೆ. ಸಿ.ಎನ್.ಆರ್. ರಾವ್ ಅವರ ಹುಟ್ಟೂರು ಬೆಂಗಳೂರು ಆಗಿದ್ದು,. ನಗರ ಪ್ರದೇಶ ಆದ್ದರಿಂದ ಐಟಿ ಬಿಟಿ ಇಲಾಖೆಯಿಂದ ಅನುದಾನ ನೀಡಲಾಗುವುದು ಎಂದರು. ‘ಸ್ಥಳೀಯರ ಬೇಡಿಕೆ ಮೇರೆಗೆ 2–3 ತಿಂಗಳಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು’ ಎಂದು ಅವರು ತಿಳಿಸಿದರು.

ಪ್ರತ್ಯೇಕ ರಾಜ್ಯದ ಕೂಗು: ಪ್ರತ್ಯೇಕ ರಾಜ್ಯ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿ ನಗರದಲ್ಲಿ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಧ್ವಜಾರೋಹಣಕ್ಕೆ ಯತ್ನಿಸಿದ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಜಾಗೃತಿ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ಸೇರಿದಂತೆ ಹಲವು ಮುಖಂಡರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

‘ಉರ್ದು ಶಾಲೆಗಳಲ್ಲಿ ಕನ್ನಡ ಕಲಿಕೆ ಕಡ್ಡಾಯ’

ಹೊಸಪೇಟೆ (ವಿಜಯನಗರ): ‘ರಾಜ್ಯದಲ್ಲಿ ಎಲ್ಲರೂ ಕನ್ನಡ ಕಲಿಯಬೇಕು ಎಂಬ ಉದ್ದೇಶದಿಂದ ಎಲ್ಲ ಮದರಸ ಮತ್ತು ಉರ್ದು ಶಾಲೆಗಳಲ್ಲಿ ಕನ್ನಡ ಕಲಿಕೆ ಆರಂಭಿಸಲಾಗಿದೆ’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಇಲ್ಲಿ ಶನಿವಾರ ಹೇಳಿದರು.



ಜಮೀರ್ ಅಹಮದ್

ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು, ‘ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮನವಿಯಂತೆ ಮದರಸಗಳಲ್ಲಿ 90 ದಿನದಲ್ಲಿ ಕನ್ನಡ ಕಲಿಸುವ ಯೋಜನೆ ಆರಂಭವಾಗಿದೆ. ಉರ್ದು ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡ, ಇಂಗ್ಲಿಷ್ ಭಾಷೆ ಕಲಿಸಲು ಆದೇಶಿಸಿದೆ’ ಎಂದರು.

ತಲೆಕೆಳಗಾಗಿ ಹಾರಿದ ರಾಷ್ಟ್ರಧ್ವಜ

ಸಿಂದಗಿ (ವಿಜಯಪುರ ಜಿಲ್ಲೆ): ಪಟ್ಟಣದ ತಾಲ್ಲೂಕು ಪ್ರಜಾಸೌಧ ಆವರಣದಲ್ಲಿ ತಾಲ್ಲೂಕು ಆಡಳಿತ ಏರ್ಪಡಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜವನ್ನು ತಲೆಕೆಳಗಾಗಿ ಹಾರಿಸಲಾಯಿತು. ಶಾಸಕ ಅಶೋಕ ಮನಗೂಳಿ ಸಮ್ಮುಖದಲ್ಲಿ ತಹಶೀಲ್ದಾರ್ ಕರೆಪ್ಪ ಧ್ವಜಾರೋಹಣ ನೆರವೇರಿಸಿದ್ದರು. ರಾಷ್ಟ್ರಧ್ವಜ ತಲೆಕೆಳಗಾಗಿತ್ತು. ರಾಷ್ಟ್ರಗೀತೆ ಬಳಿಕ, ಧ್ವಜವನ್ನು ಕೆಳಗಿಳಿಸಿ ಪುನಃ ಆರೋಹಣ ಮಾಡಲಾಯಿತು.



ಇಂಗ್ಲಿಷ್ ಪುಸ್ತಕಗಳ ಕೊಡುಗೆ!



ಜೇವರ್ಗಿ (ಕಲಬುರಗಿ ಜಿಲ್ಲೆ): ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಸರ್ಕಲ್ ಹತ್ತಿರದ ಟೌನ್‌ಹಾಲ್‌ನಲ್ಲಿ ಶನಿವಾರ ತಾಲ್ಲೂಕು ಆಡಳಿತ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕೊಡುಗೆಯಾಗಿ ಇಂಗ್ಲಿಷ್ ಪುಸ್ತಕ ನೀಡಲಾಗಿದೆ.

ತಹಶೀಲ್ದಾರ್ ಮಲ್ಲಣ್ಣ ಯಲಗೋಡ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಕನ್ನಡ ಹೋರಾಟಗಾರರಿಗೆ, ಎಸ್ಎಸ್ಎಲ್‌ಸಿ ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಿಗೆ ಸನ್ಮಾನಿಸಲಾಯಿತು.

ಈ ವೇಳೆ ಎಲ್ಲ ಅತಿಥಿಗಳಿಗೆ ಮುಚ್ಚಿದ ಲಕೋಟೆಯಲ್ಲಿ ಇಂಗ್ಲಿಷ್ ಪುಸ್ತಕಗಳನ್ನು ನೀಡಿ ಗೌರವಿಸಲಾಗಿದೆ. ಈ ಬಗ್ಗೆ ಕನ್ನಡಪರ ಹೋರಾಟಗಾರರಿಂದ ಆಕ್ರೋಶ ವ್ಯಕ್ತವಾಗಿದೆ.

ಬೆಳಗಾವಿಯಲ್ಲಿ ರಾಜ್ಯೋತ್ಸವ: ಲಕ್ಷಾಂತರ ಜನರ ಸಂಭ್ರಮ, ಹಾಡು, ಜೈಕಾರ

ಗಡಿ ಜಿಲ್ಲೆಯಲ್ಲಿ ಕನ್ನಡ ಡಿಂಡಿಮ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಎಲ್ಲಿ ನೋಡಿದರೂ ಜನ, ಎತ್ತ ನೋಡಿದರೂ ಸಂಭ್ರಮ, 5 ಲಕ್ಷಕ್ಕೂ ಹೆಚ್ಚು ಕನ್ನಡಾಭಿಮಾನಿಗ ಸಂತಸ, ನೆಲ ನಡುಗಿಸುವಂಥ ಸಂಗೀತ, ಹಾಡು, ಯುವಜನರ ನೃತ್ಯೋತ್ಸಾಹ, ಉಕ್ಕೇರಿ ಬಂದ ಅಭಿಮಾನದ ಹೊಳೆ...

ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಶನಿವಾರ ಕಂಡುಬಂದ ರಾಜ್ಯೋತ್ಸವ ಸಡಗರದ ದೃಶ್ಯಗಳಿವು. ಶುಕ್ರವಾರ ರಾತ್ರಿ 12ಕ್ಕೆ ಆರಂಭವಾದ ವೈಭವ ಶನಿವಾರ ತಡರಾತ್ರಿಯವರೆಗೂ ಮುಂದುವರಿಯಿತು. ಗಡಿಯಲ್ಲಿ ನಾಡದೇವಿ ಭುವನೇಶ್ವರಿಯ ವೈಭವ ಮರುಕಳಿಸಿತು.

ಬೆಳಿಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ರಾಣಿ ಚನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಉತ್ಸವಕ್ಕೆ ಚಾಲನೆ ನೀಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು, ಯುವತಿಯರು, ಮಹಿಳೆಯರು, ಮಕ್ಕಳು, ಹಿರಿಯರು ಉತ್ಸವಕ್ಕೆ ಸಾಕ್ಷಿಯಾದರು.

ನಗರದೆಲ್ಲೆಡೆ ಜೈಕಾರಗಳು ಮುಗಿಲು ಮುಟ್ಟಿದವು. ಕಂಡಷ್ಟೂ ದೂರ ಕನ್ನಡ ಬಾವುಟಗಳ ಹಾರಾಟವೇ ಗೋಚರಿಸಿತು. ಎಲ್ಲೆಲ್ಲೂ ಕನ್ನಡ ಝೇಂಕಾರ ಮೊಳಗಿತು. ಕೆಂಪು- ಹಳದಿ ಬಣ್ಣದ ದಿರಿಸು ಧರಿಸಿ ಬಂದ ಹಲವರು ಕನ್ನಡ ಧ್ವಜವನ್ನು ಪ್ರತಿನಿಧಿಸುವಂತೆ ಕಂಡರು.

ಯುವಕರು ಹಣೆಗೆ ಕೆಂಪು- ಹಳದಿ ತಿಲಕ ಇಟ್ಟುಕೊಂಡರೆ; ಯುವತಿಯರು ತಾವೇನೂ ಕಮ್ಮಿ ಇಲ್ಲ ಎಂಬಂತೆ ಕನ್ನಡ ಧ್ವಜದ ಬಣ್ಣ ಬಳಿದುಕೊಂಡು ಖುಷಿಪಟ್ಟರು. ಜನರಿಂದ ರಸ್ತೆಗಳು, ವೃತ್ತಗಳು, ಚೌಕಗಳು, ಮನೆಯ ಮಹಡಿಗಳು ಕಿಕ್ಕಿರಿದು ತುಂಬಿದವು. ಪರಿಣಾಮ ನಗರದ ನಾಲ್ಕೂ ದಿಕ್ಕಿನ ಸಂಚಾರ ಸಂಪೂರ್ಣ ಬಂದ್ ಆಯಿತು.

ನಾಡದೇವಿ ಭುವನೇಶ್ವರಿ, ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕ ದೇವಿ, ಇಮ್ಮಡಿ ಪುಲಿಕೇಶಿ, ಶ್ರೀಕೃಷ್ಣ ದೇವರಾತ, ಹಳಗನ್ನಡ ಕವಿಗಳು, ಜ್ಞಾನಪೀಠ ಪುರಸ್ಕೃತರ ಭಾವಚಿತ್ರಗಳು, ಹಂಪಿಯ ಕಲ್ಲಿನ ರಥ, ಕದಂಬರ ದೇವಸ್ಥಾನ, ಧರ್ಮಸ್ಥಳ ಕ್ಷೇತ್ರ, ಆಪರೇಷನ್ ಸಿಂಧೂರದ ಕಲಾಕೃತಿ, ಕಾಂತಾರ ಚಿತ್ರದ ವೇಷಧಾರಿಗಳು... ಹೀಗೆ ವೈವಿಧ್ಯ ರೂಪಕಗಳು ಗಮನಸೆಳೆದವು.



ಬೆಳಗಾವಿಯಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯೋತ್ಸವ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಕುಣಿದು ಕುಪ್ಪಳಿಸಿದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ರಾಜ್ಯೋತ್ಸವ ವೇಳೆ ಚಾಕು ಇರಿತ: ಐವರಿಗೆ ಗಾಯ


ಬೆಳಗಾವಿ: ಇಲ್ಲಿನ ಸದಾಶಿವ ನಗರದಲ್ಲಿ ಶನಿವಾರ ರಾಜ್ಯೋತ್ಸವ ಮೆರವಣಿಗೆಗೆ ನುಗ್ಗಿದ ದುಷ್ಕರ್ಮಿಗಳ ಗುಂಪೊಂದು ಐವರಿಗೆ ಚಾಕು– ಜಂಬೆಗಳಿಂದ ಇರಿದು ಪರಾರಿಯಾಗಿದೆ. ಗಾಯಗೊಂಡ ಐವರನ್ನೂ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರ ಸ್ಥಿತಿ ಗಂಭೀರವಾಗಿದೆ.

ಭುವನೇಶ್ವರಿ ಮೂರ್ತಿ ಮೆರವಣಿಗೆ ವೇಳೆ ಮಾಡುತ್ತ ಯುವಕರ ಗುಂಪು ನರ್ತಿಸುತ್ತಿತ್ತು. ಏಕಾಏಕಿ ಗುಂಪಿಗೆ ನುಗ್ಗಿ ಕೆಲವರು ಹಲ್ಲೆ ಮಾಡಿದ್ದಾರೆ. ಯುವಕರು ನೆಲಕ್ಕೆ ಬಿದ್ದು ರಕ್ತಸ್ರಾವ ದಿಂದ ಒದ್ದಾಡುತ್ತಿದ್ದಂತೆಯೇ ಸ್ಥಳದಿಂದ ಪರಾರಿಯಾದರು. ‘ಯುವಕರ ತಲೆ, ಹೊಟ್ಟೆ, ಬೆನ್ನು, ಗುದದ್ವಾರ ಹೀಗೆ ದೇಹದ ವಿವಿಧ ಭಾಗಗಳಿಗೆ ಚಾಕು ಏಟು ಬಿದ್ದಿವೆ’ ಎಂದು ಎಪಿಎಂಸಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಕ್ಕಳ ಕೊಂದು ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಟ್ಟದಪುರ (ಮೈಸೂರು ಜಿಲ್ಲೆ): ಗ್ರಾಮದ ಸುಣ್ಣದಬೀದಿಯ ನಿವಾಸಿ ಜಮೃದ್ ಷರೀಫ್ ಅವರ ಪುತ್ರಿ ಅರ್ಬಿಯಾ ಬಾನು (25) ಅವರು ಶನಿವಾರ ಮಕ್ಕಳಾದ ಅನಂ ಫಾತಿಮಾ (2) ಮತ್ತು 8 ದಿನದ ಶಿಶುವನ್ನು ಕೊಂದು ತಾವೂ ಆತ್ಮಹತ್ಯೆ ಮಾಡಿಕೊಂಡರು.



ಅರ್ಬಿಯಾ

‘ಚಾಕುವಿನಿಂದ ಮಕ್ಕಳ ಕತ್ತು ಕೊಯ್ದಿದ್ದು, ತಾವೂ ಕತ್ತು ಕೊಯ್ದುಕೊಂಡು ಆತ್ಮಹತ್ಯೆ ಬಾನು ಮಾಡಿಕೊಂಡಿದ್ದಾರೆ. ಜನಿಸಿದ ಎರಡೂ ಮಕ್ಕಳು ಹೆಣ್ಣೇ ಆದ್ದರಿಂದ ಈ ಕೃತ್ಯ ಎಸಗಿದ್ದಾರೆ ಎಂದು ಮಹಿಳೆಯ ತಂದೆ ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಅರೇನಹಳ್ಳಿಯ ಸೈಯದ್ ಮುಸಾವೀರ್- ಅರ್ಬಿಯಾ ಬಾನು ದಂಪತಿಯ ಮೊದಲ ಮಗಳು ಅಂಗವಿಕಲೆಯಾಗಿದ್ದಳು. ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚರಂಡಿಗೆ ಬಿದ್ದು ಮಗು ಸಾವು

ಆಳಂದ: ತಾಲ್ಲೂಕಿನ ಮಾದನ ಹಿಪ್ಪರಗಿ ಗ್ರಾಮದಲ್ಲಿ ಮನೆ ಮುಂದೆ ಆಟ ಆಡುತ್ತಿದ್ದ ಮೂರು ವರ್ಷದ ಬಾಲಕಿ ಚರಂಡಿಗೆ ಬಿದ್ದು ಸಾವನ್ನಪ್ಪಿದ ಘಟನೆ ಶನಿವಾರ ನಡೆದಿದೆ. ಮಾದನ ಹಿಪ್ಪರಗಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಶಿವಲಿಂಗಪ್ಪ ಇಂಗಳೆ ಅವರ ಮಗಳು ಶ್ರಾವಣಿ (3) ಮೃತಳು. ಮನೆ ಮುಂದೆ ಮಗು ಆಟವಾಡುತ್ತಿತ್ತು. ಮಗುವಿನ ಸಪ್ಪಳ ಕೇಳದಿದ್ದಾಗ ಹುಡುಕಾಡಿದ್ದು, ಮುಖ್ಯ ರಸ್ತೆಗೆ ನಿರ್ಮಿಸಿದ್ದ ಚರಂಡಿಯಲ್ಲಿ ಮಗುವಿನ ಶವ ಕಂಡುಬಂದಿದೆ.

ಬಾಲಕಿ ನಾಲೆ ಪಾಲು- ಮೂವರು ನಾಪತ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ನೀರಾಟವಾಡಲು ನಾಲೆಗೆ ಇಳಿದ ಆರು ವಿದ್ಯಾರ್ಥಿಗಳ ಪೈಕಿ ಒಬ್ಬ ಬಾಲಕಿ ಮೃತಪಟ್ಟಿದ್ದು, ಮೂವರು ಬಾಲಕಿಯರು ಕೊಚ್ಚಿಕೊಂಡು ಹೋಗಿದ್ದಾರೆ. ಇಬ್ಬರನ್ನು ಸ್ಥಳೀಯರು ರಕ್ಷಿಸಿದ್ದಾರೆ. ತಾಲ್ಲೂಕಿನ ಮಂಡ್ಯಕೊಪ್ಪಲು ಸಮೀಪದ ಕಾವೇರಿ ಬೋರೇದೇವರ ದೇವಾಲಯದ ಸಮೀಪದ ರಾಮಸ್ವಾಮಿ ನಾಲೆಯಲ್ಲಿ ಶನಿವಾರ ದುರ್ಘಟನೆ ನಡೆದಿದೆ.

ಮೈಸೂರಿನ ಶಾಂತಿನಗರದ ಆಯಿಷಾ ಅಫ್ರೀನ್ (14) ಮೃತಪಟ್ಟಿದ್ದು, ಅದೇ ಶಾಲೆಯ ತರ್ಬೀನ್ (13), ಅಮೀನಾ (13) ಮತ್ತು ಅನಿಷಾ (14) ಅವರ ಸುಳಿವು ಸಿಕ್ಕಿಲ್ಲ.

ರೌಡಿಶೀಟರ್ ಜತೆ ಇನ್‌ಸ್ಪೆಕ್ಟರ್ ಸೆಲ್ಫಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಎಂಇಎಸ್ ಮುಖಂಡ, ರೌಡಿಶೀಟರ್ ಶುಭಂ ಶೆಳಕೆ ಜತೆಗೆ ಇಲ್ಲಿನ ಮಾಳಮಾರುತಿ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಜೆ.ಎಂ.ಕಾಲಿಮಿರ್ಚಿ ಅವರು ಎಂಇಎಸ್‌ನವರ ಕರಾಳ ದಿನಾಚರಣೆ ವೇಳೆಯೇ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಕರ್ತವ್ಯ ಪ್ರಜ್ಞೆ ಮರೆತ ಅಧಿಕಾರಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳು ಹರಿದಾಡಿದವು.

‘ಕರಾಳ ದಿನಾಚರಣೆಯಲ್ಲಿ ಭಾಗಿಯಾಗದಂತೆ ಶುಭಂ ಶೆಳಕೆಗೆ ಎಚ್ಚರಿಕೆ ನೀಡಲಾಗಿತ್ತು. ಆತನ ಮೇಲೆ ನಿಗಾ ಇರಿಸಲು ಹಿರಿಯ ಅಧಿಕಾರಿಗಳು ಸೂಚಿಸಿದ್ದರು. ಅದಕ್ಕೆ ಸಂಭಾಜಿ ಉದ್ಯಾನಕ್ಕೆ ಬಂದಾಗ ಮೇಲಧಿಕಾರಿಗೆ ವರದಿ ಮಾಡಲು ಫೋಟೊ ಕ್ಲಿಕ್ಕಿಸಿಕೊಂಡಿದ್ದೇನೆ. ಅಭಿಮಾನಕ್ಕಾಗಿ ಅಲ್ಲ’ ಎಂದು ಜೆ.ಎಂ.ಕಾಲಿಮಿರ್ಚಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ರಾಜ್ಯದ ವಿರುದ್ಧ ಯಾವುದೇ ಹೇಳಿಕೆ ನೀಡುವುದಿಲ್ಲ ಎಂದು ಶುಭಂ ಶೆಳಕೆ ನ್ಯಾಯಾಲಯಕ್ಕೆ ₹5 ಲಕ್ಷ ಬಾಂಡ್ ನೀಡಿದ್ದಾರೆ. ನಿಯಮ ಮೀರಿದ್ದರೆ, ಬಾಂಡ್ ಮುಟ್ಟುಗೋಲು ಹಾಕಿಕೊಳ್ಳಲಾಗುವುದು’ ಎಂದು ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದರು.



ಶುಭಂ ಶೆಳಕೆ ಜತೆಗೆ ಪೊಲೀಸ್ ಇನ್‌ಸ್ಪೆಕ್ಟರ್ ಜೆ.ಎಂ.ಕಾಲಿಮಿರ್ಚಿ ಸೆಲ್ಫಿ ಕ್ಲಿಕ್ಕಿಸಿಕೊಂಡರು

ಇನ್‌ಸ್ಪೆಕ್ಟರ್ ವಿರುದ್ಧ ಕ್ರಮ-ಗೃಹ ಸಚಿವ



ಜಿ.ಪರಮೇಶ್ವರ

ತುಮಕೂರು: ಬೆಳಗಾವಿಯಲ್ಲಿ ಎಂಇಎಸ್ ಮುಖಂಡರ ಜತೆಗೆ ಸೆಲ್ಫಿ ತೆಗೆದುಕೊಂಡ ಇನ್‌ಸ್ಪೆಕ್ಟರ್ ವಿರುದ್ಧ ಕ್ರಮಜರುಗಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಶನಿವಾರ ಇಲ್ಲಿ ಹೇಳಿದರು.

‘ಸೆಲ್ಫಿ ತೆಗೆದುಕೊಂಡ ಮಾತ್ರಕ್ಕೆ ಕನ್ನಡ ವಿರೋಧಿ ಮನಸ್ಥಿತಿ ಹೊಂದಿದ್ದಾರೆ ಎಂದು ಭಾವಿಸಲಾಗದು’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ‘ಕನ್ನಡ ನಾಡಿನ ಬದ್ಧತೆ, ತತ್ವಕ್ಕೆ ವಿರುದ್ಧವಾಗಿ ಹೋಗುವ ಅಧಿಕಾರಿ, ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ನೆಲ, ಜಲ, ಭಾಷೆ ವಿಷಯದಲ್ಲಿ ರಾಜಿ ಆಗುವುದಿಲ್ಲ’ ಎಂದರು.

ಆಳಂದ ಮತಕಳವು ಪ್ರಕರಣ: ಸುಭಾಷ ಗುತ್ತೇದಾರ ಮನೆಯ ಡಿವಿಆರ್ ಪರಿಶೀಲನೆಯಲ್ಲಿ ಪತ್ತೆ

ಮತದಾರರ ಪಟ್ಟಿಗೆ ಬೆಂಕಿ: ದೃಶ್ಯ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದ ಬಿಜೆಪಿಯ ಪರಾಜಿತ ಅಭ್ಯರ್ಥಿ ಸುಭಾಷ ಗುತ್ತೇದಾರ ಅವರ ಮನೆಯಲ್ಲಿ ಮತದಾರರ ಪಟ್ಟಿಯನ್ನು ಸುಟ್ಟು ಹಾಕಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಸದಸ್ಯರು ಅಕ್ಟೋಬರ್ 17ರಂದು ಕಲಬುರಗಿಯಲ್ಲಿ ದಾಳಿ ನಡೆಸಿದ ಹೊತ್ತಿನಲ್ಲೇ, ಆಳಂದದಲ್ಲಿರುವ ಸುಭಾಷ ಗುತ್ತೇದಾರ ಅವರ ಮನೆಯ ಮುಂದೆ ರಾಶಿಗಟ್ಟಲೆ ಕಾಗದ ಪತ್ರಗಳಿಗೆ ಬೆಂಕಿ ಹಚ್ಚಲಾಗಿತ್ತು. ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಬೆನ್ನಲ್ಲೇ ಮಿನಿಟ್ರಕ್ ಒಂದರಲ್ಲಿ, ಅರೆಬರೆ ಸುಟ್ಟ ಕಾಗದ ಪತ್ರಗಳನ್ನು ಸಾಗಿಸಿ ಅಮರ್ಜಾ ನದಿಗೆ ಎಸೆಯಲಾಗಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಭಾಷ ಗುತ್ತೇದಾರ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ವೇಳೆ, ಸಿ.ಸಿ.ಟಿ.ವಿ ದೃಶ್ಯಾವಳಿಗಳ ವಿವರಗಳನ್ನು ಎಸ್ಐಟಿಯು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಇರಿಸಿದೆ.



ಕಲಬುರಗಿಯ ಶಕಾಪುರ ಸೇತುವೆ ಬಳಿ ಅಮರ್ಜಾ ನದಿಗೆ ಎಸೆಯಲಾಗಿದ್ದ ಅರೆಬರೆ ಸುಟ್ಟ ಕಾಗದಪತ್ರಗಳು

ಸುಭಾಷ ಅವರ ಆಳಂದದ ಮನೆಯಲ್ಲಿ ಪರಿಶೀಲನೆ ನಡೆಸಿದ್ದ ಎಸ್ಐಟಿ ಅಧಿಕಾರಿಗಳು ಅಲ್ಲಿಂದ ಹಲವು ಸಾಕ್ಷ್ಯಗಳನ್ನು ಕಲೆಹಾಕಿದ್ದರು. ಅದರಲ್ಲಿ ಆಳಂದ ಮನೆಯ ಹೊರಗೆ ಮತ್ತು ಒಳಗಡೆ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳೂ ಇದ್ದವು. ದೃಶ್ಯಾವಳಿ ಇದ್ದ ಡಿವಿಆರ್ ಪರಿಶೀಲನೆಯ ನಂತರ ಹಲವು ಸುಳಿವುಗಳು ಲಭ್ಯವಾಗಿವೆ ಎಂದು ಮೂಲಗಳು ಹೇಳಿವೆ. ಡಿವಿಆರ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆದರೆ ಪ್ರಾಥಮಿಕ ಪರಿಶೀಲನೆ ವೇಳೆ ಸುಭಾಷ ಗುತ್ತೇದಾರ ಅವರ ಆಪ್ತ ಉದ್ಯಮಿಯೊಬ್ಬರು, ಆಳಂದದ ಮನೆಯಲ್ಲಿ ಕಾಗದಪತ್ರಗಳನ್ನು ಎತ್ತಿ ಸುರಿಯುತ್ತಿರುವುದು ಗೊತ್ತಾಗಿದೆ. ಅದೇ ಕಾಗದ ಪತ್ರಗಳಿಗೆ ಮನೆಯ ಹೊರಗೆ ಬೆಂಕಿ ಹಚ್ಚಲಾಗಿದೆ. ಆ ಕಾಗದ ಪತ್ರಗಳು ಮತದಾರರ ಚೀಟಿ ಎಂಬುದು ಪರಿಶೀಲನೆಯಲ್ಲಿ ಪತ್ತೆಯಾಗಿದೆ ಎಂದು ಖಚಿತಪಡಿಸಿವೆ.

ದೃಶ್ಯಾವಳಿಯಲ್ಲಿ ಇರುವ ವ್ಯಕ್ತಿಯನ್ನು ಗುರುತಿಸಲಾಗಿದೆ. ಆ ವ್ಯಕ್ತಿಯು ಸ್ಥಳೀಯ ಗುತ್ತಿಗೆದಾರ ಆಗಿದ್ದು, ಆಳಂದ ಕ್ಷೇತ್ರದ ಹಲವು ಸಿವಿಲ್ ಕಾಮಗಾರಿಗಳನ್ನು ನಡೆಸಿದ್ದಾರೆ. ಅವರ ಬ್ಯಾಂಕ್ ವಹಿವಾಟು ಮತ್ತು ಹಣಕಾಸು ವ್ಯವಹಾರಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಎಸ್ಐಟಿ ತನಿಖಾಧಿಕಾರಿಗಳು ಡಿವಿಆರ್‌ನ ವಿಧಿವಿಜ್ಞಾನ ಪರೀಕ್ಷೆಯ ವರದಿಗಾಗಿ ಕಾಯುತ್ತಿದ್ದಾರೆ ಎಂದು ಮಾಹಿತಿ ನೀಡಿವೆ. ಅಮರ್ಜಾ ನದಿಯಲ್ಲಿ ಎಸೆಯಲಾಗಿದ್ದ ಅರೆಬರೆ ಸುಟ್ಟ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿದೆ. ಅವುಗಳಲ್ಲಿ ಮತದಾರರ ಪಟ್ಟಿಗಳು, ಮತದಾರರ ಚೀಟಿಗಳು, ಮತದಾರರ ನೋಂದಣಿಯ ವಿವಿಧ ಅರ್ಜಿಗಳ ಪ್ರತಿಗಳು ಪತ್ತೆಯಾಗಿವೆ. ಆಳಂದ ಕ್ಷೇತ್ರದಲ್ಲಿ ಅಕ್ರಮವಾಗಿ ರದ್ದುಪಡಿಸಲು ಯತ್ನಿಸಲಾಗಿದ್ದ 5,994 ಮತದಾರರ ಚೀಟಿಗಳಿಗೂ, ಈ ಅರ್ಜಿಗಳಿಗೂ ಸಂಬಂಧವಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದಿವೆ.

‘ಶೀಘ್ರ ವಿಚಾರಣೆ’: ‘ಸುಭಾಷ ಗುತ್ತೇದಾರ ಅವರಿಗೆ ನ್ಯಾಯಾಲಯವು ನಿರೀಕ್ಷಣ ಜಾಮೀನು ನೀಡಿದ್ದರೂ, ವಿಚಾರಣೆಗೆ ಹಾಜರಾಗಬೇಕು ಮತ್ತು ತಮ್ಮ ಇರುವಿಕೆಯ ಬಗ್ಗೆ ಎಸ್ಐಟಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಷರತ್ತು ಹಾಕಿದೆ. ಹೀಗಾಗಿ ಅವರು ವಿಚಾರಣೆಗೆ ಹಾಜರಾಗಲೇಬೇಕಿದೆ’ ಎಂದು ಮೂಲಗಳು ತಿಳಿಸಿವೆ.

ಮುದ್ರೆಮನೆ ಕಾಫಿ (50 ಕೆ.ಜಿಗೆ)

ಎಪಿ	₹29250
ಎಸಿ	₹15400
ಆರ್‌ಪಿ	₹19000
ಆರ್‌ಸಿ	₹10950

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1405)
ಸೋಯಾ (ರಿಫೈನ್ಡ್)	₹1260 (1265)
ಸೂರ್ಯಕಾಂತಿ (ರಿಫೈನ್ಡ್)	₹1475 (1480)
ಪಾಮೋಲಿನ್	₹1260 (1265)

ಜಿಎಸ್‌ಟಿ: ₹1.96 ಲಕ್ಷ ಕೋಟಿ ಸಂಗ್ರಹ

ಅಕ್ಟೋಬರ್‌ನಲ್ಲಿ ತೆರಿಗೆ ಸಂಗ್ರಹ ಪ್ರಮಾಣ ಶೇಕಡ 4.6ರಷ್ಟು ಹೆಚ್ಚಳ: ಕೇಂದ್ರ ಸರ್ಕಾರ



ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಅಕ್ಟೋಬರ್ ತಿಂಗಳಲ್ಲಿ ₹1.96 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

2024ರ ಅಕ್ಟೋಬರ್‌ನಲ್ಲಿ ₹1.87 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಅಕ್ಟೋಬರ್ ವರಮಾನ ಸಂಗ್ರಹದಲ್ಲಿ ಶೇ 4.6ರಷ್ಟು ಹೆಚ್ಚಳವಾಗಿದೆ.

ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟಿನಿಂದ ಬರುವ ಜಿಎಸ್‌ಟಿ ವರಮಾನವು ಶೇ 2ರಷ್ಟು ಏರಿಕೆ ಕಂಡಿದ್ದು, ₹1.45 ಲಕ್ಷ ಕೋಟಿಯಾಗಿದೆ. ಆಮದು ಮಾಡಿಕೊಳ್ಳುವ ಸರಕುಗಳಿಂದ ಬಂದ ವರಮಾನವು ₹50,884 ಕೋಟಿಯಾಗಿದ್ದು, ಶೇ 13ರಷ್ಟು ಏರಿಕೆಯಾಗಿದೆ. ಜಿಎಸ್‌ಟಿ ಮರುಪಾವತಿಯಲ್ಲಿ ಶೇ 39.6ರಷ್ಟು ಏರಿಕೆಯಾಗಿದ್ದು, ₹26,934 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.69 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಸೆಪ್ಟೆಂಬರ್ 22ರಿಂದ ಜಾರಿಗೆ ಬರುವಂತೆ ಜಿಎಸ್‌ಟಿ ಮಂಡಳಿಯು 375ಕ್ಕೂ ಹೆಚ್ಚು ವಸ್ತುಗಳ ಮೇಲಿನ ಜಿಎಸ್‌ಟಿ ಇಳಿಕೆ ಮಾಡಿತ್ತು. ಅಕ್ಟೋಬರ್‌ನಲ್ಲಿನ ಜಿಎಸ್‌ಟಿ ಸಂಗ್ರಹವು ಹಬ್ಬದ ಋತುವಿನಲ್ಲಿನ ಮಾರಾಟ ಮತ್ತು ಸರಕುಗಳಿಗೆ ಹೆಚ್ಚಿದ ಬೇಡಿಕೆಯನ್ನು ಪ್ರತಿಬಿಂಬಿಸುತ್ತದೆ.


ಪ್ರಸಕ್ತ ಆರ್ಥಿಕ ವರ್ಷದ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹವು ಕ್ರಮವಾಗಿ ಶೇ 6.5 ಮತ್ತು ಶೇ 9.1ರಷ್ಟು ಹೆಚ್ಚಾಗಿ ₹1.86 ಲಕ್ಷ ಕೋಟಿ ಮತ್ತು ₹1.89 ಲಕ್ಷ ಕೋಟಿಗೆ ತಲುಪಿತ್ತು. ಜಿಎಸ್‌ಟಿ ದರ ಕಡಿತಗೊಳಿಸಿದ ನಂತರ ಅಕ್ಟೋಬರ್‌ನಲ್ಲಿ ವರಮಾನದ ಬೆಳವಣಿಗೆಯಲ್ಲಿ ನಿಧಾನಗತಿ ಕಂಡುಬಂದಿದೆ.

'ಹಬ್ಬದ ಋತುವಿನ ಮುಂಚಿತವಾಗಿ ಜಿಎಸ್‌ಟಿ ದರ ಇಳಿಕೆ ಆಗಲಿರುವುದರಿಂದ ಗ್ರಾಹಕರು ಖರ್ಚು ಮಾಡುವುದನ್ನು ಮುಂದೂಡಿದರು. ಇದರಿಂದ ಜಿಎಸ್‌ಟಿ ಸಂಗ್ರಹದಲ್ಲಿ ಮಂದಗತಿ ಉಂಟಾಗಿದೆ. ಮುಂದಿನ ತಿಂಗಳಿನಲ್ಲಿ ಸಂಗ್ರಹವು ಹೆಚ್ಚಳವಾಗುವ ನಿರೀಕ್ಷೆ ಇದೆ' ಎಂದು ಇವೈ ಇಂಡಿಯಾ ತೆರಿಗೆ ಪಾಲುದಾರ ಸೌರಭ್ ಅಗರವಾಲ್ ಹೇಳಿದ್ದಾರೆ.

ಜಿಎಸ್‌ಟಿ ಸಂಗ್ರಹದಲ್ಲಿ ಬೆಳವಣಿಗೆ ಮತ್ತು ಕುಸಿತ ದಾಖಲಿಸಿದ ರಾಜ್ಯಗಳು

ರಾಜ್ಯಗಳು	ಬೆಳವಣಿಗೆ (ಶೇಕಡವಾರು)	ರಾಜ್ಯಗಳು	ಕುಸಿತ (ಶೇಕಡವಾರು)
ಕರ್ನಾಟಕ	10	ಜಾರ್ಖಂಡ್	-15
ತೆಲಂಗಾಣ	10	ಉತ್ತರಾಖಂಡ	-13
ಗುಜರಾತ್	6	ಆಂಧ್ರ ಪ್ರದೇಶ	-9
ಒಡಿಶಾ	5	ಜಮ್ಮು ಮತ್ತು ಕಾಶ್ಮೀರ	-9
ತಮಿಳುನಾಡು	4	ಮಧ್ಯಪ್ರದೇಶ	-5
ಪಂಜಾಬ್	4	ರಾಜಸ್ಥಾನ	-3
ಬಿಹಾರ	3	ಅಸ್ಸಾಂ	-3
ಮಹಾರಾಷ್ಟ್ರ	3	ಕೇರಳ	-2
ಉತ್ತರಪ್ರದೇಶ	2	ದೆಹಲಿ	-1
ಹರಿಯಾಣ	0	ಪಶ್ಚಿಮ ಬಂಗಾಳ	-1

ಜಿಎಸ್‌ಟಿ ಸಂಗ್ರಹ



ಕರ್ನಾಟಕದಲ್ಲಿ ಶೇ 10ರಷ್ಟು ಬೆಳವಣಿಗೆ

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ₹13,081 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಅದು ಈ ವರ್ಷದ ಅಕ್ಟೋಬರ್‌ನಲ್ಲಿ ₹14,395 ಕೋಟಿಗೆ ಏರಿಕೆಯಾಗಿದ್ದು, ಶೇ 10ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಇದು ರಾಷ್ಟ್ರೀಯ ಸರಾಸರಿ ಬೆಳವಣಿಗೆ ದರಕ್ಕಿಂತ (ಶೇ 2ರಷ್ಟು) ಹೆಚ್ಚು. ದೇಶದ ದೊಡ್ಡ ರಾಜ್ಯಗಳ ಪೈಕಿ ಜಿಎಸ್‌ಟಿ ಸಂಗ್ರಹದಲ್ಲಿ ಗರಿಷ್ಠ ಬೆಳವಣಿಗೆ ದಾಖಲಿಸಿದ ಶ್ರೇಯ ಕರ್ನಾಟಕಕ್ಕೆ ಸಲ್ಲುತ್ತದೆ. ತೆಲಂಗಾಣವು ಶೇ 10ರಷ್ಟು (₹5,211 ಕೋಟಿಯಿಂದ ₹5,726 ಕೋಟಿಯ) ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ದಾಖಲಿಸಿದೆ.

ಮಹಾರಾಷ್ಟ್ರವು ಅತಿ ಹೆಚ್ಚು, ₹32,025 ಕೋಟಿ ಜಿಎಸ್‌ಟಿ ಸಂಗ್ರಹಿಸಿದ ರಾಜ್ಯ ಎನಿಸಿದೆ. ಆದರೆ, ಕಳೆದ ಅಕ್ಟೋಬರ್‌ಗೆ ಹೋಲಿಸಿದರೆ ಈ ಸಾಲಿನ ಅಕ್ಟೋಬರ್‌ನಲ್ಲಿ ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ಶೇ 3ರಷ್ಟು ಮಾತ್ರ.

ಸುದ್ದಿ 2 ನಿಮಿಷ

ವಾಣಿಜ್ಯ ಸಿಲಿಂಡರ್ ದರ ₹5 ಇಳಿಕೆ

ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ಬೆಲೆ ಏರಿಕೆಯಾಗಿದ್ದರೆ, ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಇಳಿಕೆ ಆಗಿದೆ. ಪರಿಷ್ಕೃತ ದರವು ಶನಿವಾರದಿಂದ ಜಾರಿಗೆ ಬಂದಿದೆ.

ವಾಣಿಜ್ಯ ಉದ್ದೇಶಕ್ಕೆ ಬಳಸುವ 19 ಕೆ.ಜಿ ತೂಕದ ಸಿಲಿಂಡರ್ ದರ ₹5 ಇಳಿಕೆ ಆಗಿದ್ದು, ನವದೆಹಲಿಯಲ್ಲಿ ₹1,590ರಂತೆ ಮಾರಾಟವಾಗಲಿದೆ.



ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೋಲೀಟರ್‌ಗೆ (1 ಸಾವಿರ ಲೀಟರ್) ₹777 ಹೆಚ್ಚಳವಾಗಿ, ₹94,543 ಆಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ. ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್‌ಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ವ್ಯತ್ಯಾಸ ಆಗುತ್ತದೆ. 14.2 ಕೆ.ಜಿ ತೂಕದ ಗೃಹ ಬಳಕೆಯ ಅಡುಗೆ ಅನಿಲ ದರ ಯಥಾಸ್ಥಿತಿಯಲ್ಲಿದ್ದು, ₹853 ಇದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ, ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ಈ ದರ ಪರಿಷ್ಕರಣೆ ಮಾಡುತ್ತವೆ.

ವಿದ್ಯುತ್ ಬಳಕೆ ಶೇ 6ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಅಕ್ಟೋಬರ್ ತಿಂಗಳಿನಲ್ಲಿ ಶೇ 6ರಷ್ಟು ಇಳಿಕೆಯಾಗಿದೆ.

ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ 14,047 ಕೋಟಿ ಯೂನಿಟ್ ವಿದ್ಯುತ್ ಬಳಕೆ ಆಗಿತ್ತು. ಈ ವರ್ಷದ ಅಕ್ಟೋಬರ್‌ನಲ್ಲಿ 13,200 ಕೋಟಿ ಯೂನಿಟ್ ವಿದ್ಯುತ್ ಬಳಕೆಯಾಗಿದೆ ಎಂದು ಸರ್ಕಾರ ತಿಳಿಸಿದೆ.

ದೇಶದ ಕೆಲವು ಭಾಗಗಳಲ್ಲಿ ಅಕ್ಟೋಬರ್‌ನಲ್ಲಿ ಸುರಿದ ಅಕಾಲಿಕ ಮಳೆ ಮತ್ತು ಚಳಿಗಾಲದ ಆರಂಭದಿಂದಾಗಿ ತಾಪಮಾನ ನಿಯಂತ್ರಣದಲ್ಲಿತ್ತು. ಇದರಿಂದ ಹವಾನಿಯಂತ್ರಕಗಳು, ಕೂಲರ್‌ಗಳ ಬಳಕೆ ಕಡಿಮೆ ಆಗಿದ್ದರಿಂದ, ವಿದ್ಯುತ್ ಬಳಕೆ ಇಳಿದಿದೆ ಎಂದು ವಲಯದ ತಜ್ಞರು ಹೇಳಿದ್ದಾರೆ.

ಅಕ್ಟೋಬರ್‌ನಲ್ಲಿ ಗರಿಷ್ಠ ವಿದ್ಯುತ್ ಬೇಡಿಕೆ 210.71 ಗಿಗಾವಾಟ್ ಆಗಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ 219.22 ಗಿಗಾವಾಟ್ ವಿದ್ಯುತ್ ಬೇಡಿಕೆ ಇತ್ತು. 2024ರ ಮೇ ತಿಂಗಳಲ್ಲಿ ವಿದ್ಯುತ್ ಬೇಡಿಕೆಯು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 250 ಗಿಗಾವಾಟ್‌ಗೆ ತಲುಪಿತ್ತು.

ಶೇ 98.37ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2,000 ಮುಖಬೆಲೆಯ ಒಟ್ಟು ₹5,817 ಕೋಟಿ ಮೌಲ್ಯದ ನೋಟುಗಳು ಈಗಲೂ ಜನರ ಕೈಯಲ್ಲಿ ಇವೆ ಎಂದು ಆರ್‌ಬಿಐ ಶನಿವಾರ ತಿಳಿಸಿದೆ.

ಆರ್‌ಬಿಐ, ಈ ಮುಖಬೆಲೆಯ ನೋಟುಗಳನ್ನು 2023ರ ಮೇ 19ರಿಂದ ಚಲಾವಣೆಯಿಂದ ಹಿಂಪಡೆದಿತ್ತು. ಆದರೆ ಈ ನೋಟುಗಳು ಅಮಾನ್ಯ ಅಲ್ಲ.

2023ರ ಮೇ 19ರಂದು ಚಲಾವಣೆಯಲ್ಲಿ ಇದ್ದ ಈ ಮುಖಬೆಲೆಯ ನೋಟುಗಳ ಒಟ್ಟು ಮೊತ್ತವು ₹3.56 ಲಕ್ಷ ಕೋಟಿ ಆಗಿತ್ತು ಎಂದು ತಿಳಿಸಿದೆ. ಅಂದರೆ, ಈವರೆಗೆ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇ 98.37ರಷ್ಟು ನೋಟುಗಳು ವಾಪಸ್ ಬಂದಿವೆ.

ಈ ಮುಖಬೆಲೆಯ ನೋಟುಗಳನ್ನು ಬೆಂಗಳೂರು ಸೇರಿದಂತೆ ಆರ್‌ಬಿಐನ 19 ಕಚೇರಿಗಳ ಮೂಲಕ ಬೇರೆ ನೋಟುಗಳಿಗೆ ವಿನಿಮಯ ಮಾಡಿಕೊಳ್ಳಲು ಅವಕಾಶ ಇದೆ. ಸಾರ್ವಜನಿಕರು ಅಂಚೆ ಮೂಲಕ ಈ ನೋಟುಗಳನ್ನು ಆರ್‌ಬಿಐ ಕಚೇರಿಗೆ ಕಳುಹಿಸಿ, ಅದನ್ನು ತಮ್ಮ ಖಾತೆಗೆ ಜಮಾ ಮಾಡುವಂತೆ ಹೇಳಬಹುದು.

ವಿಶ್ವದ ಸೃಜನಶೀಲ ನಗರಗಳ ಪಟ್ಟಿಗೆ ಲಖನೌ ಸೇರ್ಪಡೆ

ಲಖನೌ (ಪಿಟಿಐ): ಯುನೆಸ್ಕೊ ಸಿದ್ಧಪಡಿಸಿರುವ ವಿಶ್ವದ ಸೃಜನಶೀಲ ನಗರಗಳ ಪಟ್ಟಿಗೆ (ಸಿಎನ್‌ಎನ್) ಉತ್ತರಪ್ರದೇಶದ ರಾಜಧಾನಿ ಲಖನೌ ನಗರ ಸೇರ್ಪಡೆಯಾಗಿದೆ.

ಲಖನೌ ನಗರವು 'ವೈವಿಧ್ಯಮಯ ಪಾಕಶಾಲೆ' ವಿಭಾಗದಲ್ಲಿ ಈ ಪಟ್ಟಿಗೆ ಸೇರ್ಪಡೆಯಾಗಿದೆ. ಇಲ್ಲಿನ ಗಲೌಟಿ ಕಬಾಬ್, ಅವಧಿ ಬಿರಿಯಾಣಿ, ಗೋಲ್‌ಗಪ್ಪಾ ಮತ್ತು ಮಖಾನ್ ಮಲಾಯ್ ಬಾಯಲ್ಲಿ ನೀರೂರಿಸುತ್ತವೆ ಎಂದು ವಿಶ್ವಸಂಸ್ಥೆಯ ಭಾರತೀಯ ಕಚೇರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

'ಸಿಎನ್‌ಎನ್ ಪಟ್ಟಿಗೆ ಹೊಸದಾಗಿ 58 ನಗರಗಳು ಸೇರ್ಪಡೆಯಾಗಿದ್ದು, ಸದ್ಯ 100ಕ್ಕೂ ಹೆಚ್ಚು ದೇಶಗಳ 408 ನಗರಗಳು ಈ ಪಟ್ಟಿಯಲ್ಲಿ ಸ್ಥಾನ ಹೊಂದಿವೆ ಎಂದು ಯೆನೆಸ್ಕೊ ಮಹಾನಿರ್ದೇಶಕ ಆಡ್ರೆ ಅಜೌಲೆ ತಿಳಿಸಿದ್ದಾರೆ.

ಜಿಎಸ್‌ಟಿ ದರ ಇಳಿಕೆಯಿಂದ ಮಾರಾಟದಲ್ಲಿ ಏರಿಕೆ

ವಾಹನಗಳ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ವಾಹನ ತಯಾರಿಕ ಕಂಪನಿಗಳಾದ ಮಹೀಂದ್ರ ಆ್ಯಂಡ್ ಮಹೀಂದ್ರ, ಟೊಯೊಟ, ಕಿಯಾ ಇಂಡಿಯಾ, ಟಾಟಾ ಮೋಟರ್ಸ್, ಟಿವಿಎಸ್ ಮೋಟರ್ಸ್ ಸೇರಿದಂತೆ ಹಲವು ಕಂಪನಿಗಳ ವಾಹನಗಳ ಸಗಟು ಮಾರಾಟವು ಅಕ್ಟೋಬರ್‌ನಲ್ಲಿ ಹೆಚ್ಚಳವಾಗಿದೆ.

ಉತ್ತಮ ಮುಂಗಾರು, ಹಬ್ಬದ ಋತು, ಹೊಸ ಮಾದರಿಯ ವಾಹನಗಳ ಬಿಡುಗಡೆ, ಜಿಎಸ್‌ಟಿ ದರ ಇಳಿಕೆಯು ವಾಹನಗಳ ಮಾರಾಟ ಹೆಚ್ಚಳವಾಗಲು ಕಾರಣವಾಗಿದೆ. ಅಲ್ಲದೆ, ಕೃಷಿ ಚಟುವಟಿಕೆ ಹೆಚ್ಚಳದಿಂದ ಟ್ರ್ಯಾಕ್ಟರ್ ಮಾರಾಟ ಸಹ ಹೆಚ್ಚಳ ಕಂಡಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕೃಷಿ ಸಲಕರಣೆಗಳ ವ್ಯವಹಾರದ ಅಧ್ಯಕ್ಷ ವೀಜಯ್ ನಕ್ರಾ ಹೇಳಿದ್ದಾರೆ.

ಮಹೀಂದ್ರ ಆ್ಯಂಡ್ ಮಹೀಂದ್ರ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ವಾಹನಗಳ ಮಾರಾಟದಲ್ಲಿ ಶೇ 26ರಷ್ಟು ಹೆಚ್ಚಳವಾಗಿದ್ದು, 1,20,142 ವಾಹನಗಳು ಮಾರಾಟವಾಗಿದೆ. ದೇಶೀಯ ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಶೇ 31ರಷ್ಟು ಏರಿಕೆಯಾಗಿ, 71,624 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ



ಇದೇ ಅವಧಿಯಲ್ಲಿ 54,504 ವಾಹನಗಳು ಮಾರಾಟವಾಗಿದ್ದವು ಎಂದು ಕಂಪನಿ ಶನಿವಾರ ತಿಳಿಸಿದೆ.

ವಾಣಿಜ್ಯ ವಾಹನಗಳು ಮಾರಾಟದಲ್ಲಿ ಶೇ 14ರಷ್ಟು ಹೆಚ್ಚಳವಾಗಿದ್ದು, 31,741 ವಾಹನಗಳು ಮಾರಾಟವಾಗಿವೆ. ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ 13ರಷ್ಟು ಏರಿಕೆಯಾಗಿ, 73,660 ಮಾರಾಟವಾಗಿವೆ. 1,589 ಟ್ರ್ಯಾಕ್ಟರ್ ರಫ್ತಾಗಿದ್ದು, ಶೇ 41ರಷ್ಟು ಹೆಚ್ಚಳವಾಗಿದೆ.

ಟಾಟಾ ಮೋಟರ್ಸ್: ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನಗಳ ಸಗಟು ಮಾರಾಟದಲ್ಲಿ ಶೇ 26.6ರಷ್ಟು ಹೆಚ್ಚಳವಾಗಿದ್ದು, 61,295 ವಾಹನಗಳು ಮಾರಾಟವಾಗಿವೆ. ಕಳೆದ ವರ್ಷದ ಇದೇ ಅವಧಿಯಲ್ಲಿ 48,423 ವಾಹನಗಳು ಮಾರಾಟವಾಗಿದ್ದವು.

ಟೊಯೊಟ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ 42,892 ವಾಹನಗಳು ಮಾರಾಟವಾಗಿವೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ 30,845 ವಾಹನಗಳು ಮಾರಾಟವಾಗಿದ್ದು, ಶೇ 39ರಷ್ಟು ಏರಿಕೆ ಕಂಡಿದೆ. 2,635 ವಾಹನಗಳು ರಫ್ತು ಆಗಿವೆ.

ಕಿಯಾ ಇಂಡಿಯಾ: ಕಿಯಾ ಇಂಡಿಯಾದ ವಾಹನಗಳ ಮಾರಾಟದಲ್ಲಿ ಶೇ 30ರಷ್ಟು ಹೆಚ್ಚಳವಾಗಿದ್ದು, 29,556 ವಾಹನಗಳು ಮಾರಾಟವಾಗಿವೆ. ಭಾರತದ ಮಾರುಕಟ್ಟೆ ಪ್ರವೇಶಿಸಿದ ನಂತರ ಅತಿ ಹೆಚ್ಚು ವಾಹನಗಳು ಮಾರಾಟವಾದ ತಿಂಗಳು ಇದಾಗಿದೆ ಎಂದು ಕಿಯಾ ಇಂಡಿಯಾ ತಿಳಿಸಿದೆ.

ಮಾರುತಿ ಸುಜುಕಿ: ಮಾರುತಿ ಸುಜುಕಿ ಇಂಡಿಯಾದ ವಾಹನಗಳ ಮಾರಾಟದಲ್ಲಿ ಶೇ 7ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ 2,06,434 ವಾಹನಗಳು ಮಾರಾಟವಾಗಿದ್ದರೆ, ಈ ಬಾರಿ 2,20,894 ವಾಹನಗಳು ಮಾರಾಟವಾಗಿವೆ. ದೇಶೀಯವಾಗಿ 1,80,675 ವಾಹನಗಳು ಮಾರಾಟವಾಗಿದ್ದು, ಶೇ 10ರಷ್ಟು ಏರಿಕೆಯಾಗಿದೆ.

ಹುಂಡೈ: ಹುಂಡೈ ಮೋಟರ್ ಇಂಡಿಯಾದ 69,894 ವಾಹನಗಳು ಮಾರಾಟವಾಗಿವೆ. ಈ ಪೈಕಿ 53,792 ವಾಹನಗಳು ಮಾರಾಟವಾಗಿದ್ದರೆ, 16,102 ವಾಹನಗಳು ಮಾರಾಟವಾಗಿವೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹595
	12 ಕ್ಕೆ	₹80
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹402-646
ದ್ವಿತಳಿ (ಬಿ.ವಿ)	₹425-820

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹166

'ಎಚ್‌1– ಬಿ ವೀಸಾಕ್ಕೆ ಶುಲ್ಕ ಆದೇಶ ಮರುಪರಿಶೀಲಿಸಿ'

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಎಚ್‌1–ಬಿ ವೀಸಾಕ್ಕೆ ಅರ್ಜಿ ಸಲ್ಲಿಸಲು ಅಮೆರಿಕ ಕಂಪನಿಗಳು 1 ಲಕ್ಷ ಡಾಲರ್ (ಸುಮಾರು ₹88 ಲಕ್ಷ) ಶುಲ್ಕ ಪಾವತಿಸಬೇಕು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿರುವುದಕ್ಕೆ ಹಲವು ಸಂಸದರು ಆಕ್ಷೇಪ ವ್ಯಕ್ತಪಡಿಸಿದ್ದು, ಆದೇಶವನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ.

'ಇತ್ತೀಚೆಗೆ ಭಾರತಕ್ಕೆ ನಮ್ಮ ನಿಯೋಗವು ಭೇಟಿ ನೀಡಿತ್ತು. ಅಮೆರಿಕದ ಆರ್ಥಿಕತೆ, ರಾಷ್ಟ್ರೀಯ ಭದ್ರತೆಗೆ ಮಾತ್ರವಲ್ಲ ಭಾರತದೊಂದಿಗಿನ ಸಂಬಂಧಕ್ಕೂ ಎಚ್‌1- ಬಿ ವೀಸಾ ಮಹತ್ವದ್ದಾಗಿದೆ. ನಮ್ಮ ದೇಶದ ಐಟಿ, ಕೃತಕ ಬುದ್ಧಿಮತ್ತೆ ಕ್ಷೇತ್ರದ ಬೆಳವಣಿಗೆಯಲ್ಲಿ ಭಾರತೀಯರು ಪ್ರಮುಖ ಪಾತ್ರವಹಿಸುತ್ತಾರೆ' ಎಂದು ಸಂಸದರು ಟ್ರಂಪ್ ಅವರಿಗೆ ಪತ್ರ ಬರೆದಿದ್ದಾರೆ.

'ಅಮೆರಿಕದ ಅತ್ಯಂತ ಯಶಸ್ವಿ ಕಂಪನಿಗಳನ್ನು ಎಚ್‌1- ಬಿ ವೀಸಾದೊಂದಿಗೆ ಇಲ್ಲಿಗೆ ಬಂದವರೇ ಕಟ್ಟಿ ನಿಲ್ಲಿಸಿದ್ದಾರೆ. ಇದರಿಂದ ಹೊಸ ವ್ಯಾಪಾರ, ಉದ್ಯೋಗ ಸೃಷ್ಟಿಯಾಗಿದೆ. ಇದು ತಂತ್ರಜ್ಞಾನ ಕ್ಷೇತ್ರದಲ್ಲಿ ಅಮೆರಿಕವು ಮುಂಚೂಣಿಯಲ್ಲಿ ಇರುವಂತೆ ಮಾಡಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಚ್‌–1ಬಿ ವೀಸಾಕ್ಕಾಗಿ ಹೊಸದಾಗಿ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಹೆಚ್ಚಿಸಿ ಟ್ರಂಪ್ ಅವರು ಸೆಪ್ಟೆಂಬರ್ 19ರಂದು ಆದೇಶ ಹೊರಡಿಸಿದ್ದರು.

ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸ್ಪಷ್ಟನೆ

'ಉಷಾ ವ್ಯಾನ್ಸ್ ಮತಾಂತರಗೊಳ್ಳುವುದಿಲ್ಲ'

ನ್ಯೂಯಾರ್ಕ್ (ಪಿಟಿಐ): 'ನನ್ನ ಪತ್ನಿ ಉಷಾ ವ್ಯಾನ್ಸ್ ಕ್ರೈಸ್ತ ಧರ್ಮದವರು ಅಲ್ಲ. ಅವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವ ಯಾವುದೇ ಯೋಚನೆ ಇಲ್ಲ' ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

ಮಿಸಿಸಿಪಿಯಲ್ಲಿ ಇತ್ತೀಚೆಗೆ ನಡೆದ 'ಟರ್ನಿಂಗ್ ಪಾಯಿಂಟ್ ಯುಎಸ್‌ಎ' ಕಾರ್ಯಕ್ರಮದಲ್ಲಿ ಮಾತನಾಡಿದ ಜೆ.ಡಿ. ವ್ಯಾನ್ಸ್, 'ಭಾರತೀಯ, ಹಿಂದೂ ಕುಟುಂಬದ ಹಿನ್ನೆಲೆಯ ಉಷಾ ತಮ್ಮೊಂದಿಗೆ ಚರ್ಚ್‌ಗೆ ಬರುತ್ತಾರೆ. ಅವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಬೇಕು ಎಂಬುದು ತಮ್ಮ ಬಯಕೆ' ಎಂದು ಹೇಳಿದ್ದರು. ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆಗಳು ವ್ಯಕ್ತವಾಗಿದ್ದವು.

ಶನಿವಾರ ಈ ಬಗ್ಗೆ ಸ್ಪಷ್ಟನೆ ನೀಡಿರುವ ಅವರು, 'ಸಾಮಾಜಿಕ ಜಾಲತಾಣದಲ್ಲಿ



ಜೆ.ಡಿ. ವ್ಯಾನ್ಸ್ ಹಾಗೂ ಪತ್ನಿ ಉಷಾ ವ್ಯಾನ್ಸ್

ಬಂದಿರುವ ಹೆಚ್ಚಿನ ಪ್ರತಿಕ್ರಿಯೆಗಳು ಕ್ರೈಸ್ತ ವಿರೋಧಿ ಮತಾಂಧತೆಯಿಂದ ಕೂಡಿವೆ. ಉಷಾ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವ ಯೋಚನೆ ಇಲ್ಲ. ಆದರೆ, ನಾನು ಚರ್ಚ್‌ನಿಂದ ಪ್ರಭಾವಿತನಾದಂತೆ ನನ್ನ ಪತ್ನಿಯೂ ಪ್ರಭಾವಿತಗೊಳ್ಳಬಲ್ಲರು. ನಾನು ಕ್ರೈಸ್ತ ಧರ್ಮದಲ್ಲಿ ವಿಶ್ವಾಸ ಹೊಂದಿದ್ದೇನೆ, ನನ್ನ ಪತ್ನಿಯೂ ಅದನ್ನು ಹಾಗೆಯೇ ನೋಡುವ ವಿಶ್ವಾಸ ಇದೆ' ಎಂದು ಹೇಳಿದ್ದಾರೆ.

ತಮ್ಮ ಅಂತರ್‌ಧರ್ಮೀಯ ವಿವಾಹದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಚರ್ಚೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಅವರು, 'ನಾನೊಬ್ಬ ರಾಜಕಾರಣಿ ಆಗಿರುವುದರಿಂದ ಜನರಿಗೆ ಕುತೂಹಲ ಇದೆ. ಹಾಗಾಗಿ ಈ ಕುರಿತ ಪ್ರಶ್ನೆಗಳಿಗೆ ಉತ್ತರಿಸುವುದರಿಂದ ನುಣುಚಿಕೊಳ್ಳುವುದಿಲ್ಲ' ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಟ್ರಂಪ್ ಆಡಳಿತವು ವಲಸೆ ನೀತಿಗಳಲ್ಲಿ ಬದಲಾವಣೆ ತಂದ ಬೆನ್ನಲ್ಲೇ, ಉಷಾ ವ್ಯಾನ್ಸ್ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಾರೆ ಎಂಬ ಚರ್ಚೆ ಮುನ್ನೆಲೆಗೆ ಬಂದಿತ್ತು.

ವ್ಯಾನ್ಸ್‌ಗೆ ಸಲಹೆ: 'ಹಿಂದೂ ಧರ್ಮದೊಂದಿಗೆ ತೊಡಗಿಸಿಕೊಳ್ಳಿ' ಎಂದು ಹಿಂದೂ ಅಮೆರಿಕನ್ ಫೌಂಡೇಷನ್ (ಎಚ್‌ಎಎಫ್) ಜೆ.ಡಿ.ವ್ಯಾನ್ಸ್‌ಗೆ ಸಲಹೆ ನೀಡಿದೆ.

ಮಂಡ್ಯ ಸಮ್ಮೇಳನ: ನಿರ್ಣಯ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ



ದಿನೇಶ್ ಗೂಳಿಗೌಡ

ಬೆಂಗಳೂರು: 'ಮಂಡ್ಯದಲ್ಲಿ ನಡೆದಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಚರ್ಚಿಸಲು ಸಂಬಂಧಪಟ್ಟವರ ಸಭೆ ಕರೆಯಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ದಿನೇಶ್ ಪತ್ರ ಬರೆದಿದ್ದಾರೆ.

ಸಾಹಿತಿ ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ, 'ಕನ್ನಡ ಭಾಷಾ ಅಭಿವೃದ್ಧಿ ಕಾಯ್ದೆ- 2022ರ ಜಾರಿ, ಸರ್ಕಾರಿ ಕನ್ನಡ ಶಾಲೆಗಳಿಗೆ ಕಟ್ಟಡ, ವಾಚನಾಲಯ ಸೇರಿ ಮೂಲಸೌಕರ್ಯಗಳನ್ನು ಒದಗಿಸುವುದು, ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿ, ಸರೋಜಿನಿ ಮಹಿಷಿ ವರದಿ ಅನುಷ್ಠಾನ, ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ, ರಾಷ್ಟ್ರಕವಿ ಪ್ರಶಸ್ತಿ ಘೋಷಿಸುವ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು.

ಈ ಗಂಭೀರ ನಿರ್ಣಯಗಳ ಕುರಿತು ಚರ್ಚಿಸಲು ತಕ್ಷಣವೇ ಒಂದು ಸಭೆ ಆಯೋಜಿಸುವ ಜೊತೆಗೆ ಅವುಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಆದೇಶ ಹೊರಡಿಸಬೇಕು ಎಂದೂ ಪತ್ರದಲ್ಲಿ ಅವರು ಮನವಿ ಮಾಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರಿಗೂ ಈ ಪತ್ರವನ್ನು ಕಳುಹಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

01-11-2025

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1415)
ಒಂದು ವಾರದ ಡೆಲಿವರಿ	1415 (1410)
ಪಾಮ್ ವಾರದ ಡೆಲಿವರಿ	1258 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1405 (1410)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,21,000 (1,19,500)
ಬೆಳ್ಳಿ ಕೆ.ಜಿಗೆ	1,49,400 (1,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ


ಇಸ್ರೊದಿಂದ ಭಾರಿ ಉಪಗ್ರಹ ಉಡ್ಡಯನ ಇಂದು

ಶ್ರೀಹರಿಕೋಟ (ಆಂಧ್ರ ಪ್ರದೇಶ) (ಪಿಟಿಐ): ಭಾರಿ ತೂಕದ ಸಂವಹನ ಉಪಗ್ರಹ 'ಸಿಎಂಎಸ್-03' ಅನ್ನು ಭಾನುವಾರ ಉಡ್ಡಯನ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಣಿಯಾಗಿದೆ.

ಉಪಗ್ರಹದ ತೂಕ 4,410 ಕೆ.ಜಿ ಇದ್ದು, ದೇಶದ ಬಾಹ್ಯಾಕಾಶ ಕೇಂದ್ರದಿಂದ ಇದೇ ಮೊದಲ ಬಾರಿಗೆ ಉಡ್ಡಯನ ಮಾಡಲಾಗುತ್ತಿರುವ ಭಾರಿ ತೂಕದ ಉಪಗ್ರಹ ಇದಾಗಿದೆ ಎಂದು ಇಸ್ರೊ ತಿಳಿಸಿದೆ. ಶ್ರೀಹರಿಕೋಟದಲ್ಲಿರುವ ಉಡ್ಡಯನ ನೆಲೆಯಿಂದ ಭಾನುವಾರ (ನವೆಂಬರ್ 2) ಸಂಜೆ 5.26ಕ್ಕೆ 'ಎಲ್‌ವಿಎಂ-ಎ05' ರಾಕೆಟ್, ಈ ಉಪಗ್ರಹವನ್ನು ಹೊತ್ತು ನಭಕ್ಕೆ ಚಿಮ್ಮಲಿದೆ. ಉಪಗ್ರಹವನ್ನು ಭೂಹೊಂದಾಣಿಕೆ ವರ್ಗಾವಣೆ ಕಕ್ಷೆಗೆ (ಜಿಯೊಸಿಂಕ್ರೊನಸ್ ಟ್ರಾನ್ಸ್‌ಫರ್ ಆರ್ಬಿಟ್-ಜಿಟಿಒ) ಸೇರಿಸಲಾಗುತ್ತದೆ ಎಂದು ತಿಳಿಸಿದೆ.

ಅಧಿಕ ಭಾರದ ಉಪಗ್ರಹಗಳನ್ನು ಹೊತ್ತು ಕಕ್ಷೆಯತ್ತ ಹಾರುವ ಸಾಮರ್ಥ್ಯದ ರಾಕೆಟ್‌ಗಳು ಇಸ್ರೊ ಬಳಿ ಇರಲಿಲ್ಲ. ಹೀಗಾಗಿ, ಜಿಸ್ಯಾಟ್-11 (5,854 ಕೆ.ಜಿ) ಉಪಗ್ರಹವನ್ನು 2018ರ ಡಿಸೆಂಬರ್ 5ರಂದು ಫ್ರೆಂಚ್ ಗಯಾನದಿಂದ ಉಡ್ಡಯನ ಮಾಡಲಾಗಿತ್ತು.

'ಬಾಹುಬಲಿ' ರಾಕೆಟ್: 'ಲಾಂಚ್ ವೆಹಿಕಲ್ ಮಾರ್ಕ್-3 (ಎಲ್‌ವಿಎಂ-03) ಎತ್ತರ 43.5 ಮೀಟರ್ ಇದ್ದು, 4 ಸಾವಿರ ಕೆ.ಜಿಯಷ್ಟು ಭಾರದ ಸಾಧನಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಹೀಗಾಗಿ ಈ ರಾಕೆಟ್ ಅನ್ನು 'ಬಾಹುಬಲಿ' ಎಂದೂ ಕರೆಯಲಾಗುತ್ತದೆ. ಬಹುಬ್ಯಾಂಡ್ ಸಂವಹನ ಈ ಉಪಗ್ರಹದಿಂದ (ಸಿಎಂಎಸ್-03) ಸಾಧ್ಯವಾಗಲಿದೆ.



ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿರುವ ಬಾಹ್ಯಾಕಾಶ ಕೇಂದ್ರದಿಂದ 'ಸಿಎಂಎಸ್–03' ಸಂವಹನ ಉಪಗ್ರಹವನ್ನು ಇಸ್ರೊ ಭಾನುವಾರ ಉಡ್ಡಯನ ಮಾಡಲಿದ್ದು ಕ್ಷಣಗಣನೆ ಆರಂಭವಾಗಿದೆ –ಪಿಟಿಐ ಚಿತ್ರ

38 ಪ್ರಕರಣ: ಸಿಗದ ವಿವರ

ಎಸ್‌ಐಟಿ ತನಿಖೆ: ಗ್ರಾ.ಪಂ–ಯುಡಿಆರ್ ದಾಖಲೆಗೂ ವ್ಯತ್ಯಾಸ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಪ್ರಕರಣ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿ ಮೃತದೇಹಗಳನ್ನು ವಿಲೇ ಮಾಡಿದ್ದು, ಅಸಹಜ ಸಾವುಗಳಲ್ಲಿ ಗುರುತು ಪತ್ತೆಯಾಗದ 38 ಪ್ರಕರಣಗಳ ಸಂಬಂಧ ಬೆಳ್ತಂಗಡಿ ಅಥವಾ ಧರ್ಮಸ್ಥಳ ಠಾಣೆಗಳಲ್ಲಿ ಯುಡಿಆರ್ ದಾಖಲಿಸಿರುವ ವಿವರಗಳು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಲಭ್ಯವಾಗಿಲ್ಲ ಎಂದು ಗೊತ್ತಾಗಿದೆ.

ಧರ್ಮಸ್ಥಳ ಬೆಳವಣಿಗೆಯ ಪ್ರಕರಣದ ತನಿಖೆ ವೇಳೆ ಎಸ್‌ಐಟಿಯವರು, ಸ್ಥಳೀಯ ಗ್ರಾಮ ಪಂಚಾಯಿತಿ ಮೂರು ದಶಕಗಳಲ್ಲಿ ವಿಲೇಮಾಡಿದ್ದ ಶವಗಳ ವಿವರ ಕಲೆ ಹಾಕಿದ್ದರು. ಇದೇ ಅವಧಿಯಲ್ಲಿ ಬೆಳ್ತಂಗಡಿ (ಧರ್ಮಸ್ಥಳ ಮೊದಲು ಈ ಠಾಣೆ ಸುಪರ್ದಿಯಲ್ಲಿತ್ತು) ಮತ್ತು ಧರ್ಮಸ್ಥಳ ಠಾಣೆಗಳಲ್ಲಿ ದಾಖಲಾಗಿದ್ದ ಯುಡಿಆರ್ ಪ್ರಕರಣಳ ವಿವರ ಕಲೆಹಾಕಿದ್ದರು. ಎರಡನ್ನು ತಾಳೆ ಹಾಕಿದಾಗ ಕೆಲ ಪ್ರಕರಣಗಳ ದಾಖಲೆ ಇಲ್ಲದಿರುವುದು ತಿಳಿದುಬಂದಿತ್ತು.

'ತಾಳೆ ಹಾಕಿ ನೋಡಿದಾಗ 38 ಪ್ರಕರಣಗಳಲ್ಲಿ ಸ್ಥಳೀಯ ಠಾಣೆಯಲ್ಲಿ ದಾಖಲೆಗಳು ಸಿಕ್ಕಿಲ್ಲ. ಇಂತಹ ಪ್ರಕರಣಗಳು ಹೆಚ್ಚಾಗಬಹುದು. ಕೆಲವು 2-3 ದಶಕಗಳಿಗಿಂತಲೂ ಹಳೆಯ ಪ್ರಕರಣಗಳಾಗಿದ್ದು, ದಾಖಲೆಗಳು ಕಳೆದುಹೋಗಿರುವ ಸಾಧ್ಯತೆಯೂ ಇವೆ' ಎಂದು ಮೂಲಗಳು ತಿಳಿಸಿವೆ.

'ಮೃತದೇಹ ಪತ್ತೆಯಾದಾಗ, ಗುರುತು ಪತ್ತೆಯಾಗದಿದ್ದರೆ ಸ್ಥಳೀಯ ಗ್ರಾಮ ಪಂಚಾಯಿತಿ ಮೂಲಕವೇ ವಿಲೇ ಮಾಡಲಾಗುತ್ತದೆ. ಆದರೆ, ಆ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಯುಡಿಆರ್ ದಾಖಲಾಗಲೇ ಬೇಕು. ಪೊಲೀಸರು ಲಿಖಿತ ಮಾಹಿತಿ ನೀಡಿದ ಬಳಿಕವೇ ಗ್ರಾಮ ಪಂಚಾಯಿತಿಯವರು ಅಂತಹ ಮೃತದೇಹಗಳನ್ನು ವಿಲೇ ಮಾಡಬೇಕು. ಪೊಲೀಸ್ ಠಾಣೆಯಲ್ಲಿ ಯುಡಿಆರ್ ದಾಖಲಾಗದೆಯೇ ಯಾವುದಾದರೂ ಮೃತದೇಹವನ್ನು ಗ್ರಾಮ ಪಂಚಾಯಿತಿಯವರು ವಿಲೇ ಮಾಡಿದ್ದರೆ, ಅದು ಗಂಭೀರ ಲೋಪ. ಯುಡಿಆರ್ ಪ್ರಕರಣಗಳಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪೊಲೀಸ್ ಠಾಣೆಗಳಲ್ಲೂ ರಕ್ಷಿಸಿಡಬೇಕು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಪೊಲೀಸರು ಕೆಲ ದಾಖಲೆ ಹಸ್ತಾಂತರಿಸುವಾಗಲೂ ಲೋಪ ಆಗಿರುವ ಸಾಧ್ಯತೆ ಇದೆ. ಅಥವಾ ತಪ್ಪಿ ಬೇರೆ ಕಡೆ ತೆಗೆದಿಟ್ಟಿರುವ ಸಾಧ್ಯತೆಯೂ ಇದೆ. ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆದಿದೆ. ಯುಡಿಆರ್ ದಾಖಲೆ ಸಿಕ್ಕಿಲ್ಲ ಎಂಬ ಮಾತ್ರಕ್ಕೆ 38 ಮೃತದೇಹಗಳನ್ನು ಅಕ್ರಮವಾಗಿ ವಿಲೇ ಮಾಡಲಾಗಿದೆ ಎಂದು ಈ ಹಂತದಲ್ಲಿ ಹೇಳಲಾಗದು' ಎಂದು ಮೂಲಗಳು ಹೇಳಿವೆ.

'ಅಸಹಜವಾಗಿ ಸತ್ತವರ ಗುರುತು ಪತ್ತೆಯಾಗದ ಅನೇಕ ಪ್ರಕರಣಗಳಿಗೆ ಸಂಬಂಧಿಸಿ ಮೃತದೇಹಗಳನ್ನು ಎಲ್ಲಿ ಹೂಳಲಾಗಿದೆ ಎಂಬ ವಿವರಗಳೂ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಸಿಕ್ಕಿಲ್ಲ' ಎಂದೂ ಎಸ್‌ಐಟಿ ಮೂಲಗಳು ತಿಳಿಸಿವೆ.

ಉತ್ಥಾನ ದ್ವಾದಶೀ: ದೇವರನ್ನು ಎಬ್ಬಿಸುವ ಹಬ್ಬ!

• ಎಸ್. ಸೂರ್ಯಪ್ರಕಾಶ ಪಂಡಿತ್

ದೀಪಾವಳಿ ಮುಗಿದು ಇದೀಗ 'ಕಿರು' ದೀಪಾವಳಿ ಬಂದಿದೆ! ಅಂದು ದೀಪಾವಳಿಯನ್ನು ತಪ್ಪಿಸಿಕೊಂಡವರು ಇಂದು ಆಚರಿಸಿಕೊಳ್ಳಲಿ ಎಂಬ ಔದಾರ್ಯವೂ ಈ ಕಲ್ಪನೆಯಲ್ಲಿ ಇದ್ದೀತು! ಯಾರೊಬ್ಬರೂ ಹಬ್ಬದ ಸಂಭ್ರಮದಿಂದ, ಬೆಳಕಿನ ದಾರಿಯಿಂದ ವಂಚಿತರಾಗಬಾರದು ಎಂಬುದು ಇಲ್ಲಿಯ ಕಾಳಜಿ.

ಈ ಪರ್ವವನ್ನು 'ಉತ್ಥಾನ ದ್ವಾದಶೀ' ಎಂದೂ, 'ತುಳಸೀವಿವಾಹ' ಎಂದೂ ಕರೆಯುವುದುಂಟು. ಮಹಾವಿಷ್ಣು ವರ್ಷದಲ್ಲಿ ನಾಲ್ಕು ತಿಂಗಳು ನಿದ್ರೆಯಲ್ಲಿರುತ್ತಾನೆ ಎಂಬ ಕಲ್ಪನೆಯಿದೆ. ಅವನದು ಯೋಗನಿದ್ರೆ; ಅವನ ನಿದ್ರೆ ಕೇವಲ ಒಂದು ನರ್ತನದ ಭಂಗಿಯಂತೆ. ಅಷ್ಟೇಕೆ, ಇಡಿಯ ಸೃಷ್ಟಿಯೇ ಅವನಿಗೆ ಒಂದು ಲೀಲೆ, ಕ್ರೀಡೆ. ದೇವರ ನಿದ್ರೆ ನಮ್ಮ ನಿದ್ರೆಯಂತೆ ಮೈ ಮರೆಯುವ ನಿದ್ರೆಯಲ್ಲ, ಅದು ಸದಾ ಎಚ್ಚರವಾಗಿರುವ ನಿದ್ರೆಯ ಮುದ್ರೆ. ಹೀಗೆ ಲೀಲಾಸ್ವರೂಪನಾದ ಮಹಾವಿಷ್ಣುವು ನಿದ್ರೆಯಿಂದ ಏಳುವ ದಿನವೇ



ಉತ್ಥಾನದ್ವಾದಶೀ. 'ಉತ್ಥಾನ' – ಎಂದರೆ ನಿದ್ರೆಯಿಂದ ಏಳುವುದು.

'ದೇವರು ತನ್ನಂತೆಯೇ ಮನುಷ್ಯರನ್ನು ಸೃಷ್ಟಿಸಿದ; ಹೀಗೆಯೇ ಮನುಷ್ಯನೂ ತನ್ನ ರೂಪದಂತೆಯೆ ದೇವರನ್ನು ಸೃಷ್ಟಿಸಿಕೊಂಡ' ಎಂಬ ಸೂಕ್ತಿಯೊಂದಿದೆಯಂತೆ! ದುಡಿತದಿಂದ ಆಯಾಸಗೊಂಡು ವಿಶ್ರಾಂತಿಯನ್ನು ಬಯಸುವ ಮನುಷ್ಯ, ತನ್ನ ಈ ಸ್ವಭಾವವನ್ನು ದೇವರಿಗೂ ಆರೋಪಿಸಿ, ದೇವರಿಗೂ ವಿಶ್ರಾಂತಿಯ ಆವಶ್ಯಕತೆಯನ್ನು ಭಾವಿಸಿಕೊಂಡಿದ್ದಿರಬಹುದು. 'ರಾಕ್ಷಸ'ರನ್ನು ನಿಗ್ರಹಿಸಿ ಮಹಾವಿಷ್ಣು ಬಳಲಿರಬಹುದು ಎಂದು ಅವನಿಗೆ ಅನಿಸಿದ್ದು ಸಹಜ. ಆದರೆ ದೇವರೇ ಮಲಗಿ ನಿದ್ರಿಸಿಬಿಟ್ಟರೆ ತನ್ನನ್ನು ಕಾಪಾಡುವವರು ಯಾರು? ಕೆಡಕುಗಳಿಂದ ತನ್ನನ್ನು ಪಾರು ಮಾಡುವವರು ಯಾರು? – ಇಂಥ ಪ್ರಶ್ನೆಗಳೂ ಅವನಲ್ಲಿ 'ಭಯ'ವನ್ನು ಹುಟ್ಟಿಸಿರಬಹುದು. ಮಲಗಿದಂತಿರುವ ವಿಷ್ಣುವನ್ನು 'ಉತ್ಥಾನ' ಮಾಡಿಸಿ, ಜೀವನದಲ್ಲಿ ಅವನು ಭರವಸೆಯನ್ನು ತುಂಬಿಕೊಂಡ.

ಮಿಥ್‌ಗಳನ್ನು ಮನುಷ್ಯ 'ಸೃಷ್ಟಿಸಿ'ಕೊಂಡ ಸಂದರ್ಭವೇ ಇಂಥವು; ಅವನಲ್ಲಿ ಸುಪ್ತವಾಗಿರುವ ಆಧ್ಯಾತ್ಮಿಕ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳುವುದು ಮಿಥ್‌ಗಳ ಉದ್ದೇಶವೇ ಹೊರತು ಐತಿಹಾಸಿಕ ತಥ್ಯಗಳನ್ನು ದಾಖಲೀಕರಣ ಮಾಡುವುದಲ್ಲ. ಹೀಗಲ್ಲದೆ, ಬೇರೇನೋ ಭಾವಿಸಿಕೊಂಡರೆ ಆಗ ಹಬ್ಬಗಳ ಹಿಂದಿರುವ ತಾತ್ತ್ವಿಕತೆಗೇ ಭಂಗ ಒದಗಿದಂತಾಗುತ್ತದೆ. ಎಲ್ಲೆಲ್ಲೂ ವ್ಯಾಪಿಸಿರುವ ಚೈತನ್ಯದ ಸ್ವರೂಪಕ್ಕೆ ಸಂಕೇತ ಮಹಾವಿಷ್ಣು; ಅವನು ನಮ್ಮಲ್ಲೂ ಇದ್ದಾನೆ. ನಮ್ಮಲ್ಲಿ ಇದ್ದೂ ಇಲ್ಲದಂತಿರುವ, ಎಂದರೆ ನಿದ್ರಾವಸ್ಥೆಯಲ್ಲಿರುವ ವಿಷ್ಣುವನ್ನು ಎಚ್ಚರದ ಸ್ಥಿತಿಗೆ ತರುವಂಥ ಹಬ್ಬವೇ ಉತ್ಥಾನ ದ್ವಾದಶೀ.

ಚಿಟಿಕೆ ಸುದ್ದಿ

ಧರ್ಮಸ್ಥಳ ಲಕ್ಷದೀಪೋತ್ಸವ 19ರಂದು


ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿ ಲಕ್ಷದೀಪೋತ್ಸವ ಕಾರ್ಯಕ್ರಮಗಳು ನ.15ರಿಂದ ಆರಂಭವಾಗಲಿದೆ. ನ.19ರಂದು ಲಕ್ಷದೀಪೋತ್ಸವ ನಡೆಯಲಿದೆ.

ನ.15ರಂದು ಹೊಸಕಟ್ಟೆ ಉತ್ಸವದೊಂದಿಗೆ ಲಕ್ಷದೀಪೋತ್ಸವ ಆರಂಭವಾಗಲಿದ್ದು, ಎಸ್‌ಡಿಎಂ ಪ್ರೌಢಶಾಲೆ ವಠಾರದಲ್ಲಿ ರಾಜ್ಯಮಟ್ಟದ ವಸ್ತುಪ್ರದರ್ಶನಕ್ಕೆ ಚಾಲನೆ ಸಿಗಲಿದೆ.

ನ.16ರಿಂದ ವಿವಿಧ ಉತ್ಸವಗಳು ಜರುಗಲಿವೆ. 18ರಂದು 93ನೇ ಸರ್ವಧರ್ಮ ಸಮ್ಮೇಳನ, 19ರಂದು 93ನೇ ಸಾಹಿತ್ಯ ಸಮ್ಮೇಳನ, 20ರಂದು ಸಂಜೆ 7ರಿಂದ ಭಗವಾನ್ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶರಣರ ಸಮಾವೇಶ ಸ್ವಾಗತಾರ್ಹ: ಎಂ.ಬಿ. ಪಾಟೀಲ

ವಿಜಯಪುರ: 'ಕನೇರಿ ಮಠದ ಸ್ವಾಮೀಜಿ ಪರವಾಗಿ ಬಿಜೆಪಿ, ಸಂಘ ಪರಿವಾರದ ಮುಖಂಡರು ಬಸವಾದಿ ಶರಣರ ಸಮಾವೇಶ ಮಾಡಲು ಮುಂದಾಗಿರುವುದು ಸ್ವಾಗತಾರ್ಹ' ಎಂದು ಸಚಿವ ಎಂ.ಬಿ. ಪಾಟೀಲ ಶನಿವಾರ ಹೇಳಿದರು.


ಎಂ.ಬಿ. ಪಾಟೀಲ

'ಬಿಜೆಪಿ, ಸಂಘ ಪರಿವಾರದವರಿಗೆ ಈಗಲಾದರೂ ಬಸವಾದಿ ಶರಣರು ನೆನಪಾಗಿರುವುದು ಉತ್ತಮ ಬೆಳವಣಿಗೆ. ಬಬಲೇಶ್ವರದಿಂದ ಸಮಾವೇಶ ಆರಂಭಿಸುವುದರಿಂದ ಯಾವುದೇ ಭಯವಿಲ್ಲ. ಕ್ಷೇತ್ರದ ಜನರ ಮೇಲೆ ವಿಶ್ವಾಸ ಇದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಕೆಂಭಾವಿ ಪಥಸಂಚಲನ: ಮೂಡದ ಒಮ್ಮತ

ಯಾದಗಿರಿ: ಜಿಲ್ಲೆಯ ಕೆಂಭಾವಿಯಲ್ಲಿ ನ.4ರಂದು ಪಥಸಂಚಲನಕ್ಕೆ ಅನುಮತಿ ಕೋರಿ ಮೂರು ಸಂಘಟನೆಗಳು ಮನವಿ ಸಲ್ಲಿಸಿದ್ದ ಸಂಬಂಧ ಸುರಪುರ ಡಿವೈಎಸ್‌ಪಿ ನೇತೃತ್ವದಲ್ಲಿ ಶನಿವಾರ ನಡೆದ ಶಾಂತಿ ಸಭೆಯಲ್ಲಿ ಒಮ್ಮತ ಮೂಡದೆ ಇರುವುದು ಗೊತ್ತಾಗಿದೆ. ಡಿವೈಎಸ್‌ಪಿ ಜಾವೇದ್ ಇನಾಮದಾರ್, ಗ್ರೇಡ್–2 ತಹಶೀಲ್ದಾರ್ ಮಲ್ಲಯ್ಯ ಹಾಗೂ ಪುರಸಭೆ ಮುಖ್ಯಾಧಿಕಾರಿ ಮಹ್ಮದ್ ಯೂಸುಫ್ ನೇತೃತ್ವದಲ್ಲಿ ಸಭೆ ಜರುಗಿತು. ಆರ್‌ಎಸ್‌ಎಸ್, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸ್ವಾಭಿಮಾನಿ ಪ್ರೊ. ಬಿ.ಕೃಷ್ಣಪ್ಪ ಬಣ) ಹಾಗೂ ರಾಜ್ಯ ದಲಿತ ಸಂಘರ್ಷ ಸಮಿತಿ ಮುಖಂಡರನ್ನು ಪ್ರತ್ಯೇಕವಾಗಿ ಕರೆಯಿಸಿ ಚರ್ಚಿಸಿದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಇನಾಮದಾರ್, 'ಇಬ್ಬರಿಗೆ ಒಂದೇ ದಿನ ಅನುಮತಿ ಕೊಡಲು ಆಗುವುದಿಲ್ಲ. ಮೇಲಧಿಕಾರಿಗಳು ಪ್ರತ್ಯೇಕ ದಿನಗಳನ್ನು ಗುರುತಿಸಿ ಅನುಮತಿ ಕೊಡುತ್ತಾರೆ. ಕಾನೂನು ಉಲ್ಲಂಘಿಸುವಂತಿಲ್ಲ ಎಂದು ತಿಳಿಸಲಾಗಿದೆ' ಎಂದರು.

'ಆರ್‌ಎಸ್‌ಎಸ್‌ಗೆ ಅವಕಾಶ ಕೊಟ್ಟರೆ ನಮಗೂ ಕೊಡಬೇಕು. ಅವರು ಹಿಂಪಡೆದರೆ ನಾವೂ ಹಿಂಪಡೆಯುತ್ತೇವೆ' ದಲಿತ ಸಂಘರ್ಷ ಸಮಿತಿ ಮುಖಂಡ ಮರೆಪ್ಪ ಸಲಾದಪುರ ತಿಳಿಸಿದರು.

'ಆರ್‌ಎಸ್‌ಎಸ್ ನಿಷೇಧ ಅಸಾಧ್ಯ'

ಹಿಂದಿನ ಅನುಭವಗಳಿಂದ ಕಲಿಯಬೇಕು; ದತ್ತಾತ್ರೇಯ ಹೊಸಬಾಳೆ

ನಾಯಕಜಬಲ್‌ಪುರ (ಪಿಟಿಐ): 'ಯಾರೋ ಬಯಸಿದ್ದಾರೆ ಎಂದು ಸಂಘಟನೆಯನ್ನು ನಿಷೇಧಿಸಲು ಸಾಧ್ಯವಿಲ್ಲ, ಅಂತಹ ಬೇಡಿಕೆ ಇಡುವವರು ಈ ಹಿಂದಿನ ಅನುಭವಗಳಿಂದ ಪಾಠ ಕಲಿಯಬೇಕು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಇಲ್ಲಿ ನಡೆದ ಮೂರು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ನಿಷೇಧಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ ಎಂದು ಪತ್ರಕರ್ತರು ಗಮನ ಸೆಳೆದ ವೇಳೆ, 'ಈ ಹಿಂದೆ ಮೂರು ಸಲ ಅಂತಹ ಪ್ರಯತ್ನ ನಡೆದಿತ್ತು. ಆಗ ಸಮಾಜವು ಏನು ಹೇಳಿತು? ನ್ಯಾಯಾಲಯವು ಏನು ಹೇಳಿತು? ಈ ಎಲ್ಲ ಬೆಳವಣಿಗೆಯ ಹೊರತಾಗಿಯೂ, ಸಂಘದ ಚಟುವಟಿಕೆಯೂ ನಿರಂತರವಾಗಿ ಬೆಳೆದಿದೆ. ಸಂಘಟನೆಯನ್ನು ನಿಷೇಧಿಸಬೇಕಾದರೆ, ಸರಿಯಾದ ಕಾರಣ ಇರಬೇಕಾಗುತ್ತದೆ' ಎಂದು ಹೇಳಿದ್ದಾರೆ.

'ಯಾರೋ ಬಯಸಿದ್ದಾರೆ ಎಂಬ ಕಾರಣಕ್ಕೆ ಸಂಘಟನೆ ನಿಷೇಧಿಸಲು ಸಾಧ್ಯವಿಲ್ಲ. ಭಾರತದ ಏಕತೆ, ಭದ್ರತೆ ಹಾಗೂ ಸಂಸ್ಕೃತಿಗಾಗಿ ಕೆಲಸ ಮಾಡುವ ಸಂಘಟನೆಯನ್ನು ನಿಷೇಧ ಮಾಡಬೇಕು ಎಂದು ಒಬ್ಬ ನಾಯಕರು ಹೇಳಿದರೆ, ಅದಕ್ಕೆ ಸೂಕ್ತ ಕಾರಣವನ್ನು ನೀಡಬೇಕು' ಎಂದು ವಿವರಿಸಿದ್ದಾರೆ.

'ಸಮಾಜವು ಆರ್‌ಎಸ್‌ಎಸ್ ಅನ್ನು ಸ್ವೀಕರಿಸಿದೆ. ಸರ್ಕಾರಿ ವ್ಯವಸ್ಥೆಯೂ ಇಂತಹ ನಿಷೇಧವನ್ನು ತಪ್ಪು ಎಂದು ಹೇಳಿದೆ. ಈಗ ನಿಷೇಧದ ಮಾತನಾಡುವ ಹಿಂದಿನ ಅನುಭವದಿಂದ ಪಾಠ ಕಲಿಯಲಿ' ಎಂದು ಸಲಹೆ ನೀಡಿದ್ದಾರೆ.

ಬಿಹಾರ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಹಾರ ಚುನಾವಣೆ ಕುರಿತಂತೆ ಯಾವುದೇ ಚರ್ಚೆ ನಡೆದಿಲ್ಲ. ದೇಶ ಹಾಗೂ ಸಮಾಜದ ಹಿತದೃಷ್ಟಿಯಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಮುಂದೆ ಬಂದು ಮತ ಚಲಾಯಿಸಬೇಕು ಎಂಬುದು ಸಂಘದ ನಿಲುವಾಗಿದೆ ಹೊರತು ಹಣ ಹಾಗೂ ಜಾತಿ ಆಧರಿಸಿ ಅಲ್ಲ. ಈ ವಿಚಾರದಲ್ಲಿ ಜನರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು' ಎಂದು ಹೇಳಿದ್ದಾರೆ.

ರಾಷ್ಟ್ರೀಯ ಪೌರತ್ವ ನೋಂದಣಿ(ಎನ್‌ಆರ್‌ಸಿ) ಕಾಲಕಾಲಕ್ಕೆ ನವೀಕರಿಸಬೇಕು. ಯಾರಾದರೂ ಈ ಪ್ರಕ್ರಿಯೆಗೆ ಆಕ್ಷೇಪಣೆ ಸಲ್ಲಿಸುವುದಿದ್ದರೆ, ನೇರವಾಗಿ ಆಯೋಗಕ್ಕೆ ದಾಖಲೆಗಳನ್ನು ಸಲ್ಲಿಸಬೇಕು' ಎಂದು ಹೊಸಬಾಳೆ ತಿಳಿಸಿದ್ದಾರೆ.

> ಕಾಂಗ್ರೆಸ್‌ನಲ್ಲಿರುವ ಆರ್‌ಎಸ್‌ಎಸ್‌ನ ಸ್ಲೀಪರ್ ಸೆಲ್ ಹೊರಹಾಕಬೇಕು. ಪಕ್ಷದ ಎಲ್ಲರು ಆರ್‌ಎಸ್‌ಎಸ್ ಇತಿಹಾಸ ಓದಬೇಕು. ನಮ್ಮ ಮತ್ತು ಅವರ ಸಿದ್ಧಾಂತವು ಬೇರೆ ಬೇರೆ ಇವೆ. ಅವರ ಸಿದ್ಧಾಂತದಿಂದ ದೂರ ಇರಬೇಕು
> **ಬಿ.ಕೆ. ಹರಿಪ್ರಸಾದ್,** ಕಾಂಗ್ರೆಸ್ ನಾಯಕ

'ಬಂಗಾಳದಲ್ಲಿ ಪರಿಸ್ಥಿತಿ ಗಂಭೀರ'


ದತ್ತಾತ್ರೇಯ ಹೊಸಬಾಳೆ

'ಪಶ್ಚಿಮ ಬಂಗಾಳದ ಪರಿಸ್ಥಿತಿ ಕುರಿತಂತೆ ಯಾವುದೇ ಚರ್ಚೆ ನಡೆದಿಲ್ಲ. ಈ ಹಿಂದೆ ಚರ್ಚೆ ನಡೆದಿತ್ತು. ಅಲ್ಲಿನ ಪರಿಸ್ಥಿತಿಯೂ ಗಂಭೀರವಾಗಿದೆ. ಈ ಹಿಂದಿನ ಸಭೆಯಲ್ಲಿ ನಿಲುವಳಿಯನ್ನು ಅಂಗೀಕರಿಸಲಾಗಿತ್ತು. ಸಂಘದ ಕಾರ್ಯಚಟುವಟಿಕೆಯನ್ನು ಅಲ್ಲಿ ವ್ಯಾಪಕವಾಗಿ ವಿಸ್ತರಿಸಲಾಗಿದೆ. ಆದರೆ, ಕಳೆದ ಚುನಾವಣೆಯ ನಂತರ ರಾಜಕೀಯ ನಾಯಕತ್ವಕ್ಕಾಗಿ ಅಲ್ಲಿನ ಮುಖ್ಯಮಂತ್ರಿ ಅವರು ದ್ವೇಷ ಹರಡುವ ಕಾರ್ಯದಲ್ಲಿ ಭಾಗಿಯಾಗಿದ್ದಾರೆ' ಎಂದು ದತ್ತಾತ್ರೇಯ ಹೊಸಬಾಳೆ ಆರೋಪಿಸಿದ್ದಾರೆ.

'ಬಂಗಾಳವು ದೇಶದ ಗಡಿ ರಾಜ್ಯವಾಗಿದೆ. ಬಾಂಗ್ಲಾದೇಶದಿಂದ ಅಲ್ಲಿನ ಜನರು ಒಳನುಸುಳುತ್ತಿರುವ ಕಾರಣ, ಒತ್ತಡ ಸೃಷ್ಟಿಯಾಗಿದೆ. ಈ ಸಮಸ್ಯೆಯನ್ನು ಕೊನೆಗೊಳಿಸಲು ರಾಜಕೀಯ ನಾಯಕತ್ವವು ವಿಫಲವಾದಲ್ಲಿ, ಅದು ಬಂಗಾಳದ ಜನರಿಗೆ ಮಾಡುವ ಅನ್ಯಾಯವಾಗಲಿದೆ. ಒಂದು ಕಾಲದಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶನ ನೀಡಿದ್ದ ರಾಜ್ಯವು ಅಸ್ಥಿರತೆ ಹಾಗೂ ಹಿಂಸಾಚಾರದಿಂದ ನಲುಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


'ಸಮಾಜದ ಏಕತೆಗಾಗಿ ಆರ್‌ಎಸ್‌ಎಸ್ ಕಾರ್ಯಕರ್ತರು ಬಂಗಾಳದಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ' ಎಂದು ಒತ್ತಿ ಹೇಳಿದ್ದಾರೆ.

'ನೆಹರೂ–ಪಟೇಲರ ಪತ್ರ ವ್ಯವಹಾರ ಓದಿರಿ'

ನವದೆಹಲಿ (ಪಿಟಿಐ): 'ಭಾರತದೊಂದಿಗೆ ಜಮ್ಮು ಮತ್ತು ಕಾಶ್ಮೀರವನ್ನು ಸೇರ್ಪಡೆಗೊಳಿಸುವ ಬಗ್ಗೆ ಜವಾಹರಲಾಲ್ ನೆಹರೂ ಅವರಿಗೆ ಸಹಮತ ಇರಲಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಹೇಳಿಕೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ.

'ನೆಹರೂ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನಡುವೆ ನಡೆದ ಪತ್ರ ವ್ಯವಹಾರಗಳು ಮತ್ತು ಅಂದಿನ ಕಾಲದ ಸದನದ ಚರ್ಚೆಗಳನ್ನು ಓದಿ ತಿಳಿದುಕೊಳ್ಳಿ. ಕಾಶ್ಮೀರವನ್ನು ಸ್ವತಂತ್ರ ದೇಶವನ್ನಾಗಿಸಬೇಕು ಎಂದವರು ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್‌ನವರು' ಎಂದು ಖರ್ಗೆ ಅವರು ಮೋದಿ ಅವರುಗೆ ತಿರುಗೇಟು ನೀಡಿದ್ದಾರೆ.

'ಕಾಶ್ಮೀರದ ಮಹಾರಾದ ಹರಿ ಸಿಂಗ್ ಅವರ ಅತಿಥಿಗಳಾಗಿದ್ದವರು ವಿನಾಯಕ ದಾಮೋದರ್ ಸಾವರ್ಕರ್ ಮತ್ತು ಎಂ.ಎಸ್. ಗೋಲ್ವಾಲ್ಕರ್. ನೆಹರೂ ಅವರ ಬಗ್ಗೆ ಮೋದಿ ಅವರು ಆಡಿದ ಮಾತುಗಳು ಶುದ್ಧ ಸುಳ್ಳಿನಿಂದ ಕೂಡಿವೆ ಮತ್ತು ಖಂಡನೀಯವಾಗಿವೆ' ಎಂದು ತಮ್ಮ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

'ನೆಹರೂ ಹಾಗೂ ಪಟೇಲರು ಸಂವಿಧಾನದ 370ನೇ ವಿಧಿ ಮೂಲಕ ಜಮ್ಮು ಮತ್ತು ಕಾಶ್ಮೀರವನ್ನು ಭಾರತದೊಂದಿಗೆ ಬೆಸುಗೆ ಹಾಕಿದ್ದರು. ಈ ವಿಧಿಯನ್ನು ಅಧಿವೇಶನದಲ್ಲಿ ಅಂಗೀಕರಿಸುವ ದಿನ ನೆಹರೂ ಅವರು ಅಮೆರಿಕದಲ್ಲಿ ಇದ್ದರು. ಅವರ ಅನುಪಸ್ಥಿತಿಯಲ್ಲಿ ಪಟೇಲರೇ ನಾಯಕತ್ವ ವಹಿಸಿಕೊಂಡು ಈ ವಿಧಿ ಅಂಗೀಕಾರ ಆಗುವಂತೆ ನೋಡಿಕೊಂಡಿದ್ದರು. ಈ ಇಬ್ಬರು ನಾಯಕರು ಅಷ್ಟೊಂದು ಸ್ನೇಹದಿಂದಿದ್ದರು' ಎಂದರು.

ಬಿಹಾರ ಸರ್ಕಾರದ ವಿರುದ್ಧ ಚುನಾವಣಾ ಆಯೋಗಕ್ಕೆ ಆರ್‌ಜೆಡಿ ದೂರು

'ಹಣ ವರ್ಗಾವಣೆ: ನೀತಿ ಸಂಹಿತೆ ಉಲ್ಲಂಘನೆ'

ಪ್ರಜಾವಾಣಿ ವಾರ್ತೆ/ಪಿಟಿಐ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ/ಗೋಪಾಲಗಂಜ್/ಸಿವಾನ್/ಬೇಗುಸರಾಯ್: 'ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆ' ಅಡಿಯಲ್ಲಿ ಬಿಹಾರ ಸರ್ಕಾರವು ಅ.7, 24 ಮತ್ತು 31ರಂದು ಮಹಿಳೆಯರಿಗೆ ಹಣ ವರ್ಗಾವಣೆ ಮಾಡಿದೆ. ಇದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಆರ್‌ಜೆಡಿ ಆರೋಪಿಸಿದ್ದು, ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಅ.6ರಿಂದ ಬಿಹಾರದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಆರ್‌ಜೆಡಿ ಸಂಸದ ಮನೋಜ್ ಝಾ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, 'ಎರಡನೇ ಹಂತದ ಮತದಾನಕ್ಕೂ ನಾಲ್ಕು ದಿನ ಮುಂಚಿತವಾಗಿ ನ. 7ರಂದು ಮತ್ತೊಂದು ಕಂತಿನ ಹಣ ವರ್ಗಾವಣೆ ಆಗಲಿದೆ' ಎಂದಿದ್ದಾರೆ.

'ಒಂದೆಡೆ ನೀತಿ ಸಂಹಿತೆ ಜಾರಿಯಲ್ಲಿದೆ, ಇನ್ನೊಂದೆಡೆ ಮತದಾನದ ದಿನಾಂಕವು ಹತ್ತಿರದಲ್ಲಿದೆ. ಇಂಥ ಸಮಯದಲ್ಲಿ ಹಣ ವರ್ಗಾವಣೆ ಮಾಡಲಾಗಿದೆ. ಇದು ಮತದಾರರನ್ನು ಸೆಳೆಯಲು ಮಾಡಿದ ವ್ಯವಸ್ಥಿತ ಯತ್ನ. ನೀತಿ ಸಂಹಿತೆ ಇರುವುದು ಪಕ್ಷಗಳಿಗೆ ಸಮಾನ ಅವಕಾಶ ಸಿಗುವುದಕ್ಕಾಗಿ. ಆದರೆ, ಇಲ್ಲಿ ಸಮಾನ ಅವಕಾಶವೇ ಇಲ್ಲದಂತಾಗಿದೆ' ಎಂದರು.

'ಆಯೋಗವು ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಈ ಮೂಲಕ ನೀತಿ ಸಂಹಿತೆ ಪಾಲಿಸುವುದು ಮತ್ತು ಯಾವುದೇ ಹಂತದಲ್ಲಿಯೂ ನ್ಯಾಯಸಮ್ಮತ ಚುನಾವಣೆ ನಡೆಯುವುದು ಸಾಂವಿಧಾನಿಕವಾದ ಕಡ್ಡಾಯ ಎಂಬುದನ್ನು ತೋರಿಸಬೇಕು' ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ಹೆಲಿಕಾಪ್ಟರ್ ಹಾರಾಟ ರದ್ದು: ಕಳೆದ ಮೂರು ದಿನಗಳಿಂದ ಬಿಹಾರದಲ್ಲಿ ಮಳೆ ಸುರಿಯುತ್ತಿರುವುದರಿಂದ ವಿವಿಧ ರಾಜಕೀಯ ಪಕ್ಷಗಳ ನಾಯಕರ ಸುಮಾರು 22 ಹೆಲಿಕಾಪ್ಟರ್‌ಗಳ ಹಾರಾಟಗಳನ್ನು ರದ್ದು ಮಾಡಲಾಗಿದೆ. ಮೊದಲ ಹಂತದ ಮತದಾನಕ್ಕೆ ಬಹಿರಂಗ ಪ್ರಚಾರವು ನ.4ರಂದು ಅಂತ್ಯಗೊಳ್ಳಲಿದೆ.

'ದೆಹಲಿ ನಿಯಂತ್ರಿತ'

'ಬಿಹಾರದಲ್ಲಿ ಡಬಲ್ ಇಂಜಿನ್ ಸರ್ಕಾರವಿಲ್ಲ. ಇಲ್ಲಿ ಎಲ್ಲವೂ ದೆಹಲಿಯಿಂದ ನಿಯಂತ್ರಣವಾಗುತ್ತಿದೆ. ಇಲ್ಲಿ ನಿಮ್ಮ ಕಷ್ಟಗಳನ್ನೂ ಕೇಳುವವರಿಲ್ಲ ಯಾರೂ ಇಲ್ಲ. ನಿಮ್ಮ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಗೌರವಿಸುವವರೂ ಇಲ್ಲ' ಎಂದು ಕಾಂಗ್ರೆಸ್ ಸಂಸದೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಹೇಳಿದರು.

ಬೇಗುಸರಾಯ್‌ನಿಂದ ಪ್ರಿಯಾಂಕ ಅವರು ಈ ಬಾರಿಯ ತಮ್ಮ ಪ್ರಚಾರವನ್ನು ಆರಂಭಿಸಿದರು. 'ಅವರು ಮೊದಲು ಜನರನ್ನು ವಿಭಜಿಸಿದರು. ಯುದ್ಧ ಬಯಸಿದರು. ಆದರೆ, ನೈಜ ವಿಚಾರಗಳಿಂದ ಜನರನ್ನು ಬೇರೆಡೆ ಸೆಳೆಯಲು ಆಗಲಿಲ್ಲ. ಅದಕ್ಕಾಗಿ ಮತಗಳ್ಳತನಕ್ಕೆ ಇಳಿದರು' ಎಂದರು.

ನಾನು ಹಿಂದಿನದರ ಬಗ್ಗೆಯೇ ಪ್ರಶ್ನಿಸುತ್ತೇನೆ. ಯಾರು ಕಾರ್ಖಾನೆಗಳನ್ನು, ಐಐಟಿ– ಐಐಎಂಗಳನ್ನು ಸ್ಥಾಪಿಸಿದರು. ಇದಕ್ಕೆ ಉತ್ತರ ಕಾಂಗ್ರೆಸ್ ಮತ್ತು ನೆಹರೂ' ಎಂದರು.

'ಆರ್‌ಜೆಡಿಗೆ ಮತ ನೀಡಿದರೆ 'ಜಂಗಲ್ ರಾಜ್' ಆರಂಭ'

'ಆರ್‌ಜೆಡಿಗೆ ಮತ ಹಾಕಿದರೆ ಬಿಹಾರದಲ್ಲಿ ಮತ್ತೊಮ್ಮೆ 'ಜಂಗಲ್ ರಾಜ್' ಆರಂಭವಾಗುತ್ತದೆ. ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರ ಸಹೋದರ, ಗೋಪಾಲ್‌ಗಂಜ್ ಕ್ಷೇತ್ರದ ಮಾಜಿ ಸಂಸದ ಸಾಧು ಯಾದವ್ ಅವರ ಆಟಾಟೋಪಗಳನ್ನು ನೆನಪಿಸಿಕೊಳ್ಳಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಹೇಳಿದರು.

'ಬಿಹಾರದ ಭವಿಷ್ಯವನ್ನು ಯಾರ ಕೈಗೆ ನೀಡಬೇಕು ಎಂದು ನಿರ್ಧರಿಸುವ ಅವಕಾಶವಿದು. ಒಂದು ಕಡೆ 'ಜಂಗಲ್ ರಾಜ್' ಅನ್ನು ಉಣಬಡಿಸಿದವರು. ಇನ್ನೊಂದು ಕಡೆ, ದೇಶ ಮತ್ತು ರಾಜ್ಯವನ್ನು ಅಭಿವೃದ್ಧಿಪಡಿಸಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್' ಎಂದರು.

ಅಮಿತ್ ಶಾ ಅವರು ಗೋಪಾಲ್‌ಗಂಜ್‌ನಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಚಾರ ಸಭೆಯಲ್ಲಿ ಭಾಗವಹಿಸಿದರು. ರಾಬ್ಡಿ ದೇವಿ ಅವರು ಮುಖ್ಯಮಂತ್ರಿ ಆಗಿದ್ದಾಗ ಸಾಧು ಯಾದವ್ ಅವರ ಮೇಲೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಹಲವು ಆರೋಪಗಳಿದ್ದವು.

ಬಿಹಾರದಲ್ಲಿ ಮತ್ತೊಮ್ಮೆ 'ಜಂಗಲ್ ರಾಜ್' ಆರಂಭಿಸಲು ಆರ್‌ಜೆಡಿ ಬಯಸುತ್ತಿದೆ. ಒಂದು ಕಾಲದಲ್ಲಿ ಗ್ಯಾಂಗ್‌ಸ್ಟರ್ ಆಗಿ, ಬಳಿಕ ರಾಜಕಾರಣಿಯಾಗಿದ್ದ ಮೊಹಮ್ಮದ್ ಶಹಬುದ್ದೀನ್ ಅವರ ಮಗನಿಗೆ ಆರ್‌ಜೆಡಿ ಟಿಕೆಟ್ ನೀಡಿದೆ' ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದರು.

ದಂಧೆ ನಡೆಸುವ ಸ್ಥಳ : ನಡ್ಡಾ ಅವರು ಸಿವಾನ್‌ನಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಚಾರ ಸಭೆಯಲ್ಲಿ ಭಾಗವಹಿಸಿದರು. 'ಜಂಗಲ್ ರಾಜ್ ಕಾಲದಲ್ಲಿ ಅಪಹರಣ ಎನ್ನುವುದು ದೊಡ್ಡ ಉದ್ಯಮವಾಗಿತ್ತು. ಮುಖ್ಯಮಂತ್ರಿ ನಿವಾಸವು ವಸೂಲಿ ದಂಧೆ ನಡೆಸುವ ಸ್ಥಳವಾಗಿತ್ತು' ಎಂದು ಆರೋಪಿಸಿದರು.

'ಶಹಬುದ್ದೀನ್ ಅವರ ಕೃತ್ಯಗಳನ್ನು ಸಿವಾನ್ ನೋಡಿದೆ. ಈಗ ಇದೇ ಕ್ಷೇತ್ರದಲ್ಲಿ ಅವರ ಮಗನಿಗೆ ಟಿಕೆಟ್ ನೀಡಲಾಗಿದೆ' ಎಂದರು.

'ನನ್ನ, ಸಿ.ಎಂ ಮಾತಿಗಷ್ಟೇ ಕಿಮ್ಮತ್ತು'

ಒಂದನೇ ಪುಟದಿಂದ...
ತ್ಯಾಗಕ್ಕೆ ಸಿದ್ಧ: ಕಾರವಾರದಲ್ಲಿ ಶನಿವಾರ ಮಾತನಾಡಿದ ಸಚಿವ ಮಂಕಾಳ ವೈದ್ಯ 'ನಮ್ಮ ಕುಟುಂಬ (ಸರ್ಕಾರ) ಗಟ್ಟಿಯಿದೆ. ಕುಟುಂಬದ ಯಜಮಾನರೂ (ಮುಖ್ಯಮಂತ್ರಿ) ಗಟ್ಟಿಯಾಗಿದ್ದಾರೆ. ಹೀಗಾಗಿ, ನಾವೆಲ್ಲ ಸಚಿವ ಸ್ಥಾನ ಪಡೆದು ಆಡಳಿತ ನಡೆಸಿದ್ದೇವೆ. ಕುಟುಂಬದ ಒಳಿತಿಗೆ ಯಾವುದೇ ತ್ಯಾಗಕ್ಕೂ ಸಿದ್ಧ' ಎಂದರು.

ಉತ್ತರಿಸುವುದಿಲ್ಲ: 'ನವೆಂಬರ್ ಕ್ರಾಂತಿ ವಿಚಾರದ ಬಗ್ಗೆ ಉತ್ತರಿಸುವುದಿಲ್ಲ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ' ಎಂದು ಸಿದ್ದರಾಮಯ್ಯ ಅವರ ಮಗ, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಹೇಳಿದರು. ಮೈಸೂರಿನಲ್ಲಿ ಶನಿವಾರ ಮಾತನಾಡಿದ ಅವರು, 'ಸಚಿವ ಸಂಪುಟ ಪುನರ್‌ರಚನೆ ವಿಚಾರವಾಗಿ ತಂದೆಯವರು ಈಗಾಗಲೇ ಹೇಳಿದ್ದಾರೆ. ಅವರು ಮುಖ್ಯಮಂತ್ರಿ ಆಗಿರುವವರೆಗೂ ನಾನು ಸಚಿವ ಸ್ಥಾನ ಕೇಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಡಿಕೆಶಿಗೆ ಅರ್ಹತೆ ಇದೆ'

'ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಅರ್ಹತೆ ಇದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅಭಿಪ್ರಾಯಪಟ್ಟರು.

ಚಿಕ್ಕಬಳ್ಳಾಪುರದಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಪಕ್ಷದ ಎರಡು ಕಣ್ಣುಗಳು. ಇಬ್ಬರೂ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ' ಎಂದರು. 'ರಾಜಕಾರಣದಲ್ಲಿ ಮುಖ್ಯಮಂತ್ರಿ, ಪ್ರಧಾನಿ ಆಗುವ ಅವಕಾಶ ಬಂದರೆ ಯಾರೂ ಬೇಡ ಎನ್ನುವುದಿಲ್ಲ. ಸಚಿವರಾಗುವ ಹಕ್ಕು, ಸಾಮರ್ಥ್ಯ ಎಲ್ಲರಿಗೂ ಇದೆ' ಎಂದರು.

> ಕೆಲವರು ಚರ್ಚೆ ಮಾಡಿದ ಕೂಡಲೇ ಸರ್ಕಾರ ಬದಲಾಗುವುದಿಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಚರ್ಚಿಸದಂತೆ ಎಲ್ಲರಿಗೂ ಹೈಕಮಾಂಡ್ ಸೂಚನೆ ನೀಡಿದೆ. ನಾನಂತೂ ಈವರೆಗೂ ಎಲ್ಲೂ ಚರ್ಚೆ ಮಾಡಿಲ್ಲ
> **ಕೆ.ಜೆ. ಜಾರ್ಜ್,** ಇಂಧನ ಸಚಿವ

> ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಮುಂದುವರಿಯಲಿದ್ದಾರೆ. ಹೀಗಾಗಿ ದಲಿತ ಮುಖ್ಯಮಂತ್ರಿ ಚರ್ಚೆ ಸದ್ಯಕ್ಕೆ ಅಗತ್ಯವಿಲ್ಲ. ಈ ಚರ್ಚೆಗೆ ಕಾರಣವೂ ಇಲ್ಲ, ಅವಕಾಶವೂ ಇಲ್ಲ ಹಾಗೂ ಪೂರಕ ಸನ್ನಿವೇಶವೂ ಇಲ್ಲ
> **ದಿನೇಶ್ ಗುಂಡೂರಾವ್,** ಸಚಿವ

ತಿರುಪತಿಯಲ್ಲಿ ಅವಮಾನ.. ದೇಗುಲ ನಿರ್ಮಾಣ

ಎಲ್ಲರಿಗೂ ಸುಲಭವಾಗಿ ದರ್ಶನ ಸಿಗುವಂತಾಗಲಿ ಎಂಬ ಉದ್ದೇಶ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಕಾಸಿಬುಗ್ಗಾದಲ್ಲಿರುವ ಭವ್ಯವಾದ ವೆಂಕಟೇಶ್ವರ ಸ್ವಾಮಿ ದೇವಸ್ಥಾನವನ್ನು 94 ವರ್ಷದ ಹರಿಮುಕುಂದ ಪಾಂಡಾ ನಿರ್ಮಿಸಿದ್ದಾರೆ. ಶನಿವಾರ ಇಲ್ಲಿ ನಡೆದ ಕಾಲ್ತುಳಿತದಲ್ಲಿ 10 ಜನರು ಮೃತಪಟ್ಟಿದ್ದಾರೆ.

ಪ್ರತಿಯೊಬ್ಬರಿಗೂ ವೆಂಕಟೇಶ್ವರ ದೇವರ ದರ್ಶನ ಸುಲಭವಾಗಿ ಸಿಗಬೇಕು ಎಂಬ ಉದ್ದೇಶದಿಂದ ಪಾಂಡಾ ನಿರ್ಮಿಸಿರುವ ಈ ದೇವಸ್ಥಾನ, ಈಗ ಕಾಲ್ತುಳಿತ ಘಟನೆಯಿಂದಾಗಿ ಅವರ ಆಶಯವನ್ನೇ ಬುಡಮೇಲು ಮಾಡಿದಂತಾಗಿದೆ.

ಈ ದೇವಸ್ಥಾನ ನಿರ್ಮಿಸಲು ಕಾರಣವಾದ ಸಂಗತಿಯೂ ಆಸಕ್ತಿದಾಯಕ. ದಶಕದ ಹಿಂದೆ ತಿರುಪತಿಗೆ ಹೋಗಿದ್ದ ಹರಿಮುಕುಂದ ಪಾಂಡಾ ಅವರಿಗೆ ವೆಂಕಟೇಶ್ವರ ದೇವರ ದರ್ಶನ ಸಮರ್ಪಕವಾಗಿ ಸಿಗಲಿಲ್ಲ. ಈ ಕಹಿ ಅನುಭವ ಅವರನ್ನು ಬಹುವಾಗಿ ಕಾಡಿತು.

ಎಲ್ಲರಿಗೂ ವೆಂಕಟೇಶ್ವರ ದೇವರ ದರ್ಶನ ಸುಲಭವಾಗಿ ಸಿಗಬೇಕು. ತಿರುಪತಿಯಲ್ಲಿರುವ ದೇವಸ್ಥಾನವನ್ನೇ ಹೋಲುವಂತಹ ದೇಗುಲವನ್ನು ನಿರ್ಮಿಸಬೇಕು ಎಂದು ನಿಶ್ಚಯಿಸಿದ ಅವರು, ಅದರನ್ನೂ ಕಾರ್ಯಗತಗೊಳಿಸಿದರು.


ಹರಿಮುಕುಂದ ಪಾಂಡಾ ಜತೆ ಚರ್ಚಿಸಿದ ಸಚಿವ ಕೆ.ಅಚ್ಚನ್ನಾಯುಡು –ಪಿಟಿಐ ಚಿತ್ರ

ತಮ್ಮ ಒಡೆತನದ 50 ಎಕರೆ ಎಸ್ಟೇಟ್ ಪೈಕಿ, 10 ಎಕರೆ 40 ಸೆಂಟ್ ಜಾಗದಲ್ಲಿ ಈ ಭವ್ಯ ದೇವಸ್ಥಾನ ನಿರ್ಮಿಸಿದ್ದಾರೆ. ಅಂದಾಜು ₹2 ಕೋಟಿ ವೆಚ್ಚ ಮಾಡಿ, 6 ವರ್ಷಗಳಲ್ಲಿ ಇದನ್ನು ನಿರ್ಮಿಸಲಾಗಿದೆ.

ಕೆಲ ಕಾಮಗಾರಿಗಳು ಬಾಕಿ ಇರುವಾಗಲೇ, ನಾಲ್ಕು ತಿಂಗಳ ಹಿಂದೆ ಅವರು ಈ ದೇವಸ್ಥಾನವನ್ನು ಉದ್ಘಾಟಿಸಿದ್ದರು. ಮೂಲ ಮೂರ್ತಿಯ ಎತ್ತರ 9 ಅಡಿ 9 ಇಂಚು ಇದ್ದು, ಪ್ರತ್ಯೇಕವಾಗಿ ಶ್ರೀದೇವಿ ಮತ್ತು ಭೂದೇವಿಯರ ಗರ್ಭಗುಡಿಗಳನ್ನು ಸಹ ನಿರ್ಮಿಸಲಾಗಿದೆ. ಇವೆಲ್ಲವೂ ತಿರುಪತಿಯಲ್ಲಿನ ದೇವತಾಮೂರ್ತಿಗಳ ಪ್ರತಿರೂಪವಾಗಿವೆ.

'ನಾನು ಚಿಕ್ಕಂದಿನಿಂದಲೂ ತಿರುಪತಿಗೆ ಹೋಗುತ್ತಿದ್ದೆ. ದೇವರ ಮೂರ್ತಿ ಮುಂದೆ ಹೆಚ್ಚುಹೊತ್ತು ನಿಂತು ದರ್ಶನ ಪಡೆಯುತ್ತಿದ್ದೆ. ಇದಕ್ಕೆ ಕೆಲ ಅರ್ಚಕರು ಕೂಡ ನನಗೆ ನೆರವಾಗುತ್ತಿದ್ದರು' ಎಂದು ಪಾಂಡಾ ಹೇಳಿದ್ದಾರೆ.

'ಈಗ ಅದೆಲ್ಲಾ ಗತವೈಭವ. ಹತ್ತು ವರ್ಷಗಳ ಹಿಂದೆ ಹೋದಾಗ ನನಗೆ ಕಹಿ ಅನುಭವವಾಯಿತು. ದೇವರ ದರ್ಶನ ಪಡೆಯಲು ಮುಂದಾದ ವೇಳೆ ನನ್ನನ್ನು ನೂಕಿದರು. ಸರಿಯಾದ ದರ್ಶನ ಸಿಗಲಿಲ್ಲ' ಎಂದಿದ್ದಾರೆ.

'ನನಗಾದ ಈ ಕಹಿ ಅನುಭವ ಕುರಿತು ತಾಯಿ ಬಳಿ ಹೇಳಿಕೊಂಡೆ. ಆಗ, ನೀವೇ ಏಕೆ ನಮ್ಮ ಗ್ರಾಮದಲ್ಲಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನ ನಿರ್ಮಿಸಬಾರದು. ನೀನು ದರ್ಶನ ಪಡೆಯುವ ಜೊತೆಗೆ ಇತರರಿಗೂ ಈ ಸೌಲಭ್ಯ ಕಲ್ಪಿಸಬಹುದಲ್ಲ ಎಂಬ ಸಲಹೆ ಇತ್ತಳು. ತಾಯಿಯ ಸಲಹೆಯಂತೆ ಈ ದೇವಸ್ಥಾನ ನಿರ್ಮಿಸಿದೆ' ಎಂದೂ ಹೇಳಿದ್ದಾರೆ.

'ದೇವಸ್ಥಾನಕ್ಕೆ ಅಂದಾಜು 2 ಸಾವಿರದಷ್ಟು ಜನಕ್ಕೆ ಬರಬಹುದು ಎಂದು ಭಾವಿಸಿದ್ದೆವು. ಇಷ್ಟೊಂದು ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ ಎಂಬ ನಿರೀಕ್ಷೆ ಇರದ ಕಾರಣ ಪೊಲೀಸರಿಗೆ ತಿಳಿಸಿರಲಿಲ್ಲ' ಎಂದು ಬೇಸರದಿಂದ ಹೇಳಿದರು.

'ಭಿನ್ನಮತ ಹೋಗದಿದ್ದರೆ ಸರ್ಕಾರ ಪತನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪೂರ್ಣ ಬಹುಮತದ ಸರ್ಕಾರ ಇದೆ. ಆಡಳಿತ ಪಕ್ಷದಲ್ಲಿನ ಭಿನ್ನಮತ ಬಗೆಹರಿಸಿಕೊಳ್ಳದೇ ಇದ್ದರೆ, ಸರ್ಕಾರ ಬಿದ್ದುಹೋಗುತ್ತದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಈ ಸರ್ಕಾರಕ್ಕೆ 136 ಶಾಸಕರ ಬಲ ಇದೆ. ಆದರೆ, ಎರಡೂವರೆ ವರ್ಷ ಸರ್ಕಾರ ನಡೆಸುವಲ್ಲಿ ಹಲವು ಬಾರಿ ನಗೆಪಾಟಲಿಗೆ ಈಡಾಗಿದ್ದಾರೆ. ಈ ಬಗ್ಗೆ ನಾವೇನು ಮಾತನಾಡುವುದು? ಸರ್ಕಾರದ ಸಚಿವರು, ಆಡಳಿತ ಪಕ್ಷದ ಶಾಸಕರೇ ಈ ಬಗ್ಗೆ ಮಾತನಾಡುತ್ತಿದ್ದಾರೆ' ಎಂದರು.

ಮಧ್ಯಂತರ ಚುನಾವಣೆಗೆ ತಾವು ಸಿದ್ಧ ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಹೇಳಿಕೆ ನೀಡಿರುವ ಬಗ್ಗೆ ಪ್ರಶ್ನಿಸಿದಾಗ, 'ಮಧ್ಯಂತರ ಚುನಾವಣೆಯ ಬಗ್ಗೆ ನಾನು ಮಾತನಾಡುವುದಿಲ್ಲ. ಮಧ್ಯಂತರ ಚುನಾವಣೆಗೆ ಅಶೋಕ ಅವರು ಸಿದ್ಧ ಎನ್ನುವುದಾದರೆ, ನಾವೂ ಸಿದ್ಧ. ಸರ್ಕಾರ ಬಿದ್ದರೆ ನಾವು ಚುನಾವಣೆಗೆ ತಯಾರಿ ಆಗಲೇಬೇಕು' ಎಂದು ಉತ್ತರಿಸಿದರು.

'ಕೇರಳ ಕಡುಬಡತನ ಮುಕ್ತ'

ಒಂದನೇ ಪುಟದಿಂದ...
ವಿಪಕ್ಷಗಳ ಆರೋಪಗಳಿಗೆ ಪ್ರತಿಕ್ರಿಯಿಸಿದ ಪಿಣರಾಯಿ ವಿಜಯನ್, 'ಸರ್ಕಾರದ ಘೋಷಣೆ ಅಸಂಬದ್ಧ ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ಈ ಮಾತುಗಳು ಸ್ವತಃ ಅವರ ವರ್ತನೆಯನ್ನೇ ಹೇಳುತ್ತವೆ' ಎಂದು ತಿರುಗೇಟು ನೀಡಿದರು.

'ಯಾವುದನ್ನು ಜಾರಿಗೊಳಿಸಲು ಸಾಧ್ಯವೋ ಅಂಥ ಭರವಸೆಗಳನ್ನಷ್ಟೇ ನಾವು ನೀಡುತ್ತೇವೆ. ನಾವು ನೀಡಿದ ಭರವಸೆಗಳ ಅನುಷ್ಠಾನವನ್ನೂ ಮಾಡಿದ್ದೇವೆ. ಇದು ವಿಪಕ್ಷಗಳಿಗೆ ನಮ್ಮ ಉತ್ತರ' ಎಂದರು.

62 ಲಕ್ಷ ಕುಟುಂಬಗಳಿಗೆ ಪಿಂಚಣಿ, ಮನೆ ಇಲ್ಲದ ಕುಟುಂಬಗಳಿಗೆ 4.70 ಲಕ್ಷ ಮನೆಗಳು, ಆರು ಸಾವಿರ ಸಾರ್ವಜನಿಕ ಆರೋಗ್ಯ ಕೇಂದ್ರಗಳು, 43 ಲಕ್ಷ ಕುಟುಂಬಗಳಿಗೆ ಉಚಿತ ವಿಮೆ ಮತ್ತು ನಾಲ್ಕು ಲಕ್ಷ ಕುಟುಂಬಗಳಿಗೆ ಭೂಮಿಯನ್ನು ಒದಗಿಸಲಾಗಿದೆ. ಇಂತಹ ಜನಪರ ಯೋಜನೆಗಳಿಂದ ಕೇರಳದಲ್ಲಿ ಕಡುಬಡತನವನ್ನು ಹೋಗಲಾಡಿಸಲಾಗಿದೆ ಎಂದು ಪ್ರತಿಪಾದಿಸಿದರು.

> ಕಡುಬಡತನ ನಿರ್ಮೂಲನೆ ಮಾಡುವ ಮೂಲಕ ಕೇರಳವು ಕಲ್ಯಾಣ ಕಾರ್ಯಕ್ರಮಗಳ ಪ್ರಯೋಗಾಲಯವಾಗಿ ಎನಿಸಿದೆ. ರಾಜ್ಯವು ದೇಶಕ್ಕೇ ಮಾದರಿಯಾಗಿದೆ
> **ಪಿಣರಾಯಿ ವಿಜಯನ್** ಮುಖ್ಯಮಂತ್ರಿ

ಈ ವರ್ಷ ಮೂರು ದುರ್ಘಟನೆ... 22 ಮಂದಿ ಸಾವು



ಅಮರಾವತಿ- (ಪಿಟಿಐ): ಈ ವರ್ಷ ಆಂಧ್ರಪ್ರದೇಶದ ವಿವಿಧ ದೇವಸ್ಥಾನಗಳಲ್ಲಿ ಸಂಭವಿಸಿದ ದುರ್ಘಟನೆಗಳಲ್ಲಿ 22 ಮಂದಿ ಮೃತಪಟ್ಟು, 100ರಷ್ಟು ಜನರು ಗಾಯಗೊಂಡಿದ್ದಾರೆ.

ಶನಿವಾರವಷ್ಟೆ, ಶ್ರೀಕಾಕುಳಂ ಜಿಲ್ಲೆಯ ಕಾಸಿಬುಗ್ಗಾದ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 10 ಜನರು ಮೃತಪಟ್ಟಿದ್ದಾರೆ.

ಏಪ್ರಿಲ್‌ನಲ್ಲಿ ವಿಶಾಖಪಟ್ಟಣ ಸಮೀಪದ ಸಿಂಹಾಚಲದಲ್ಲಿರುವ ಶ್ರೀ ವರಾಹ ಲಕ್ಷ್ಮಿ ದೇವಸ್ಥಾನದಲ್ಲಿ ಸಂಭವಿಸಿದ ಅವಘಡದಲ್ಲಿ 7 ಜನರು ಮೃತಪಟ್ಟಿದ್ದರು. ಭಾರಿ ಮಳೆಯಿಂದಾಗಿ ಶಿಥಿಲಗೊಂಡಿದ್ದ ಗೋಡೆ ಕುಸಿದು ಅವಘಡ ಸಂಭವಿಸಿತ್ತು.

ಜನವರಿಯಲ್ಲಿ ತಿರುಪತಿಯ ಬೈರಾಗಿ ಪಟ್ಟೇದದಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 6 ಜನ ಭಕ್ತರು ಮೃತಪಟ್ಟು, ಇತರ 40 ಮಂದಿ ಗಾಯಗೊಂಡಿದ್ದರು. ವೈಕುಂಠ ದ್ವಾರ ದರ್ಶನದ ಟಿಕೆಟ್ ಖರೀದಿಗಾಗಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದ ವೇಳೆ ಕಾಲ್ತುಳಿತ ಉಂಟಾಗಿತ್ತು.

ಆಂಧ್ರದಲ್ಲಿ ಕಾಲ್ತುಳಿತ: 10 ಸಾವು

ಒಂದನೇ ಪುಟದಿಂದ..
ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿಯೂ ಅವರು ಘೋಷಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಸಚಿವ ಅಮಿತ್ ಶಾ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ದುರ್ಘಟನೆ ಕುರಿತು ಆಘಾತ ವ್ಯಕ್ತಪಡಿಸಿದ್ದಾರೆ.

'ಪರವಾನಗಿ ಇಲ್ಲದೆ ನಿರ್ಮಾಣ'

'ಈ ದೇವಸ್ಥಾನ ನಿರ್ಮಿಸಿರುವ ಹರಿಮುಕುಂದ ಪಾಂಡಾ ಅವರು ಕಾರ್ಯಕ್ರಮ ಕುರಿತು ನಮಗೆ ಮಾಹಿತಿಯನ್ನೇ ನೀಡಿರಲಿಲ್ಲ. ಅಲ್ಲದೇ, ಈ ದೇವಸ್ಥಾನ ನಿರ್ಮಾಣಕ್ಕೆ ಅವರು ಅಗತ್ಯ ಪರವಾನಗಿ ಪಡೆದಿಲ್ಲ. ಅನುಮತಿ ಪಡೆಯದೆಯೇ ಉದ್ಘಾಟಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಮಹೇಶ್ವರ ರೆಡ್ಡಿ ಹೇಳಿದರು.

ಹೃದಯವಿದ್ರಾವಕ ದೃಶ್ಯಗಳು...

ಕಾಲ್ತುಳಿತ ಉಂಟಾದ ಮರುಗಳಿಗೆಯಲ್ಲಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಹೃದಯವಿದ್ರಾವಕ ದೃಶ್ಯಗಳು ಕಂಡುಬಂದವು.

ದರ್ಶನಕ್ಕಾಗಿ ನಿರ್ಮಿಸಿರುವ ಕಿರಿದಾದ ಮಾರ್ಗದಲ್ಲಿ ನೂರಾರು ಮಹಿಳೆಯರು ಸಿಲುಕಿದ್ದರು. ಜನರ ದಟ್ಟಣೆಯೂ ಹೆಚ್ಚಾಗಿದ್ದರಿಂದ ಮಹಿಳೆಯರು ಉಸಿರಾಡುವುದಕ್ಕೂ ಕಷ್ಟಪಡುತ್ತಿದ್ದರು. ಘಟನಾ ಸ್ಥಳದಿಂದ ಹೇಗಾದರೂ ಪಾರಾಗಿ ಹೊರಗೆ ಹೋಗಬೇಕು ಎಂಬ ಧಾವಂತದಲ್ಲಿ ಹಲವರು ರೇಲಿಂಗ್‌ಗಳನ್ನು ಏರಲು ಪ್ರಯತ್ನಿಸಿದರು. ಗುಂಪಿನಲ್ಲಿ ಸಿಲುಕಿದ್ದ ತಮ್ಮವರನ್ನು ರಕ್ಷಿಸಲು ಕೆಲ ಪುರುಷರು ಹರಸಾಹಸ ಪಟ್ಟರು. ತಮ್ಮವರನ್ನು ಎಳೆದರು. ಹೀಗಾಗಿ, ದೇಗುಲದ ಇಡೀ ಪ್ರಾಂಗಣದಲ್ಲಿ ಅಯೋಮಯ ಸ್ಥಿತಿ ನಿರ್ಮಾಣವಾಗಿತ್ತು. ಕಾಲ್ತುಳಿತಕ್ಕೆ ಸಿಲುಕಿ ಕುಸಿದು ಬಿದ್ದವರಿಗೆ ಅವರ ಸಂಬಂಧಿಕರು ಸಿಪಿಆರ್ ಕೊಡುತ್ತಿದ್ದರು. ಇನ್ನೂ ಕೆಲವರು ಕೆಳಗೆ ಬಿದ್ದು, ಪ್ರಜ್ಞಾಹೀನರಾದವರ ಪಾದ ಹಾಗೂ ಹಸ್ತಗಳನ್ನು ಉಜ್ಜುತ್ತಿದ್ದ ದೃಶ್ಯಗಳು ಕೂಡ ಕಂಡುಬಂದವು.

> ಜನಸಂದಣಿ ನಿರ್ವಹಣೆಗೆ ಅಗತ್ಯವಿರುವ ಕ್ರಮಗಳನ್ನು ದೇವಸ್ಥಾನ ಆಡಳಿತ ಮಂಡಳಿ ಕೈಗೊಂಡಿಲ್ಲ. ಭಕ್ತರು ಸೇರುವ ಕುರಿತು ಅಧಿಕಾರಿಗಳಿಗೆ ತಿಳಿಸುವಲ್ಲಿ ಮಂಡಳಿ ವಿಫಲವಾಗಿದೆ
> **ಕೆ.ಅಚ್ಚನ್ನಾಯುಡು,** ಸಚಿವ

> ಕಾಲ್ತುಳಿತದಲ್ಲಿ ಗಾಯಗೊಂಡವರಿಗೆ ಅತ್ಯುತ್ತಮ ಚಿಕಿತ್ಸೆ ನೀಡಲಾಗುವುದು. ದೇವಸ್ಥಾನಗಳಲ್ಲಿ ಜನರ ದಟ್ಟಣೆ ನಿರ್ವಹಣೆಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು
> **ಪವನ್ ಕಲ್ಯಾಣ್,** ಉಪಮುಖ್ಯಮಂತ್ರಿ

> ದುರ್ಘಟನೆಗಳು ಸಂಭವಿಸಿದ್ದರೂ ಮುನ್ನೆಚ್ಚರಿಕೆಗೆ ರಾಜ್ಯ ಸರ್ಕಾರ ವಿಫಲವಾಗಿದೆ. ಆಡಳಿತ ಅಸಮರ್ಥವಾಗಿದೆ ಎಂಬುದನ್ನು ಇದು ತೋರಿಸುತ್ತದೆ
> **ಜಗನ್‌ಮೋಹನ್ ರೆಡ್ಡಿ,** ವೈಎಸ್‌ಆರ್ ಕಾಂಗ್ರೆಸ್ ಮುಖ್ಯಸ್ಥ

ಪಾರ್ಟಿಗಳ ರುಚಿಗೆ ಕಾಲುಸೂಪ್, ಕೀಮಾ ವಡಾ!

ವೀಕೆಂಡ್ ಪಾರ್ಟಿಗಳ ಸವಿ ಹೆಚ್ಚಿಸಲೆಂದೇ ಒಗ್ಗರಣೆ ಡಬ್ಬಿ ಮುರಳಿ ಮತ್ತವರ ಪತ್ನಿ ಸುಚಿತ್ರ ಕೆಲ ರುಚಿಕರ ರೆಸಿಪಿಗಳನ್ನು ಸಿದ್ಧಪಡಿಸುವ ಬಗೆಯನ್ನಿಲ್ಲಿ ವಿವರಿಸಿದ್ದಾರೆ. ಸ್ನೇಹಿತರೊಂದಿಗೆ ವೈವಿಧ್ಯಮಯ ಅಡುಗೆ ರುಚಿ ಸವಿಯಬೇಕೆನ್ನುವವರಿಗೆ ಚಿಕ್ಕಪೇಟೆ ಕಾಲು ಸೂಪ್, ಸ್ಟ್ರೀಟ್ ಕೀಮಾ ವಡಾ ಸಿದ್ಧಪಡಿಸುವುದು ಹೇಗೆನ್ನುವ ಮಾರ್ಗವನ್ನು ವಿವರಿಸಿದ್ದಾರೆ. ಸ್ನೇಹಿತರು, ಕುಟುಂಬಸ್ಥರೊಂದಿಗೆ ಮನೆಯಲ್ಲೇ ಈ ರೆಸಿಪಿಗಳನ್ನು ಟ್ರೈ ಮಾಡಿ, ಸವಿಯೂಟದೊಂದಿಗೆ ಸಂಭ್ರಮಿಸಿ.

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 4



ಚಿಕ್ಕಪೇಟೆ ಕಾಲು ಸೂಪ್

ಬೇಕಾಗುವ ಸಾಮಗ್ರಿಗಳು: 6 ಮಟನ್ ಮೂಳೆ, 6 ಲವಂಗ, 2 ಚಕ್ಕೆ, 3 ನಕ್ಷತ್ರ ಸೋಂಪು, 4 ಏಲಕ್ಕಿ, ಪಲಾವ್ ಎಲೆ, 1 ಚಮಚ ಮೆಣಸಿನ ಪುಡಿ, 1 ಚಮಚ ಅರಿಶಿನ ಪುಡಿ, 2 ಇಂಚು ಶುಂಠಿ, 1 ಬೆಳ್ಳುಳ್ಳಿ, 1 ಈರುಳ್ಳಿ, 8 ಹಸಿಮೆಣಸಿನಕಾಯಿ, ಪುದೀನ, ಕೊತ್ತಂಬರಿ, ಅರ್ಧ ನಿಂಬೆ ಹಣ್ಣಿನ ರಸ, 2 ಚಮಚ ಎಣ್ಣೆ.

ಈರುಳ್ಳಿ ಮತ್ತು ಶುಂಠಿಯನ್ನು ಕತ್ತರಿಸಿ, ಬೆಳ್ಳುಳ್ಳಿಯನ್ನು ಜಜ್ಜಿ ಪ್ರತ್ಯೇಕವಾಗಿಡಿ. ಹಸಿಮೆಣಸಿನ ಕಾಯಿಯನ್ನು ಉದ್ದುದ್ದ ಕತ್ತರಿಸಿ, ಕೊತ್ತಂಬರಿ ಮತ್ತು ಪುದೀನಾವನ್ನು ಕತ್ತಿರಿಸಿಟ್ಟುಕೊಳ್ಳಿ. ಒಂದು ಪ್ರೆಶರ್ ಕುಕ್ಕರ್‌ನಲ್ಲಿ 2 ಚಮಚ ಎಣ್ಣೆ ಹಾಕಿ, ಕಾದ ನಂತರ ಈರುಳ್ಳಿ ಸೇರಿಸಿ. ಮಟನ್ ಕಾಲು ಮೂಳೆಗಳನ್ನು ಹಾಕಿ, ನಂತರ ಅರಿಶಿನ ಹಾಕಿ ಹುರಿಯಿರಿ. ನಂತರ 8 ಬಟ್ಟಲು ನೀರನ್ನು ಸೇರಿಸಿ ದೊಡ್ಡ ಉರಿಯಲ್ಲಿ 6 ವಿಶಿಲ್ ಬರುವವರೆಗೆ ಬೇಯಿಸಿ. ಈ ಪಾಯಾವನ್ನು ಸೂಪ್ ಮಾಡುವ ಒಂದು ದಿನ ಮುಂಚಿತವಾಗಿಯೂ ಮಾಡಬಹುದು.

ಮಾಡುವ ವಿಧಾನ: ಈಗ ಅರೆ ಬೆಂದಿರುವ ಪಾಯಾಗೆ ಕತ್ತರಿಸಿ ಎತ್ತಿಟ್ಟಿದ್ದ ಈರುಳ್ಳಿ ಮತ್ತು ಶುಂಠಿ, ಜಜ್ಜಿಟ್ಟಿದ್ದ ಬೆಳ್ಳುಳ್ಳಿ, ಪಲಾವ್ ಎಲೆ, ಲವಂಗ, ನಕ್ಷತ್ರ ಸೋಂಪು, ಚಕ್ಕೆ, ಏಲಕ್ಕಿಯನ್ನು ಸೇರಿಸಿ ಪುನಃ ನಾಲ್ಕು ವಿಶಿಲ್ ಹೊಡೆಸಿರಿ. ಇದಾದ ಬಳಿಕ ಸೂಪ್ ಅನ್ನು ಪ್ರತ್ಯೇಕವಾಗಿ ಶೋಧಿಸಿಕೊಳ್ಳಿ. ಸಾಂಬಾರು ಪದಾರ್ಥಗಳನ್ನು ಬೇರ್ಪಡಿಸಿ. ತಕ್ಷಣ ಬೇರೊಂದು ಬಾಂಡಲಿಗೆ ಅಥವಾ ಅದೇ ಕುಕ್ಕರ್‌ಗೆ ಬೇಯಿಸಿದ ಮಟನ್ ಮೂಳೆಗಳನ್ನು ಮತ್ತು ಸೂಪ್‌ಅನ್ನು ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಮೆಣಸಿನ ಪುಡಿಯನ್ನು ಸೇರಿಸಿ 10ನಿಮಿಷಗಳ ಕಾಲ ಬೇಯಲು ಬಿಡಿ. ಕೊನೆಯಲ್ಲಿ ಪುದೀನ, ಕೊತ್ತಂಬರಿ ಹಾಗೂ ನಿಂಬೆ ಹಣ್ಣಿನ ರಸ ಸೇರಿಸಿದರೆ ಚಿಕ್ಕಪೇಟೆ ಸೂಪ್ ಕುಡಿಯಲು ಸಿದ್ಧ.



ಸ್ಟ್ರೀಟ್ ಕೀಮಾ ವಡಾ

ಬೇಕಾಗುವ ಸಾಮಾಗ್ರಿಗಳು:
ಅರ್ಧ ಕೆ.ಜಿ ಮಾಂಸ, 2 ಈರುಳ್ಳಿ, ಪುದೀನ ಮತ್ತು ಕೊತ್ತಂಬರಿ, 2 ಚಮಚ ಹುರಿದು ಪುಡಿ ಮಾಡಿದ ಕಡಲೆ ಬೇಳೆ, 1 ಚಮಚ ತುಪ್ಪ, 5 ಹಸಿಮೆಣಸಿನಕಾಯಿ, 1 ಚಮಚ ಶುಂಠಿ ಮತ್ತು ಬೆಳ್ಳುಳ್ಳಿ ಪೇಸ್ಟ್, 1 ಚಮಚ ಖಾರದ ಪುಡಿ, 1 ಚಮಚ ಗರಂ ಮಸಾಲ, 1 ಮೊಟ್ಟೆ, ರುಚಿಗೆ ತಕ್ಕಷ್ಟು ಉಪ್ಪು ಹಾಗೂ ಫ್ರೈ ಮಾಡಲು ಎಣ್ಣೆ.

ಮಾಡುವ ವಿಧಾನ : ಒಂದು ಮಿಕ್ಸಿಂಗ್ ಬೌಲ್‌ಗೆ ಮಾಂಸ, ಈರುಳ್ಳಿ, ಖಾರದ ಪುಡಿ, ಗರಂ ಮಸಾಲ, ಕತ್ತರಿಸಿದ ಪುದೀನ, ಕೊತ್ತಂಬರಿ, ಶುಂಠಿ ಮತ್ತು ಬೆಳ್ಳುಳ್ಳಿ ಪೇಸ್ಟ್, ಮೆಣಸಿನಕಾಯಿ, ಮೊಟ್ಟೆ ಸೇರಿಸಿ ಮಿಶ್ರಣ ಮಾಡದೆ ಹಾಗೆ ಎತ್ತಿಟ್ಟುಕೊಳ್ಳಿ. ಒಂದು ಬಾಂಡಲಿಗೆ ತುಪ್ಪ ಹಾಕಿ ಸಣ್ಣ ಉರಿಯಲ್ಲಿ ಹುರಿದು ಪುಡಿ ಮಾಡಿದ ಕಡಲೆ ಪುಡಿಯನ್ನು ಕೊಂಚ ನೊರೆ ಬರುವವರೆಗೆ ಹುರಿಯಿರಿ. ನಂತರ ಈ ಮಿಶ್ರಣವನ್ನು ಮಾಂಸದ ಮಿಕ್ಸಿಂಗ್ ಬೌಲ್ ಮಿಶ್ರದೊಂದಿಗೆ ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಕಲಸಿ ಒಂದು ಗಂಟೆಗಳ ಕಾಲ ನೆನೆಯಲು ಬಿಡಿ.



ಒಂದು ಗಂಟೆಯ ನಂತರ ಬಾಂಡಲಿಯಲ್ಲಿ ಎಣ್ಣೆ ಬಿಸಿ ಮಾಡಿಕೊಳ್ಳಬೇಕು. ಈಗ ಮಾಂಸ ಸಹಿತ ಕಡಲೆಹಿಟ್ಟಿನ ಮಿಶ್ರಣವನ್ನು ವಡೆಗೆ ಬೇಕಾದ ಗಾತ್ರದಲ್ಲಿ ತೆಗೆದುಕೊಂಡು, ಚಪ್ಪಟೆಯಾಕಾರದಲ್ಲಿ ಎಣ್ಣೆಗೆ ಬಿಡಬೇಕು. ಎರಡೂ ಕಡೆ ಕಂದುಬಣ್ಣಕ್ಕೆ ಬರುವವರೆಗೆ ಹುರಿಯಬೇಕು. ಆ ನಂತರ ಎಣ್ಣೆಯನ್ನು ಶೋಧಿಸಿ, ಪ್ರತ್ಯೇಕ ಮಾಡಿಟ್ಟುಕೊಂಡರೆ ರುಚಿ ರುಚಿಯಾದ ಕೀಮಾ ವಡಾ ಸವಿಯಲು ಸಿದ್ಧ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಚರ್ಯನ್ ಕಣಿವೆಯಲ್ಲಿ...
ಇದು ನಿವೃತ್ತ ಅಧ್ಯಾಪಕರೊಬ್ಬರ ಪ್ರವಾಸದ ಅನುಭವ. ಜಗತ್ತಿನ 35 ದೇಶಗಳ ಪರ್ಯಟನೆ ಮಾಡಿದ ಅವರು ಕಜಾಕಸ್ತಾನದಲ್ಲಿ ಹೆಜ್ಜೆ ಹಾಕಿದ ಅನುಭವ ಇಲ್ಲಿದೆ. 11





ದೆಹಲಿ ಕರ್ನಾಟಕ ಸಂಘ

ಹಿಂದಿ ನೆಲದಲ್ಲಿ ಕನ್ನಡದ ಹೆಮ್ಮರ

ದೆಹಲಿ ಕರ್ನಾಟಕ ಸಂಘಕ್ಕೆ ಎಪ್ಪತ್ತೇಳರ ಪ್ರಾಯ. ಈ ಸಂಘವು ದೆಹಲಿಯಲ್ಲಿ ಕನ್ನಡ ಮತ್ತು ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಂತೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ದೆಹಲಿ ಕನ್ನಡಿಗರಿಗೆ ಮಾತ್ರವಲ್ಲದೆ ಇತರ ಭಾಷಿಕರಿಗೂ ಪರಿಚಯಿಸುವ ರಾಯಭಾರಿಯೂ ಹೌದು.

• ಮಂಜುನಾಥ ಹೆಬ್ಬಾರ್

ಕಾವೇರಿ ನೀರಿಗಾಗಿ ಕನ್ನಡಿಗರು ಹಾಗೂ ತಮಿಳರು ದಕ್ಷಿಣದಲ್ಲಿ ಹೊಡೆದಾಡುತ್ತಿರುವಾಗ ದೆಹಲಿಯಲ್ಲಿ ಉಭಯ ಭಾಷಿಕರು ಒಂದೇ ವೇದಿಕೆಯಲ್ಲಿ ವಿಚಾರ ಮಂಥನ ನಡೆಸಿದ್ದರು. ಜತೆಗೂಡಿ ನಲಿದಾಡಿದ್ದರು... ಅದೇ ವೇದಿಕೆಯಲ್ಲಿ ಈ ಹಿಂದೆ ಹಿರಿಯ ನಾಯಕರಾದ ಎಂ. ವೀರಪ್ಪ ಮೊಯಿಲಿ ಹಾಗೂ ಆಸ್ಕರ್ ಫರ್ನಾಂಡಿಸ್ ಅವರು ಅಪರೂಪಕ್ಕೆ ಯಕ್ಷ ಭೀಷ್ಮ ಹಾಗೂ ಕರ್ಣರಾಗಿ ಮನದಣಿಯೇ ಕುಣಿದಿದ್ದರು... ಪ್ರಖ್ಯಾತ ಸಾಹಿತಿಗಳು ಹಾಗೂ ವಿದ್ವಾಂಸರು ತಮ್ಮ ವಿಚಾರ ಲಹರಿಯನ್ನು ಹಂಚಿಕೊಂಡಿದ್ದರು...

ಇದಕ್ಕೆಲ್ಲ ವೇದಿಕೆ ಕಲ್ಪಿಸಿದ್ದು ದೆಹಲಿಯ ಕರ್ನಾಟಕ ಸಂಘ. 1948ರಲ್ಲಿ ಚಿಕ್ಕದಾಗಿ ಹುಟ್ಟಿಕೊಂಡ ಸಂಘಕ್ಕೀಗ 77ರ ಹರೆಯ. ದೆಹಲಿಯಲ್ಲಿ ಈ ತನಕ ಲೆಕ್ಕವಿಲ್ಲದಷ್ಟು ಸಂಘ ಸಂಸ್ಥೆಗಳು ಹುಟ್ಟಿಕೊಂಡಿವೆ. ಬಹಳಷ್ಟು ಸಂಘಗಳು ಅಳಿದಿವೆ. ಕೆಲವು ಲೆಕ್ಕಕ್ಕಷ್ಟೇ ಉಳಿದಿವೆ. ಬೆರಳೆಣಿಕೆಯ ಸಂಸ್ಥೆಗಳು ವರ್ಷಕ್ಕೆ ಒಂದೋ ಎರಡೋ ಕಾರ್ಯಕ್ರಮಕ್ಕೆ ಸೀಮಿತವಾಗಿವೆ. ಆದರೆ, ಹಿಂದಿ ನೆಲದಲ್ಲಿ ಭದ್ರವಾಗಿ ತಳವೂರಿರುವ ಕರ್ನಾಟಕ ಸಂಘ ಹಾಗಲ್ಲ. ಸಂಘದಲ್ಲಿ ವರ್ಷವಿಡೀ ಕನ್ನಡದ ಕಾರ್ಯಕ್ರಮಗಳ ರಸದೌತಣ.

ಸಂಘ ಸಾವಿರಾರು ಸದಸ್ಯರೊಂದಿಗೆ ಹೆಮ್ಮರವಾಗಿ ಬೆಳೆದಿದೆ. ಕಾರ್ಯಕ್ರಮಗಳ ಸಂಖ್ಯೆ ಮೊದಲಿಗಿಂತ ಹತ್ತು ಪಟ್ಟು ಹೆಚ್ಚಾಗಿವೆ. ಸಂಘದ ಕಟ್ಟಡದಲ್ಲಿ ಸುಸಜ್ಜಿತ ಸಭಾಂಗಣವಿದೆ. ಕನ್ನಡದ ಹಳೆಯ ಹಾಗೂ ಹೊಸ ಪುಸ್ತಕಗಳ ವೈವಿಧ್ಯತೆ ಇರುವ ಗ್ರಂಥಾಲಯವೂ ಇದೆ. ಸೆಮಿನಾರ್ ಹಾಲ್, ಉಪಾಹಾರ ಗೃಹ, ಎಟಿಎಂ ಕೇಂದ್ರಗಳು, ಬ್ಯಾಂಕ್, ವಿಶ್ರಾಂತಿ ಭವನ, ಸಂಘದ ಆಡಳಿತ ಕಚೇರಿ ಸೇರಿದಂತೆ ಸಂಕೀರ್ಣದಲ್ಲಿ ಬಗೆಬಗೆಯ ಸೌಲಭ್ಯಗಳಿವೆ. ಮಾಸಿಕವಾಗಿ ಪ್ರಕಟಗೊಳ್ಳುವ ಸಂಘದ ಮುಖವಾಣಿ 'ಅಭಿಮತ' ವಿಷಯ ವೈವಿಧ್ಯಗಳ ಹೂರಣ. ಮೊದಲ ಬಾರಿಗೆ ದೆಹಲಿಯೆಂಬ ಮಾಯಾನಗರಿಗೆ ಹೋಗುವ ಕನ್ನಡಿಗರಿಗೆ ಕರ್ನಾಟಕ ಸಂಘ ಆಶ್ರಯತಾಣವಿದ್ದಂತೆ.

ಈ ಏಳೂವರೆ ದಶಕಗಳಲ್ಲಿ ದೇಶ ಕಂಡ ಎಲ್ಲ ಸಂತಸದ ಹಾಗೂ ನೋವಿನ ಕ್ಷಣಗಳಲ್ಲೂ ಸಂಘ ಭಾಗಿಯಾಗಿದೆ. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ರಂಗನ್ನು ಅಚ್ಚಳಿಯದೆ ಉಳಿಸಿದ ಕೀರ್ತಿ ಅದರದ್ದು. ಉದ್ಯೋಗ ಅರಸಿ ದೆಹಲಿಯತ್ತ ದೌಡಾಯಿಸಿ ಬಂದ ಕನ್ನಡಿಗರ ಸಂಖ್ಯೆ ಲಕ್ಷಾಂತರ. ಭಾಷೆ ಸಮಸ್ಯೆ, ಹಿಂದಿ ಭಾಷಿಕರ ಪಾರಮ್ಯ, ಅಸಾಧ್ಯ ಚಳಿ ಮತ್ತು ಬಿಸಿಲು– ಇವೆಲ್ಲವನ್ನೂ ಸಹಿಸಿಕೊಂಡು ಕನ್ನಡತನ ಉಳಿಸಿಕೊಂಡು ಬಾಳಬೇಕೆಂದರೆ ಅಸಾಧ್ಯ ಪರಿಶ್ರಮ ಬೇಕು. ಇಂತಹ ಸನ್ನಿವೇಶದಲ್ಲಿ ಕನ್ನಡಿಗರ ಪಾಲಿಗೆ ದೆಹಲಿ ಕರ್ನಾಟಕ ಸಂಘ ಓಯಸಿಸ್‌ನಂತೆ. ಇದು ನೂರಾರು ಕನ್ನಡ ಮನಸ್ಸುಗಳು ಸೇರುವ ತಾಣ.

ತಾಯ್ನಾಡನ್ನು ಬಿಟ್ಟು ದೆಹಲಿಯಲ್ಲಿ ವಾಸಕ್ಕೆ ನಿಂತ ಕನ್ನಡಿಗರಿಗೆ ಸಾಂಸ್ಕೃತಿಕ ಆಸರೆ ಕಲ್ಪಿಸುವ ಪ್ರಜಾಸತ್ತಾತ್ಮಕ ಸಂಘಟನೆಯೊಂದರ ಅವಶ್ಯಕತೆಯನ್ನು ಗಮನಿಸಿ ಅಂದಿನ ಅನಿವಾಸಿ ಕನ್ನಡದ ಹಿರಿಯರು ಈ ಸಂಘ ಪ್ರಾರಂಭಿಸಿದರು. ಈ ಸಂಘವು ದೆಹಲಿಯಲ್ಲಿ ಕನ್ನಡ ಮತ್ತು ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಂತೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ದೆಹಲಿ ಕನ್ನಡಿಗರಿಗೆ ಮಾತ್ರವಲ್ಲದೆ ಇತರ ಭಾಷಿಕ ಜನರಿಗೂ ಪರಿಚಯಿಸುವ ಕನ್ನಡ ರಾಯಭಾರಿಯೂ ಹೌದು.

ಕನ್ನಡ ನೆಲದ ಜನಪದ ಕಲೆ, ನೃತ್ಯ, ಯಕ್ಷಗಾನ, ನಾಟಕ ಇತ್ಯಾದಿಗಳನ್ನು ಸಂಘ ಏರ್ಪಡಿಸುತ್ತಾ ಬಂದಿದೆ. ಕರ್ನಾಟಕದಿಂದ ನೂರಾರು ತಂಡಗಳು, ಕಲಾವಿದರು ದೆಹಲಿಗೆ ಬಂದು ಸಂಘದ ವೇದಿಕೆಯಲ್ಲಿ ಪ್ರದರ್ಶನಗಳನ್ನು ನೀಡಿ ಸಂಭ್ರಮಿಸಿದ್ದಾರೆ. ದೆಹಲಿಯ ಕನ್ನಡಿಗರೂ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಸುವ ಕಾರ್ಯಕ್ರಮಗಳನ್ನು ನೀಡಿ ಖುಷಿಪಟ್ಟಿದ್ದಾರೆ. ಈ ಪ್ರದರ್ಶನಗಳನ್ನು ವೀಕ್ಷಿಸಿ ಆನಂದಿಸಲು ಎಲ್ಲ ಭಾಷಿಕ ಆಸಕ್ತರಿಗೂ ಅನುವು ಮಾಡಿಕೊಡುವ ಮೂಲಕ ಭಾಷಾ ಗಡಿಗಳನ್ನು ಮೀರಿದ ಭಾವೈಕ್ಯತೆ ಬೆಳೆಸುವ ಕೆಲಸವನ್ನು ಸಂಘ ಮಾಡಿದೆ. ದಕ್ಷಿಣದ ಭಾಷೆಗಳನ್ನು ಹಿಂದಿಯೊಂದಿಗೆ ಮುಖಾಮುಖಿಯಾಗಿಸುವ ದೊಡ್ಡ ಕೆಲಸವನ್ನು ಮಾಡಿದೆ. ಎರಡು ವರ್ಷಗಳ ಹಿಂದೆ ಸಂಘ ಅಮೃತ ಮಹೋತ್ಸವ ಆಚರಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂಭ್ರಮದಲ್ಲಿ ಭಾಗಿಯಾಗಿದ್ದರು. ಸಣ್ಣದಾಗಿ ಪ್ರಾರಂಭಗೊಂಡ ಸಂಘವು ಹೆಮ್ಮರವಾಗಿ ಬೆಳೆಯಲು ಸಂಘದ ಈ ವರೆಗಿನ ಎಲ್ಲ ಅಧ್ಯಕ್ಷರ ಪರಿಶ್ರಮವಿದೆ.



ಯಕ್ಷಗಾನ ವೇಷ ಹಾಕಿದ್ದ ಆಸ್ಕರ್ ಫರ್ನಾಂಡಿಸ್ ಹಾಗೂ ಎಂ.ವೀರಪ್ಪ ಮೊಯಿಲಿ



ನಾಟಕವೊಂದರ ದೃಶ್ಯ

ಕನ್ನಡದ ಪ್ರತಿಭಾವಂತರನ್ನು ದೆಹಲಿಗೆ ಕರೆಸಿ ಗೌರವಿಸುವ ಕೆಲಸವನ್ನು ಸಂಘವು ವ್ರತದಂತೆ ಮಾಡಿಕೊಂಡು ಬಂದಿದೆ. ಕಲೆ, ಸಾಹಿತ್ಯ, ರಂಗಭೂಮಿಗೆ ಮೌಲಿಕ ಕೊಡುಗೆ ನೀಡಿದ ಮಹನೀಯರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದೆ. ಕೇವಲ ಮನರಂಜನಾತ್ಮಕ ಕಾರ್ಯಕ್ರಮಗಳಲ್ಲದೇ ರಾಷ್ಟ್ರ ಮಟ್ಟದ ಹಲವು ವಿಚಾರಸಂಕಿರಣಗಳನ್ನು ನಡೆಸಿದೆ. ದೇಶದ ಇತರ ರಾಜ್ಯಗಳ ಕರ್ನಾಟಕ ಸಂಘಗಳನ್ನು ಒಗ್ಗೂಡಿಸಲು ಹೊರನಾಡ ಕನ್ನಡ ಸಂಘಗಳ ರಾಷ್ಟ್ರೀಯ ಮಹಾಧಿವೇಶನದಂತಹ ಸಮ್ಮೇಳನಗಳನ್ನು ಆಯೋಜಿಸಿದೆ. ಕನ್ನಡ ಭಾಷೆ ಸಂಸ್ಕೃತಿಗಳ ಸೇವೆ ಮಾಡಿದ ಗಣ್ಯರನ್ನು ಗೌರವಿಸುವ ಪರಿಪಾಟ ಬೆಳೆಸಿಕೊಂಡು ಬಂದಿದೆ. ದೆಹಲಿಯಲ್ಲಿ ಕನ್ನಡ ನುಡಿ ಹಾಗೂ ರಾಜ್ಯದ ಬಹುಸಂಸ್ಕೃತಿಗಳ ಪ್ರಸರಣದ ಕೈಂಕರ್ಯ ಮಾಡುತ್ತಿದೆ. ಕರುನಾಡಿನ ವರನಟ ರಾಜ್‌ಕುಮಾರ್ ಅವರಂತಹ ದಿಗ್ಗಜರು ಇಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡದ ಶ್ರೇಷ್ಠ ಸಾಹಿತಿಗಳು, ಲೇಖಕರು ಹಾಗೂ ರಂಗಕರ್ಮಿಗಳು ಉಪನ್ಯಾಸಗಳನ್ನು ನೀಡಿದ್ದಾರೆ.

ಪ್ರತಿಕೂಲ ಸನ್ನಿವೇಶದಲ್ಲೂ ರಾಜಧಾನಿಯಲ್ಲಿ ಕರ್ನಾಟಕ, ಮಹಿಳೆ ಮತ್ತು ಕನ್ನಡ ಸಾಹಿತ್ಯ, ದಕ್ಷಿಣ ಭಾರತದ ಮೌಖಿಕ ಸಾಹಿತ್ಯದ ಪರಂಪರೆಯ ಮಹತ್ವ, ಭಾರತದ ಸಾಮಾಜಿಕ ನ್ಯಾಯ ಪರಂಪರೆಗೆ ಕರ್ನಾಟಕದ ಕೊಡುಗೆ ಮತ್ತಿತರ ವಿಷಯಗಳ ಕುರಿತು ಸಂಘವು ವಿಚಾರ ಸಂಕಿರಣಗಳನ್ನು ನಡೆಸಿದೆ. ಕನ್ನಡಕ್ಕೆ ಶಾಸ್ತ್ರೀಯ ಮನ್ನಣೆ ದೊರಕಿಸಿಕೊಡಲು ಕನ್ನಡ, ದ್ರಾವಿಡ, ತೆಲುಗು ಮತ್ತು ತಮಿಳು ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶ ಸಂಘಟಿಸಿದೆ. ಮೈಸೂರಿನಲ್ಲಿ ರಂಗಾಯಣ ಆರಂಭಗೊಳ್ಳುವುದರಲ್ಲಿ ದೆಹಲಿ ಕರ್ನಾಟಕ ಸಂಘದ ಪಾತ್ರವೂ ಇದೆ.

ಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಸುಸಜ್ಜಿತವಾಗಿ ಕನ್ನಡ ಶಾಲೆ ತೆರೆದು ಕನ್ನಡಿಗರ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ದೊರಕುವಂತೆ ಮಾಡಿರುವ ಸಾಧನೆ ಸಣ್ಣದೇನಲ್ಲ. ಜೆಎನ್‌ಯುವಿನಲ್ಲಿ ಕನ್ನಡದ ಪೀಠದ ಆರಂಭದಲ್ಲಿ ಕರ್ನಾಟಕ ಸಂಘದ ಪಾತ್ರ ದೊಡ್ಡದು. ಹಾಗೆಂದು ಸಂಘವು ವಿವಾದದಿಂದ ಹೊರತಾಗಿಲ್ಲ. ಹೊಡೆದಾಟ, ಧರಣಿ, ಪ್ರತಿಭಟನೆ, ಸಂಘರ್ಷಕ್ಕೂ 'ವೇದಿಕೆ' ಆಗಿದೆ. ಸ್ಥಾಪಿತ ಹಿತಾಸಕ್ತಿಗಳ ಕೈವಾಡ, ಬಣ ರಾಜಕಾರಣದಿಂದಲೂ ಸಂಘ ನಲುಗಿರುವುದನ್ನು ಅಲ್ಲಗಳೆಯಲಾಗದು.

ಮೊದಲ ಬೀಜ...

ದೆಹಲಿಯಲ್ಲಿ ಕನ್ನಡಿಗರು ತಮ್ಮದೇ ಆದ ಪ್ರಾದೇಶಿಕ ಅಸ್ಮಿತೆಯನ್ನು ರೂಪಿಸಿಕೊಳ್ಳುವ ಮೊದಲ ಪ್ರಯತ್ನ ಆರಂಭವಾಗಿದ್ದು 1948ರಲ್ಲಿ. ನರಹರಿರಾಯರು ಮೊದಲ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸಂಘವು ಮೊದಲ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ನಡೆಸಿತು.

11ನೇ ಪುಟಕ್ಕೆ...

ಮರಾಠಿ ಮಣ್ಣಲ್ಲಿ ಕನ್ನಡ ಕಂಪು



• ಅರುಣ ಎಂ.ಪಿ.

ಇದೇ ನಾಡು, ಇದೇ ಭಾಷೆ
ಎಂದೆಂದೂ ನನ್ನದಾಗಿರಲಿ
ಎಲ್ಲೇ ಇರಲಿ, ಹೇಗೇ ಇರಲಿ
ಕನ್ನಡವೇ ನಮ್ಮ ಉಸಿರಲ್ಲಿ...

ಪುಣೆಯ ಪ್ರತಿಷ್ಠಿತ ಬಡಾವಣೆಯ ಅಪಾರ್ಟ್‌ಮೆಂಟ್‌ವೊಂದರಿಂದ ಕನ್ನಡ ಸಿನಿಮಾದ ಈ ಹಾಡು ತಂಗಾಳಿಯೊಂದಿಗೆ ತೇಲಿ ಬಂದು ಕಿವಿಗೆ ಸೋಕಿತು. 'ಅಪ್ಪಟ ಮರಾಠಿ ನೆಲದಲ್ಲಿ ಕನ್ನಡ ಹಾಡೇ' ಎಂದು ಸಂದೇಹದಿಂದ ಹಾಡು ತೇಲಿ ಬಂದ ಅಪಾರ್ಟ್‌ಮೆಂಟ್‌ನತ್ತ ಹೆಜ್ಜೆ ಹಾಕಿದೆ. ನನ್ನ ನಿರೀಕ್ಷೆ ಹುಸಿಯಾಗಲಿಲ್ಲ. ಅಲ್ಲಿ ಸಂಪೂರ್ಣ ಕನ್ನಡದ ಕಂಪಿತ್ತು. ಅಲ್ಲಿದ್ದ ಕನ್ನಡದ ಮಕ್ಕಳೆಲ್ಲ ಒಂದಾಗಿ, ಒಂದಾದ ಮೇಲೊಂದರಂತೆ ಹಾಡುತ್ತಿದ್ದ ಕನ್ನಡದ ಹಾಡು ಕೇಳುತ್ತ ಮೈಮರೆತೆ. ಪುಣೆಯಲ್ಲಿ ಕನ್ನಡಿಗರ ಪರಿಚಯ, ಮಾತು ಮುದ ನೀಡಿತು.

'ಜಗತ್ತಿನ ಎಲ್ಲೆಯೇ ನೆಲೆ ನಿಲ್ಲಲಿ ತಾಯ್ನಾಡು ಮತ್ತು ತಾಯ್ನುಡಿ ಮೇಲಿನ ಪ್ರೀತಿ ಕಿಂಚಿತ್ತೂ ಕಡಿಮೆಯಾಗಲ್ಲ. ಈ ಮೋಹಕ್ಕೆ ಯಾರೂ ಹೊರತಲ್ಲ' ಎನ್ನುತ್ತ ನನ್ನೊಂದಿಗೆ ಮಾತಿಗಿಳಿದವರು ಹುಬ್ಬಳ್ಳಿಯ ಮನೋಜಕುಮಾರ ಅಣ್ಣಿಗೇರಿ.

'ವೃತ್ತಿಯಿಂದ ಐ.ಟಿ ಉದ್ಯೋಗಿ. ಪ್ರವೃತ್ತಿಯಿಂದ ಕನ್ನಡದ ಸೇವಕ' ಎಂದು ತಮ್ಮನ್ನು ಪರಿಚಯ ಮಾಡಿಕೊಂಡರು. ಹಲವು ವರ್ಷಗಳು ಫ್ರಾನ್ಸ್‌ನಲ್ಲಿ ಅಣು ಸಂಧಾನ (ನ್ಯೂಕ್ಲಿಯರ್ ಫಿಷನ್) ಕ್ಷೇತ್ರದಲ್ಲಿ ಕೆಲಸ ಮಾಡಿದವರು. ದಶಕದ ಹಿಂದೆ ಕುಟುಂಬದೊಂದಿಗೆ ಪುಣೆಗೆ ಬಂದು ನೆಲೆಸಿದ್ದಾರೆ. ಮಾತುಕತೆಗೆ ಮನೋಜ ಅವರ ಪತ್ನಿ ಅನಿತಾ ಹಾಗೂ ಅವರ ಗೆಳೆಯರ ಬಳಗವೂ ಸೇರಿಕೊಂಡಿತು.

ಕರ್ನಾಟಕದಿಂದ ಅನೇಕ ವರ್ಷಗಳಿಂದ ದೂರವಿದ್ದರೂ ಇಲ್ಲಿಯ ಕನ್ನಡಿಗರಿಗೆ ಕನ್ನಡದ ಮೇಲಿನ ವ್ಯಾಮೋಹ ಕಿಂಚಿತ್ತೂ ಕಡಿಮೆಯಾಗಿಲ್ಲ. ಬದಲಾಗಿ ಅದು ಹೆಮ್ಮರವಾಗಿ ಬೆಳೆದಿದೆ.

'ನಮ್ಮ ನಾಡು, ನುಡಿ, ಸಂಸ್ಕೃತಿ, ಆಹಾರದಿಂದ ದೂರವಾದಾಗಲೇ ಅದರ ಮಹತ್ವ ಅರಿವಾಗೋದು. ವಿದೇಶಿ ನೆಲದಲ್ಲಿದ್ದಾಗಲೇ ನಾವು ಹೆಚ್ಚು ಕನ್ನಡಿಗರಾಗಿದ್ದು. ಕನ್ನಡತನವನ್ನು ಮೈಗೂಡಿಸಿಕೊಂಡಿದ್ದು' ಎನ್ನುವ ದಂಪತಿ ಮರಾಠಿ ನೆಲದಲ್ಲಿ ಕನ್ನಡ ಕಸ್ತೂರಿಯ ಕಂಪು ಹರಡುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕಳೆದ ವರ್ಷದಿಂದ 'ಕಂಪು' ಎಂಬ ಅಪ್ಪಟ ಕನ್ನಡದ ಆನ್‌ಲೈನ್ ಮಾಸಪತ್ರಿಕೆಯನ್ನು ನಿಯಮಿತವಾಗಿ ಹೊರ ತರುತ್ತಿದ್ದಾರೆ. ಹೆಸರೇ ಸೂಚಿಸುವಂತೆ 'ಕಂಪು' ಅಪ್ಪಟ ಕನ್ನಡ ಪತ್ರಿಕೆ. ನಾಡು, ನುಡಿ, ಸಂಸ್ಕೃತಿ, ಸಾಹಿತ್ಯದಂತಹ ಸದಭಿರುಚಿಗೆ ಮೀಸಲಾದ ಪತ್ರಿಕೆ. ಈ ದಂಪತಿ ವ್ರತದಂತೆ ಈ ಪತ್ರಿಕೆಯನ್ನು ಅಚ್ಚುಕಟ್ಟಾಗಿ ರೂಪಿಸುತ್ತಿದ್ದಾರೆ.

ತಾಯ್ನುಡಿ ಮೇಲಿನ ಪ್ರೀತಿಯೇ 'ಕಂಪು' ಹುಟ್ಟಿಗೆ ಪ್ರೇರಣೆ. ಹೊರನಾಡ ಕನ್ನಡಿಗರು ಮತ್ತು ಅವರ ಮಕ್ಕಳಿಗೆ ಕನ್ನಡ ಭಾಷೆಯ ನಂಟು ಕಡಿದು ಹೋಗಬಾರದು ಎನ್ನುವ ತುಡಿತದ ಫಲವೇ ಈ ಪತ್ರಿಕೆ ಎನ್ನುತ್ತಾರೆ ಮನೋಜ ಮತ್ತು ಅನಿತಾ ದಂಪತಿ. ಸಂಬಳದ ಒಂದು ಭಾಗವನ್ನು ಅವರು 'ಕಂಪು' ಪತ್ರಿಕೆಗಾಗಿ ಮೀಸಲಿಟ್ಟಿದ್ದಾರೆ.

ಪುಣೆಯಲ್ಲಿ ಅನೇಕ ತಲೆಮಾರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಕನ್ನಡಿಗರು ವಾಸವಾಗಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿರುವ ಕನ್ನಡಿಗರು ಕನ್ನಡದ ನಂಟನ್ನು ಗಟ್ಟಿಯಾಗಿ ಉಳಿಸಿಕೊಂಡಿದ್ದಾರೆ. ಅವರ ಮುಂದಿನ ಪೀಳಿಗೆ ಕನ್ನಡದಿಂದ ಕ್ರಮೇಣ ದೂರವಾಗುತ್ತಿದೆ ಎಂಬ ಕೊರಗು ಇವರನ್ನು ಸದಾ ಕಾಡುತ್ತಿತ್ತು. ಅದಕ್ಕೆ ಮಕ್ಕಳ ಸುತ್ತಮುತ್ತ ಕನ್ನಡದ ವಾತಾವರಣ ಇಲ್ಲ ಎಂಬುವುದೂ ಪ್ರಮುಖವಾಗಿತ್ತು. ಇದನ್ನು ಮನಗಂಡ ದಂಪತಿ ಪುಣೆಯಲ್ಲಿ ಕನ್ನಡಿಗರನ್ನು ಒಂದೆಡೆ ಸೇರಿಸುವ ಪ್ರಯತ್ನ ಶುರುವಿಟ್ಟುಕೊಂಡರು.

10ನೇ ಪುಟಕ್ಕೆ...

ಮಂಡ್ಯ ರೈತನ ಕೃಷಿ ಪ್ರವಾಸೋದ್ಯಮ



ರೈತರು ವ್ಯವಸಾಯವನ್ನು ನಂಬಿ ಬದುಕುವುದು ಕಷ್ಟ ಎನ್ನುವ ಮಾತಿದೆ. ಆದರೆ, ಕೃಷಿಯಿಂದಲೇ ಉತ್ತಮ ಬದುಕು ಕಟ್ಟಿಕೊಳ್ಳಬಹುದು ಎನ್ನುವುದಕ್ಕೂ ಹಲವಾರು ಮಾದರಿಗಳಿವೆ. ರೈತರಲ್ಲಿ ಅನ್ವೇಷಣಾ ಮನೋಭಾವವಿದ್ದರೆ ಒಳ್ಳೆಯ ಆದಾಯ ಗಳಿಸಬಹುದು ಎನ್ನುವುದಕ್ಕೆ ಮಂಡ್ಯದ ರೈತ ವೆಂಕಟೇಶ್ ಉದಾಹರಣೆಯಾಗಿದ್ದಾರೆ.

• ಗಣಂಗೂರು ನಂಜೇಗೌಡ

ಆ ಯುವಕನ ಕೈಯಲ್ಲಿದ್ದ ಬಕೆಟ್‌ನಲ್ಲಿ ಸಾವಯವ ಗೊಬ್ಬರ ತುಂಬಿತ್ತು. ಆತ ಗದ್ದೆಯ ನಡುಮಧ್ಯದಲ್ಲಿ ನಿಂತು ಅದನ್ನು ಮಣ್ಣಿಗೆ ಸೇರಿಸುತ್ತಿದ್ದ. ಆ ದಾರಿಯಲ್ಲಿ ಓಡಾಡುವವರು ಅರೆಕ್ಷಣ ನಿಂತು ಆತನನ್ನು ಬೆರಗಿನಿಂದ ನೋಡುತ್ತಾ, ಮುಸಿಮುಸಿ ನಗುತ್ತಾ ಮುಂದೆ ಸಾಗುತ್ತಿದ್ದರು. ದಾರಿಹೋಕರು ಹೀಗೆ ವರ್ತಿಸಲು ಕಾರಣವಿತ್ತು. ಆತ ವಿದೇಶಿಯಾಗಿದ್ದ! ಪಕ್ಕಾ ಮಂಡ್ಯದ ರೈತನಂತೆ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ.

ವಿದೇಶಿ ಯುವಕ–ಯುವತಿ ಜೊತೆಯಾಗಿ ಪಾತಿ ಮಾಡಿ ಸಸಿಗಳನ್ನು ನೆಡುವುದು. ಯುವಕನೊಬ್ಬ ನಿಕ್ಕರ್ ಧರಸಿ, ತಲೆಗೆ ಟೋಪಿ ಹಾಕಿಕೊಂಡು ಬೆವರಿನಲ್ಲಿ ಸ್ನಾನ ಮಾಡುತ್ತಾ, ಕೃಷಿ ಹೊಂಡದ ಬದುವನ್ನು ಗುದ್ದಲಿಯಿಂದ ಸರಿಪಡಿಸುವ ದೃಶ್ಯಗಳನ್ನು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಸಮೀಪದ ಪಾಲಹಳ್ಳಿಯ ವೆಂಕಟೇಶ್ ಅವರ ತೋಟದಲ್ಲಿ ಸಾಮಾನ್ಯವಾಗಿ ಕಾಣಬಹುದು. ಏಕೆಂದರೆ, ವೆಂಕಟೇಶ್ ತಮ್ಮ ತೋಟವನ್ನು 'ಕೃಷಿ ಪ್ರವಾಸೋದ್ಯಮ'ದ ತಾಣವನ್ನಾಗಿ ರೂಪಿಸಿದ್ದಾರೆ.

ಇವರ ತೋಟದತ್ತ ಇಟಲಿ, ಜರ್ಮನಿ, ಐರ್ಲೆಂಡ್, ಫ್ರಾನ್ಸ್, ಹಂಗೇರಿ, ಜಿಂಬಾಬ್ವೆ, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳ ರೈತರು ಮತ್ತು ಕೃಷಿಯಲ್ಲಿ ಆಸಕ್ತಿ ಹೊಂದಿರುವ ಯುವಕ–ಯುವತಿಯರು ಬರಲಾರಂಭಿಸಿದ್ದಾರೆ. ನಮ್ಮದೇ ದೇಶದ ದೆಹಲಿ, ಉತ್ತರ ಪ್ರದೇಶ, ಮಹಾರಾಷ್ಟ್ರ, ಲೂಧಿಯಾನ ಕಡೆಗಳಿಂದಲೂ ರೈತರು ಬರುತ್ತಿದ್ದಾರೆ. ದಿನಗಳು ಕಳೆದಂತೆ ಹೀಗೆ ಬರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಇಲ್ಲಿಗೆ ಬರುವ ದೇಶ–ವಿದೇಶಗಳ ರೈತರು ಜಮೀನು ಉಳುಮೆ ಮಾಡುವುದು, ಬಿತ್ತನೆ ಮಾಡುವುದು, ಗದ್ದೆಗೆ ಗೊಬ್ಬರ ಹಾಕುವುದು, ದ್ರಾವಣ ಸಿಂಪಡಿಸುವುದು, ಕೊಯ್ಲು ಮಾಡುವುದು ಹಾಗೂ ಒಕ್ಕಣೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ವಾರ, ತಿಂಗಳುಗಟ್ಟಲೆ ಇಲ್ಲೇ ಇದ್ದು ಕೃಷಿ ಕಾರ್ಯದ ಬಗ್ಗೆ ಸಮಗ್ರ ಅನುಭವ ಪಡೆಯಲು ಯತ್ನಿಸುತ್ತಾರೆ. ಮೀನು, ಹಸು, ಮೇಕೆ ಮತ್ತು ಕೋಳಿ ಸಾಕಣೆ ಹಾಗೂ ವಿವಿಧ ದ್ರಾವಣಗಳ ತಯಾರಿಕೆ ಬಗೆಗೂ ವೆಂಕಟೇಶ್ ಮತ್ತು ಅವರ ಕುಟುಂಬದ ಸದಸ್ಯರು ತರಬೇತಿ ನೀಡುತ್ತಾರೆ. ವಿದೇಶಿ ಮತ್ತು ಭಾರತೀಯ ಕೃಷಿ ಪದ್ಧತಿಗಳ ಬಗ್ಗೆ ವಿಚಾರ ವಿನಿಮಯ ನಡೆಯುತ್ತದೆ. ಹಬ್ಬ, ಜಾತ್ರೆ, ಉತ್ಸವಗಳಂತಹ ಆಚರಣೆಗಳ ಕುರಿತೂ ತಿಳಿಸಿಕೊಡಲಾಗುತ್ತದೆ. ಸ್ಥಳೀಯ ರೈತರು ಮತ್ತು ಅಧಿಕಾರಿಗಳನ್ನು ಕರೆಸಿ ಚರ್ಚಾಕೂಟ ಏರ್ಪಡಿಸಲಾಗುತ್ತದೆ. ಇಲ್ಲಿ ಉಳಿದುಕೊಳ್ಳುವವರಿಗೆ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಸದ್ಯಕ್ಕೆ ಶುಲ್ಕ ನಿಗದಿ ಮಾಡಿಲ್ಲ. ಕೊಟ್ಟಷ್ಟು ಪಡೆಯುತ್ತಾರೆ.

'ಕೃಷಿ ಪ್ರವಾಸೋದ್ಯಮ ಪರಿಕಲ್ಪನೆ ಸಾಕಾರಗೊಳ್ಳಲು ಪ್ರೇರಣೆ ನೀಡಿದವರು ಬೆಂಗಳೂರಿನ ಐ.ಟಿ. ಉದ್ಯೋಗಿಗಳಾದ ಜೆ. ಫ್ರಾಂಕ್ಲಿನ್ ಮತ್ತು ಸಂಗೀತಾ. ಅವರ ಮಾರ್ಗದರ್ಶನದಲ್ಲಿ ದೇಶ, ವಿದೇಶಗಳ ರೈತರ ಸಂಪರ್ಕ ಸಾಧ್ಯವಾಗಿದೆ. ಸಾವಯವ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ನೇರ ಮಾರಾಟಕ್ಕೆ ಅನುಕೂಲವಾಗಿದೆ. ಅಕ್ಕಿ, ರಾಗಿ, ಹಣ್ಣು, ತರಕಾರಿ, ಸೊಪ್ಪು, ಹಾಲು, ತುಪ್ಪ, ಮೀನು, ಮೇಕೆ, ಎರೆಹುಳು ಗೊಬ್ಬರ ಮಾರಾಟ ಸೇರಿದಂತೆ ಇತರೆ ಮೂಲಗಳಿಂದ ವರ್ಷಕ್ಕೆ ₹10 ಲಕ್ಷದವರೆಗೆ ಗಳಿಸುತ್ತೇನೆ' ಎಂದು ವೆಂಕಟೇಶ್ ಹೇಳುತ್ತಾರೆ.

ವೆಂಕಟೇಶ್ ಹೈಸ್ಕೂಲ್ ಹಂತಕ್ಕೇ ಓದನ್ನು ಬಿಟ್ಟು ಅಪ್ಪನ ಜತೆ ನೇಗಿಲು ಹಿಡಿದವರು. ಐದು ಎಕರೆ ಜಮೀನಿನಲ್ಲಿ ಸಾಂಪ್ರದಾಯಿಕವಾಗಿ ಭತ್ತ, ರಾಗಿ, ಕಬ್ಬು, ಇತರೆ ಬೆಳೆ ಬೆಳೆಯುತ್ತಿದ್ದರು. ಎಂಟು ವರ್ಷಗಳ ಹಿಂದೆ ಐ.ಟಿ ಉದ್ಯೋಗಿ ಸಂಗೀತಾ ಪಾಲಹಳ್ಳಿಯಲ್ಲಿ ಜಮೀನು ಖರೀದಿಸಲು ಬಂದಾಗ ವೆಂಕಟೇಶ್ ಅವರ ಪರಿಚಯವಾಗಿ ಸಾವಯವ ಕೃಷಿಯ ಬಗ್ಗೆ ಚರ್ಚಿಸಿದರು. ಆ ಚರ್ಚೆ ವೆಂಕಟೇಶ್ ಅವರ ಚಿಂತನೆಯ ದಿಕ್ಕನ್ನೇ ಬದಲಿಸಿತು. ಸಾಂಪ್ರದಾಯಿಕ ಕೃಷಿ ಪದ್ಧತಿ ಬಿಟ್ಟು 'ಕೃಷಿ ಪ್ರವಾಸೋದ್ಯಮ'ದತ್ತ ಹೊರಳಿದರು.

ಮಣ್ಣು ಮತ್ತು ಮನುಷ್ಯನ ಆರೋಗ್ಯಕ್ಕೆ ಆದ್ಯತೆ ನೀಡುವ ಸಾವಯವ ಕೃಷಿ ಚಟುವಟಿಕೆ ಆರಂಭವಾಯಿತು. ರಸಗೊಬ್ಬರ, ಕೀಟನಾಶಕಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದರು. ಬೆಳೆಗಳ ವೃದ್ಧಿಗೆ ಜೀವಾಮೃತ, ಬೀಜಾಮೃತ, ಪಂಚಗವ್ಯ, ಗೋಕೃಪಾಮೃತ ಬಳಕೆ ಶುರುವಾಯಿತು. ಕೀಟಬಾಧೆ ತಡೆ ಮತ್ತು ರೋಗಗಳ ನಿಯಂತ್ರಣಕ್ಕೆ ನೀಮಾಸ್ತ್ರ, ಅಗ್ನಿಅಸ್ತ್ರಗಳೆಂಬ ಪರಂಪರಾಗತ ಸಸ್ಯಜನ್ಯ ಔಷಧ ತಯಾರಿಸುವುದನ್ನು ಕಲಿತು ಬೆಳೆಗಳಿಗೆ ಪ್ರಯೋಗಿಸಿ ಯಶಸ್ವಿಯಾಗಿ ಬೆಳೆಯನ್ನೂ ತೆಗೆದರು.

ವೆಂಕಟೇಶ್ ಬೆಳೆಯುವ ಭತ್ತ, ರಾಗಿ, ತರಕಾರಿ, ಸೊಪ್ಪು, ಹಣ್ಣುಗಳು ರಾಸಾಯನಿಕ ಮುಕ್ತ ಎಂದು ಸ್ವಯಂ ಸೇವಾ ಸಂಸ್ಥೆ ಪ್ರಮಾಣ ಪತ್ರ ನೀಡಿದೆ. ಇದರಿಂದ ಇವರ ಕೃಷಿ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಗ್ರಾಹಕರಿಗೆ ನಂಬಿಕೆ ಹೆಚ್ಚಾಗಿ ಬೇಡಿಕೆಯೂ ಹೆಚ್ಚಾಗಿದೆ.

ಎರಡು ವರ್ಷ ಜತೆಗಿದ್ದು ಮಾರ್ಗದರ್ಶನ ನೀಡಿದ ಸಂಗೀತಾ ಮತ್ತು ಜೆ. ಫ್ರಾಂಕ್ಲಿನ್ ಅವರ ಸಲಹೆಯಂತೆ ವೆಂಕಟೇಶ್ ತಮ್ಮದೇ ಕಂಪನಿಯನ್ನು 'ಕರ್ನಾಟಕ ಇನ್ನೋವೇಶನ್ ಆ್ಯಂಡ್ ಟೆಕ್ನಾಲಜಿ ಸೊಸೈಟಿ'ಯಲ್ಲಿ ನೋಂದಣಿ ಮಾಡಿಸಿದ್ದಾರೆ.

10ನೇ ಪುಟಕ್ಕೆ...

> **ಚರ್ಚೆಯ ಹಂತದಲ್ಲಿರುವ ಕೃಷಿ ಪ್ರವಾಸೋದ್ಯಮ ಯೋಜನೆಯನ್ನು ಸರ್ಕಾರ ಜಾರಿಗೆ ತಂದರೆ ಕೃಷಿ ಕ್ಷೇತ್ರ ಮತ್ತಷ್ಟು ಪ್ರಗತಿ ಕಾಣಲಿದೆ**
> **ಶಿಲ್ಪಾ**, ಕೃಷಿ ಅಧಿಕಾರಿ ಶ್ರೀರಂಗಪಟ್ಟಣ



ವೆಂಕಟೇಶ್ ಜಮೀನಿಗೆ ಭೇಟಿ ನೀಡಿದ ಕೃಷಿ ಆಸಕ್ತರು

ಬದುಕು ರೂಪಿಸುವ ಟ್ರೆಂಡಿ ಕ್ಯಾಂಡಲ್‌ಗಳು

• ಆರ್.ಬಿ.ಗುರುಬಸವರಾಜ

ಕ್ಯಾಂಡಲ್ ಎಂದ ಕೂಡಲೇ ನೆನಪಾಗುವುದು ರಾತ್ರಿ ವಿದ್ಯುತ್ ಸರಬರಾಜು ನಿಂತಾಗ ಕತ್ತಲೆ ಓಡಿಸಲು ಬಳಸುವ ಸಾಧನ ಎಂದು. ಆದರೆ ಇಂದು ಕ್ಯಾಂಡಲ್ ಕೇವಲ ಬೆಳಕು ನೀಡುವ ಸಾಧನವಾಗಿ ಉಳಿದಿಲ್ಲ. ಒಳಾಂಗಣ ವಿನ್ಯಾಸದ ಆಕರ್ಷಣೆಯ ಭಾಗವಾಗಿ ಬಳಕೆಯಾಗುತ್ತಿದೆ. ರಾತ್ರಿ ಝುಗಮಗಿಸುವ ವಿದ್ಯುತ್ ದೀಪಗಳ ಬದಲಾಗಿ ಮನಸ್ಸಿಗೆ ಮುದ ನೀಡುವ, ಕಣ್ಣಿಗೆ ತಂಪು ನೀಡುವ ಆಕರ್ಷಕ ಬೆಳಕಿನ ರೂಪವಾಗಿ ಬಳಕೆಯಾಗುತ್ತಿದೆ. ಇತ್ತೀಚಿಗೆ ದೊಡ್ಡ ನಗರಗಳಿಂದ ಹಿಡಿದು ಸಣ್ಣ ಸಣ್ಣ ನಗರಗಳಲ್ಲೂ 'ಕ್ಯಾಂಡಲ್ ಡಿನ್ನರ್ ಪಾರ್ಟಿ'ಗಳು ನಡೆಯುತ್ತಿವೆ. ಅಲ್ಲದೇ 'ಸ್ಪಾ'ಗಳಲ್ಲಿ, ಮಾಲ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ಮನೆಯ ಒಳಾಂಗಣ ಅಲಂಕಾರದಲ್ಲಿ ವೈವಿಧ್ಯಮಯ ಬಣ್ಣ ಮತ್ತು ವಿನ್ಯಾಸದ ಕ್ಯಾಂಡಲ್‌ಗಳು ಬಳಕೆಯಾಗುತ್ತಿವೆ. ಹಾಗಾಗಿ ಟ್ರೆಂಡಿ ಕ್ಯಾಂಡಲ್‌ಗಳ ತಯಾರಿಕೆ ಉದ್ಯಮವಾಗಿ ಬೆಳೆದು ನಿಂತಿದೆ. ಇಂತಹ ವೈವಿಧ್ಯಮಯ ಕ್ಯಾಂಡಲ್‌ಗಳನ್ನು ತಯಾರಿಸಿ, ನಾಡಿನಾದ್ಯಂತ ಮಾತ್ರವಲ್ಲದೇ ಜಗತ್ತಿನ ಬೇರೆ ಬೇರೆ ದೇಶಗಳಿಗೂ ರಫ್ತು ಮಾಡುವ ಮೂಲಕ ತಮ್ಮ ಕನಸಿಗೆ ಆಧುನಿಕತೆಯ ರೂಪ ನೀಡಿದವರು ಮೈಸೂರಿನ ನವ್ಯೋದ್ಯಮಿ ಶ್ರೀವಿದ್ಯಾ ಕಾಮತ್.


ಟ್ರೆಂಡಿ ಕ್ಯಾಂಡಲ್‌ಗಳನ್ನು ಮನೆ-ಮನಗಳಿಗೆ ತಲುಪಿಸಿದ ಶ್ರೀವಿದ್ಯಾ ಈ ಉದ್ಯಮದಿಂದ ಹೊಸ ಬದುಕನ್ನು ಕಟ್ಟಿಕೊಂಡಿದ್ದಾರೆ. ಇವರು ತಯಾರಿಸುವ ಕ್ಯಾಂಡಲ್‌ಗಳು ಮನಮೋಹಕ ಆಕಾರ ಮತ್ತು ಬಣ್ಣ ಹೊಂದಿವೆ. ನೋಡುಗರನ್ನು ಆಕರ್ಷಿಸುತ್ತವೆ. ಜೊತೆಗೆ ಕ್ಯಾಂಡಲ್ ಉರಿದಾಗ ಪರಿಮಳ ಹೊರಸೂಸುತ್ತದೆ.



ಇದನ್ನು ಕ್ಯಾಂಡಲ್ ರಂಗೋಲಿ ಎನ್ನಬಹುದೇ?

ಅನಿರೀಕ್ಷಿತ ಘಟನೆ ಉದ್ಯಮಕ್ಕೆ ನಾಂದಿ

ಶ್ರೀವಿದ್ಯಾ, ವಿವಿಧ ಕಂಪನಿಗಳಿಗೆ ಹಾಗೂ ಕಚೇರಿಗಳಿಗೆ ಉದ್ಯೋಗಿಗಳನ್ನು ಒದಗಿಸುವ ಹಾಗೂ ಅವರಿಗೆ ತರಬೇತಿ ನೀಡುವ ಅಂದರೆ ಮಾನವ ಸಂಪನ್ಮೂಲ ಒದಗಿಸುವ ಕೆಲಸ ಮಾಡುತ್ತಾರೆ. ತರಬೇತಿ ನೀಡುವಾಗ ಉದ್ಯೋಗಿಗಳಿಗೆ ಏನಾದರೊಂದು ವಿಶೇಷ ಉಡುಗೊರೆ ನೀಡುವುದು ಅವರ ಹವ್ಯಾಸ. ಹೀಗೆ ಕೆಲವು ವರ್ಷಗಳ ಹಿಂದೆ ತರಬೇತಿ ಆಯೋಜಿಸಿದಾಗ ಅವರಿಗೆ ದೀಪಗಳನ್ನು ಉಡುಗೊರೆ ನೀಡಲು ಬಯಸಿದರು. ಅದಕ್ಕಾಗಿ ಮಾರುಕಟ್ಟೆಗಳಲ್ಲಿ ದೊರೆಯುವ ದೀಪಗಳ ಬದಲಾಗಿ ತಾವೇ ಮೇಣದದೀಪಗಳನ್ನು ತಯಾರಿಸಿ ನೀಡಿದರು. ಮೇಣದದೀಪಗಳನ್ನು ಪಡೆದವರಿಗೆ ಅದು ಆಕರ್ಷಕವಾಗಿ ಕಂಡಿತು. ಅವುಗಳನ್ನು ನೋಡಿದ ಅಕ್ಕಪಕ್ಕದವರು ತಮಗೂ ಬೇಕು ಎಂದು ಬೇಡಿಕೆ ಇಟ್ಟರು. ಬೇಡಿಕೆ ಹೆಚ್ಚಾಗುತ್ತಿದ್ದಂತೆ ಉತ್ಪಾದನೆಯೂ ಜಾಸ್ತಿ ಆಯಿತು. ಕೇವಲ ಮೂರು ವಾರಗಳಲ್ಲಿ ಸುಮಾರು 2,500 ರಿಂದ 3,000 ಕ್ಯಾಂಡಲ್‌ಗಳನ್ನು ತಯಾರಿಸಿ ಮಾರಾಟ ಮಾಡಿದರು. ಹೀಗೆ ಅನಿರೀಕ್ಷಿತವಾಗಿ ತಯಾರಿಸಿದ ದೀಪಗಳೇ ಮುಂದಿನ ಉದ್ಯಮಕ್ಕೆ ನಾಂದಿಯಾದವು.



ಶ್ರೀವಿದ್ಯಾ ಚಿಕ್ಕವರಿದ್ದಾಗ ಭರತನಾಟ್ಯ ಹಾಗೂ ನೃತ್ಯ ಪ್ರದರ್ಶನ ನೀಡುವಾಗಿನ ವಿಶೇಷ ಆಕರ್ಷಣೆಗಾಗಿ ತಾಯಿ ಮೇಣದದೀಪಗಳನ್ನು ಮಾಡಿಕೊಡುತ್ತಿದ್ದರು. ಅದರಿಂದ ಪ್ರೇರಿತರಾದ ಇವರು, ಮೇಣದದೀಪಗಳನ್ನು ತಯಾರಿಸಲು ಮುಂದಾದರು. ಬಯೋಟೆಕ್ನಾಲಜಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರಿಗೆ, ಸುಗಂಧ ಮತ್ತು ಪರಿಮಳಗಳ ಬಗ್ಗೆ ತಿಳಿವಳಿಕೆ ಇದೆ. ಹೀಗಾಗಿ ಬೇರೆ ಬೇರೆ ಸುಗಂಧಭರಿತ ಕ್ಯಾಂಡಲ್‌ಗಳನ್ನು ತಯಾರಿಸಿದರು.

ವೈವಿಧ್ಯಮಯ ವಿನ್ಯಾಸ

ಶ್ರೀವಿದ್ಯಾ ಸುಮಾರು 5000ಕ್ಕೂ ಹೆಚ್ಚು ವಿನ್ಯಾಸದ ಕ್ಯಾಂಡಲ್‌ಗಳನ್ನು ತಯಾರಿಸಿದ್ದಾರೆ. ಚೌಕ, ಆಯತ, ವೃತ್ತ, ತ್ರಿಭುಜ, ಪಂಚಭುಜ, ಷಡ್ಭುಜ, ಅಷ್ಟಭುಜ–ಹೀಗೆ ವಿವಿಧ ರೇಖಾಕೋನೀಯ ವಿನ್ಯಾಸದ ಜೊತೆಗೆ ಗೊಂಬೆಯಾಕಾರ, ಮಾನವಾಕೃತಿ, ವಿವಿಧ ಪ್ರಾಣಿಗಳ ಆಕೃತಿಗಳ ಕ್ಯಾಂಡಲ್‌ಗಳನ್ನು ತಯಾರಿಸಿದ್ದಾರೆ. ಜೊತೆಗೆ ಕೆಲವು ಕ್ಯಾಂಡಲ್ ಗ್ಲಾಸ್‌ಗಳಲ್ಲಿ ಪುನೀತ್ ರಾಜ್‌ಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಹೀಗೆ ಪ್ರಸಿದ್ಧ ವ್ಯಕ್ತಿಗಳ ಫೋಟೊ ಹಾಕಿದ್ದು, ಕ್ಯಾಂಡಲ್ ಉರಿಯುತ್ತಿದ್ದಂತೆ ಗ್ಲಾಸ್‌ನಲ್ಲಿ ಅವರ ಭಾವಚಿತ್ರ ಎದ್ದು ಕಾಣುತ್ತದೆ. ಇದಂತೂ ತುಂಬಾ ಜನರಿಗೆ ಇಷ್ಟವಾಗಿದೆ. ಇವರು ತಯಾರಿಸಿದ ಕ್ಯಾಂಡಲ್‌ಗಳನ್ನು ನೋಡುತ್ತಿದ್ದರೆ ಎಲ್ಲಾ ಆಕಾರದ, ಎಲ್ಲಾ ವಿನ್ಯಾಸದ ಕ್ಯಾಂಡಲ್‌ಗಳನ್ನೂ ಕೊಳ್ಳಬೇಕೆಂಬ ಬಯಕೆ ಮೂಡುತ್ತದೆ. ಜೊತೆಗೆ ಅತ್ಯಾಕರ್ಷಕ ನೈಸರ್ಗಿಕ ಬಣ್ಣಗಳ ಕ್ಯಾಂಡಲ್‌ಗಳು ನೋಡುಗರಿಗೆ ಹಿತ ನೀಡುತ್ತವೆ.


ಇವರು ತಯಾರಿಸಿದ ಕ್ಯಾಂಡಲ್‌ಗಳು ಸಾಮಾನ್ಯ ಕ್ಯಾಂಡಲ್‌ಗಳಿಗಿಂತ ಭಿನ್ನವಾಗಿವೆ. ಅವು ವಿಶೇಷವಾದ ಪರಿಮಳ ಹೊಂದಿದ್ದು ಮನಸ್ಸಿಗೆ ಆಹ್ಲಾದ ನೀಡುತ್ತವೆ. ತಲೆನೋವು, ನಿದ್ರಾಹೀನತೆ, ಒತ್ತಡ ನಿವಾರಣೆ, ವಾತಾಯನ ಶುದ್ಧೀಕರಣ, ಸೊಳ್ಳೆ ನಿವಾರಣೆ ಹೀಗೆ ವಿವಿಧ ಉದ್ದೇಶಗಳಿಗಾಗಿ ಬಗೆ ಬಗೆಯ ಸುಗಂಧ ಹಾಗೂ ಪರಿಮಳಯುಕ್ತ ಕ್ಯಾಂಡಲ್‌ಗಳನ್ನು ತಯಾರಿಸಿದ್ದಾರೆ. ಪರಿಮಳಕ್ಕೆ ನೈಸರ್ಗಿಕ ಸುಗಂಧಗಳನ್ನು ಬಳಸುತ್ತಾರೆ. ಇದರಿಂದ ಅಡ್ಡ ಪರಿಣಾಮಗಳು ಇರುವುದಿಲ್ಲ.



ಕ್ಯಾಂಡಲ್ ಬುಟ್ಟಿಯಲ್ಲಿ ಮೂಡಿಬಂದ ಪುನೀತ್ ರಾಜ್‌ಕುಮಾರ್

ವಿದೇಶಗಳಿಗೂ ರವಾನೆ

ವಿದೇಶಗಳಲ್ಲಿ ಇವರ ಕ್ಯಾಂಡಲ್‌ಗಳು ಹೆಚ್ಚು ಟ್ರೆಂಡಿಯಾಗಿವೆ. ಥಾಯ್ಲೆಂಡ್, ಮಾರಿಷಸ್, ಬ್ಯಾಂಕಾಕ್, ಶ್ರೀಲಂಕಾ ಸೇರಿದಂತೆ ವಿವಿಧ ದೇಶಗಳಿಗೂ ಇವರು ತಯಾರಿಸಿದ ಕ್ಯಾಂಡಲ್ ರವಾನೆಯಾಗಿವೆ. ಶ್ರೀವಿದ್ಯಾ ಅವರು ತಾವು ತಯಾರಿಸಿದ ಕ್ಯಾಂಡಲ್‌ಗಳನ್ನು ಮಾರಲು ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಹೊಂದಿದ್ದಾರೆ. ನಿತ್ಯವೂ ಆನ್‌ಲೈನ್‌ನಲ್ಲಿ ಬರುವ ಬೇಡಿಕೆಯನ್ನು ಪೂರೈಸುತ್ತಾರೆ. ಅದಕ್ಕಾಗಿ ನಾಲ್ಕು ಜನ ಕೆಲಸಗಾರರಿದ್ದಾರೆ. ಅವರು ಬೇಡಿಕೆಗೆ ಅನುಗುಣವಾದ ಕ್ಯಾಂಡಲ್ ತಯಾರಿಸಿ ಕಳಿಸುತ್ತಾರೆ. ಇತ್ತೀಚಿಗೆ ನಗರ ಪ್ರದೇಶದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಂದ ಹೆಚ್ಚು ಬೇಡಿಕೆ ಬರುತ್ತಿದೆ ಎನ್ನುತ್ತಾರೆ ಶ್ರೀವಿದ್ಯಾ. ❖



ತರಬೇತಿ ಕೇಂದ್ರ

ಆಸಕ್ತ ಮಹಿಳೆಯರಿಗೆ ಕ್ಯಾಂಡಲ್ ತಯಾರಿಕೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ತರಬೇತಿ ನೀಡುತ್ತಿದ್ದಾರೆ. ಈಗಾಗಲೇ ಸುಮಾರು ನೂರಕ್ಕೂ ಹೆಚ್ಚು ಮಹಿಳೆಯರು ತರಬೇತಿ ಪಡೆದಿದ್ದಾರೆ. ಅದರಲ್ಲಿ ನಲವತ್ತಕ್ಕೂ ಹೆಚ್ಚು ಮಹಿಳೆಯರು ಕ್ಯಾಂಡಲ್ ಉದ್ಯಮದಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ತರಬೇತಿಯಲ್ಲಿ ಕ್ಯಾಂಡಲ್ ತಯಾರಿಕೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ಸರ್ಕಾರದಿಂದ ಮಹಿಳೆಯರಿಗೆ ಸಿಗುವ ಉದ್ಯಮ ಆಧಾರಿತ ಸಾಲಗಳ ಬಗ್ಗೆ ತಿಳಿಸಿಕೊಡುತ್ತಾರೆ. ಹಾಗಾಗಿ ಮನೆಯಲ್ಲೇ ಕುಳಿತು ಏನಾದರೊಂದು ಉದ್ಯೋಗ ಮಾಡಬೇಕು ಎನ್ನುವ ಮಹಿಳೆಯರಿಗೆ ಇದೊಂದು ಉತ್ತಮ ತರಬೇತಿಯಾಗಿದೆ.



ಕ್ಯಾಂಡಲ್ ಇಡಲು ಬಗೆಬಗೆಯ ಪಿಂಗಾಣಿ ಬಟ್ಟಲು



ರೇಡಿಯೊ ಟವರ್

ಸ್ವಾತಂತ್ರ್ಯಪೂರ್ವದ ರೇಡಿಯೊ ಟವರ್

• ನವೀನ್ ಕುಮಾರ್ ಜಿ.

ಉಡುಪಿಯ ಅಜ್ಜರಕಾಡಿನ ಭುಜಂಗ ಉದ್ಯಾನದ ಹಸಿರು ಪರಿಸರದ ನಡುವೆ ಉಬ್ಬಿದ ಬಂಡೆಯೊಂದರ ಮೇಲೆ ದಶಕಗಳಿಂದ ಮಳೆ, ಬಿಸಿಲು, ಗಾಳಿಗೆ ಜಗ್ಗದೆ ನಿಂತಿರುವ ಗೋಪುರದಾಕಾರದ ಕಟ್ಟಡವೊಂದಿದೆ. ಅದುವೇ 'ಭುಜಂಗ ನಿಲಯ' ರೇಡಿಯೊ ಟವರ್.

ಮಹಾತ್ಮ ಗಾಂಧಿ ಭೇಟಿ ನೀಡಿದ್ದ ಐತಿಹಾಸಿಕ ಮಹತ್ವವಿರುವ ಅಜ್ಜರಕಾಡಿನಲ್ಲಿ ಅಷ್ಟಪಟ್ಟಿ ಆಕಾರದ ಈ ಕಟ್ಟಡವು ತನ್ನ ವಾಸ್ತುಶೈಲಿಯಿಂದ ಮೊದಲ ನೋಟದಲ್ಲೇ ಸೆಳೆಯುತ್ತದೆ.

ಈಗ ಮೌನವಾಗಿ ನಿಂತಿರುವ ರೇಡಿಯೊ ಟವರ್ ಒಂದು ಕಾಲದಲ್ಲಿ ಉಡುಪಿಯ ಜನತೆಗೆ ಜಗದಗಲದ ವಿದ್ಯಮಾನಗಳನ್ನು ಉಣಬಡಿಸಿದೆ. ಸ್ವಾತಂತ್ರ್ಯಪೂರ್ವದ ಹಲವು ಅವಿಸ್ಮರಣೀಯ ಕ್ಷಣಗಳ ಮಾಹಿತಿಯನ್ನು ಶ್ರೋತೃಗಳ ಕಿವಿಗೆ ಮುಟ್ಟಿಸಿದ್ದ ಈ ಕಟ್ಟಡವು ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ವಿಶ್ರಾಂತಿಗೆ ಜಾರಿದ ಭಾವದಲ್ಲಿ ನೆಲೆ ನಿಂತಿದೆ.

ಮೂರು ಅಂತಸ್ತಿನ ಈ ಕಟ್ಟಡದ ಮೇಲೆ ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ರೇಡಿಯೊ ರಿಸೀವರ್ ಇಟ್ಟು ಧ್ವನಿವರ್ಧಕದ ಮೂಲಕ ರೇಡಿಯೊ ಕಾರ್ಯಕ್ರಮಗಳನ್ನು ಟವರ್ ಮೂಲಕ ಬಿತ್ತರಿಸಲಾಗುತ್ತಿತ್ತು. ಕಟ್ಟಡದ ಪ್ರತಿ ಕೋನಗಳಲ್ಲಿರುವ ಕಿಟಕಿಗಳೂ ಆಕರ್ಷಣೀಯವಾಗಿವೆ. ಕಟ್ಟಡದೊಳಗಿನ ಮೆಟ್ಟಿಲುಗಳ ಮೂಲಕ ಮೇಲಂತಸ್ತಿಗೆ ಹತ್ತಿ ಹೋಗಬಹುದಾಗಿದೆ. ಆದರೆ ಈಗ ಕಟ್ಟಡದ ಬಾಗಿಲಿಗೆ ಬೀಗ ಹಾಕಿರುವುದರಿಂದ ಪ್ರವಾಸಿಗರು ಹೊರಗಿನಿಂದಲೇ ಕಟ್ಟಡದ ಸೌಂದರ್ಯವನ್ನು ಕಣ್ತುಂಬಿಕೊಳ್ಳಬೇಕು.

1938ರಲ್ಲಿ ಸ್ಥಾಪಿಸಿದ್ದ ಈ ರೇಡಿಯೊ ಟವರ್ ಅನ್ನು ಅಂದಿನ ಮದ್ರಾಸ್ ಸರ್ಕಾರದ ಸಚಿವರಾಗಿದ್ದ ಪಿ.ಸುಬ್ಬರಾಯನ್ ಅವರು ಉದ್ಘಾಟಿಸಿರುವ ಉಲ್ಲೇಖ ಕಟ್ಟಡದಲ್ಲಿ ಅಳವಡಿಸಿರುವ ಫಲಕದಲ್ಲಿದೆ. ಡಾ.ಯು.ಎಲ್. ನಾರಾಯಣ ರಾವ್ ಎಂಬುವವರು ತಮ್ಮ ತಂದೆ ಭುಜಂಗ ರಾವ್ ಅವರ ನೆನಪಿಗಾಗಿ ಈ ಕಟ್ಟಡವನ್ನು ಕಟ್ಟಿಸಿದ್ದಾರೆ ಎಂಬ ಉಲ್ಲೇಖವೂ ಸಿಗುತ್ತದೆ.

1930ರ ಕಾಲಘಟ್ಟದಲ್ಲಿ ಯಾರ ಮನೆಗಳಲ್ಲೂ ರೇಡಿಯೊಗಳಿರಲಿಲ್ಲ. ರೇಡಿಯೊ ಖರೀದಿಸಬೇಕಾದರೂ ಪರವಾನಗಿ ಪಡೆಯಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಧ್ವನಿವರ್ಧಕದ ಮೂಲಕ ಈ ಕಟ್ಟಡದಿಂದ ರೇಡಿಯೊ ಕಾರ್ಯಕ್ರಮಗಳು ಭಿತ್ತರವಾಗುತ್ತಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ಇಲ್ಲಿನ ಹಿರಿಯರು.

ರೇಡಿಯೊ ಟವರ್‌ನಿಂದ ಕೇಳಿಬರುತ್ತಿದ್ದ ದೆಹಲಿ, ಬೆಂಗಳೂರಿನಿಂದ ಪ್ರಸಾರವಾಗುತ್ತಿದ್ದ ವಾರ್ತೆಗಳಿಗಾಗಿ ಸಂಜೆ ವೇಳೆಗೆ ಉಡುಪಿಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಟವರ್‌ನ ಸುತ್ತ ಸೇರುತ್ತಿದ್ದರು ಎಂದೂ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಹಿಂದೆ ಪುರಸಭೆ ಇದ್ದ ಕಾಲದಲ್ಲಿ ನೌಕರರೊಬ್ಬರು ಇದರಲ್ಲಿನ ರೇಡಿಯೊವನ್ನು ನಿರ್ವಹಣೆ ಮಾಡುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಟವರ್‌ನಿಂದ ಸೈರನ್ ಕೂಡ ಮೊಳಗುತ್ತಿತ್ತು. ಉಡುಪಿಯ ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಭುಜಂಗ ನಿಲಯ ರೇಡಿಯೊ ಟವರ್ ಇಂದು ಉಡುಪಿಯ ಹೆಗ್ಗುರುತುಗಳಲ್ಲಿ ಒಂದಾಗಿ ನೋಡುಗರನ್ನು ಸೆಳೆಯುತ್ತಿದೆ. ❖

'ಪ್ರವಾಸಿ ಕೈಪಿಡಿಯಲ್ಲೂ ಉಲ್ಲೇಖವಾಗಿತ್ತು'

ಅಜ್ಜರಕಾಡಿನ ಭುಜಂಗ ನಿಲಯ ರೇಡಿಯೊ ಟವರ್ ಬಗ್ಗೆ ಹಲವು ವರ್ಷಗಳ ಹಿಂದೆಯೇ ಉಡುಪಿ ಜಿಲ್ಲೆಯ ಪ್ರವಾಸಿ ತಾಣಗಳ ಕುರಿತು ಪ್ರಕಟವಾಗಿದ್ದ ಪ್ರವಾಸಿ ಕೈಪಿಡಿಯಲ್ಲೂ ಉಲ್ಲೇಖಿಸಲಾಗಿತ್ತು. ಅದರಲ್ಲಿ ಟವರ್‌ನ ಫೋಟೊ ಮತ್ತು ಮಾಹಿತಿ ಪ್ರಕಟವಾಗಿತ್ತು. ಆ ಮೂಲಕ ಪ್ರವಾಸಿಗರ ಚಿತ್ತವನ್ನೂ ಸೆಳೆದಿತ್ತು ಎನ್ನುತ್ತಾರೆ ಎಂಜಿಎಂ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಸಂಯೋಜಕ ವಿನೀತ್ ರಾವ್.

ರೇಡಿಯೊ ಟವರ್ 1990ರ ವರೆಗೂ ಕಾರ್ಯ ನಿರ್ವಹಿಸುತ್ತಿತ್ತು. ಮನೆ ಮನೆಗೆ ಟೆಲಿವಿಷನ್ ಬಂದ ಬಳಿಕ ಅದು ಸ್ತಬ್ಧವಾಯಿತು. ರೇಡಿಯೊ ಟವರ್ ನಿರ್ಮಾಣವಾಗುವುದಕ್ಕೂ ಕೆಲವು ವರ್ಷಗಳ ಮೊದಲು ಅಜ್ಜರಕಾಡಿಗೆ ಮಹಾತ್ಮ ಗಾಂಧಿ ಭೇಟಿ ನೀಡಿದ್ದರು. ರೇಡಿಯೊ ಟವರ್ ನೆಲೆ ನಿಂತಿರುವ ಬಂಡೆಗೂ ಮಹತ್ವವಿದೆ. ಪಂಜಾಬ್‌ನ ಅಮೃತಸರದಲ್ಲಿ ಜಲಿಯನ್ ವಾಲಾ ಭಾಗ್ ದುರಂತ ನಡೆದಾಗ ಅದನ್ನು ಖಂಡಿಸಿ ಇದೇ ಬಂಡೆಯ ಮೇಲೆ ಉಡುಪಿಯ ಸ್ವಾತಂತ್ರ್ಯಪ್ರೇಮಿಗಳು ಸಭೆ ಸೇರಿರುವುದಾಗಿ ಹಿರಿಯರು ಹೇಳುತ್ತಿದ್ದರು ಎಂದೂ ಅವರು ಸ್ಮರಿಸಿದರು.

ರೇಡಿಯೊ ಟವರ್‌ನಲ್ಲಿ ಆಗಿನ ಕಾಲದಲ್ಲಿ ಶಕ್ತಿಶಾಲಿ ರೆಡಿಯೊ ರಿಸೀವರ್ ಬಳಸಲಾಗಿತ್ತು. ದೆಹಲಿಯಿಂದ ಪ್ರಸಾರವಾಗುತ್ತಿದ್ದ ಇಂಗ್ಲಿಷ್ ವಾರ್ತೆಯನ್ನು ಹಾಗೂ ಬೆಂಗಳೂರಿನಿಂದ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಯನ್ನೂ ಇಲ್ಲಿ ಕೇಳಬಹುದಾಗಿತ್ತು . ಸಂಗೀತ ಕಾರ್ಯಕ್ರಮಗಳನ್ನೂ ಜನರು ಆಸ್ವಾದಿಸುತ್ತಿದ್ದರು. 1947 ಆಗಸ್ಟ್ 14ರಂದು ಮಧ್ಯರಾತ್ರಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಸಂದರ್ಭದಲ್ಲಿ ಟವರ್‌ನಲ್ಲಿ ಸೈರನ್ ಮೊಳಗಿತ್ತು ಎಂದೂ ಅವರು ರೇಡಿಯೊ ಟವರ್‌ನ ಮಹತ್ವವನ್ನು ವಿವರಿಸಿದರು.

ಮುನ್ನೋಟ 02-11-2025 ರಿಂದ 08-11-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಾರದ ಆರಂಭದಲ್ಲಿ ಬಹಳ ಉತ್ಸಾಹವಿರುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಸ್ಥೈರ್ಯ ಬರುತ್ತದೆ. ಸರ್ಕಾರದಿಂದ ಸಹಕಾರ ಈಗ ದೊರೆಯುತ್ತದೆ. ಆದಾಯವು ಕಡಿಮೆ ಇದ್ದರೂ ಬದಲಿ ಆದಾಯಗಳನ್ನು ಹುಡುಕಬಹುದು. ಬಂಧುಗಳ ಜೊತೆ ವ್ಯಾಪಾರ ವ್ಯವಹಾರ ಖಂಡಿತ ಬೇಡ. ಕೆಲವು ಉಪಾಧ್ಯಾಯರುಗಳಿಗೆ ಉತ್ತಮ ಬೇಡಿಕೆ ಬರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಈ ವಾರ ಒಂದು ರೀತಿ ಸುಖ ಜೀವನವನ್ನು ಕಾಣಬಹುದು. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ದೇಶ ವಿದೇಶದಲ್ಲಿ ಧರ್ಮ ಪ್ರಚಾರ ಮಾಡುವವರಿಗೆ ಮಾನ್ಯತೆ ಮತ್ತು ಗೌರವ ದೊರೆಯುತ್ತದೆ. ತಾಯಿಯ ಹಿತನುಡಿಗಳು ನಿಮಗೆ ಒಳಿತನ್ನು ಮಾಡುತ್ತವೆ. ವಿನಾ ಕಾರಣವಾದ ವಿವಾದಗಳನ್ನು ಎಳೆದುಕೊಳ್ಳುವುದು ಬೇಡ. ವ್ಯವಹಾರದಲ್ಲಿ ಸಾಮಾನ್ಯ ಅಭಿವೃದ್ಧಿಯನ್ನು ಖಂಡಿತ ಕಾಣಬಹುದು. ಮನೆ ಬಳಕೆಯ ಹೊಸ ವಸ್ತುಗಳನ್ನು ಖರೀದಿ ಮಾಡುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮುನ್ನುಗ್ಗುವ ಹುಮ್ಮಸ್ಸು ಸ್ವಲ್ಪ ಕಡಿಮೆಯಾದಂತೆ ಅನಿಸುತ್ತದೆ. ಆದಾಯವು ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಬರುತ್ತದೆ. ವೈಯಕ್ತಿಕ ವ್ಯವಹಾರಗಳ ಹೋರಾಟದಲ್ಲಿ ಪ್ರಗತಿಯನ್ನು ಈಗ ಕಾಣುವಿರಿ. ಮನೆಯವರ ಆರೋಗ್ಯದ ಬಗ್ಗೆ ಎಚ್ಚರವಹಿಸಿರಿ. ವಿದ್ಯಾರ್ಥಿಗಳು ಏಕಾಗ್ರತೆಯನ್ನು ರೂಢಿಸಿಕೊಳ್ಳುವುದು ಒಳ್ಳೆಯದು. ಕೆಲವರಿಗೆ ಅಧ್ಯಯನದ ನಿಮಿತ್ತವಾಗಿ ದೂರ ಪ್ರಯಾಣ ಮಾಡಬೇಕಾದ ಸಂದರ್ಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಮಾಜದಿಂದ ಸಾಕಷ್ಟು ಗೌರವ ದೊರೆಯುತ್ತದೆ. ಆದಾಯವು ಕಡಿಮೆ ಇದ್ದರೂ ಏನು ತೊಂದರೆ ಇರುವುದಿಲ್ಲ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಮುನ್ನಡೆಯನ್ನು ಕಾಣಬಹುದು. ಇತರರ ಅಭಿವೃದ್ಧಿಯ ಬಗ್ಗೆ ಚಿಂತೆ ಮಾಡದೆ ನಿಮ್ಮ ಅಭಿವೃದ್ಧಿಯ ಬಗ್ಗೆ ಗಮನಹರಿಸಿರಿ. ಕ್ರೀಡಾಪಟುಗಳಿಗೆ ಸಾಮರ್ಥ್ಯ ಪ್ರದರ್ಶಿಸಲು ಉತ್ತಮ ಅವಕಾಶ ದೊರೆಯಬಹುದು. ವಿವಾದಿತ ವಿಷಯವನ್ನು ಮಾತುಕತೆಯ ಮೂಲಕ ಬಗೆ ಹರಿಸಿಕೊಳ್ಳಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆರಂಭ ಮಂಕು ಕವಿದಂತೆ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಹಿರಿಯರ ಸಹಕಾರ ನಿಮಗೆ ದೊರೆಯುತ್ತದೆ. ಉದ್ಯೋಗದಲ್ಲಿ ಈಗ ಸ್ಥಾನ ಬದಲಾವಣೆಯ ಸಾಧ್ಯತೆಗಳಿವೆ. ನಿಮ್ಮ ಸಮಾಜದ ಪ್ರಮುಖರೊಂದಿಗೆ ಬಾಂಧವ್ಯ ವೃದ್ಧಿ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ವಾಹನ ಚಾಲನೆ ಮಾಡುವಾಗ ಸ್ವಲ್ಪ ಎಚ್ಚರವಾಗಿರಿ. ಪಾಲುಗಾರಿಕೆ ವ್ಯವಹಾರದಲ್ಲಿ ಹೊಸ ತಿರುವು ಬಂದು ನಿಮಗೆ ಹೆಚ್ಚಿನ ಅಧಿಕಾರ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಎಲ್ಲವನ್ನು ತಿಳಿದವರಂತೆ ವರ್ತಿಸುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಆದರೆ ಆಡಂಬರಕ್ಕೆ ಕೊರತೆ ಇರುವುದಿಲ್ಲ. ಚುಚ್ಚು ಮಾತುಗಳಿಂದ ಜನಬೆಂಬಲ ಕಳೆದುಕೊಳ್ಳುವಿರಿ. ಧೃಡ ಸಂಕಲ್ಪದಿಂದ ಮಾಡಿದ ಕೆಲಸಗಳು ಅಪೂರ್ಣಗೊಳ್ಳುವವು. ಬಂಧುಗಳ ನಡುವೆ ವಿರೋಧವನ್ನು ಕಟ್ಟಿಕೊಳ್ಳುವಿರಿ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಮೇಧಾವಿಯಂತೆ ವರ್ತಿಸಲು ಹೋಗಿ ಸಿಕ್ಕಿಬೀಳುವಿರಿ, ಎಚ್ಚರ. ಆದಾಯವು ಬಂದರೂ ಅದಕ್ಕಿಂತ ಹೆಚ್ಚು ಖರ್ಚಿರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ಈಗ ವಿದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಉತ್ತಮ ಸಾಧನೆಯನ್ನು ಮಾಡಬಹುದು. ರಾಜಕಾರಣಕ್ಕೆ ಸೇರಬೇಕೆನ್ನುವವರು ತಮ್ಮ ಸ್ಥಾನಮಾನಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವುದು ಉತ್ತಮ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಈ ವಾರ ಸಾಕಷ್ಟು ದ್ವಂದ್ವ ನಿಮ್ಮಲ್ಲಿ ಇರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ಸಿಗದಿದ್ದರೂ ಸಹ ಹಿತೈಷಿಗಳ ಸಹಕಾರ ಸಿಗುತ್ತದೆ. ವಿದೇಶದಲ್ಲಿರುವವರು ಮಾತೃಭೂಮಿಯಲ್ಲಿ ಆಸ್ತಿಯನ್ನು ಕೊಳ್ಳಬಹುದು. ವಿದ್ಯುತ್ ಉಪಕರಣಗಳನ್ನು ಮಾರಾಟ ಮಾಡುವ ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಬಗೆಹರಿಯಬೇಕಿದ್ದ ವ್ಯಾಜ್ಯಗಳು ಈಗ ನಿಮ್ಮತ್ತ ಆಗುವ ಸೂಚನೆಗಳು ಕಂಡುಬರುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಈ ವಾರದಲ್ಲಿ ಕೆಲವೊಂದು ಅನಿರೀಕ್ಷಿತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಬಹುದು. ಆದಾಯವು ಕಡಿಮೆ ಇರುತ್ತದೆ. ಹೊಸವಾಹನ ಖರೀದಿಯನ್ನು ಮುಂದೂಡುವುದು ಒಳ್ಳೆಯದು. ದಿನಸಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಿ ಸಹಕಾರ ನೀಡುವ ನಿಮ್ಮ ಮನೋಭಾವಕ್ಕೆ ಗೌರವ ದೊರೆಯುತ್ತದೆ. ನ್ಯಾಯವಾದಿಗಳಿಗೆ ವಾದಗಳಲ್ಲಿ ಜಯ ದೊರೆತು ಗೌರವ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಯಾವುದೇ ಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ನಿಮ್ಮಲ್ಲಿ ಇರುತ್ತದೆ. ಆದಾಯವು ಸ್ವಲ್ಪ ಮಟ್ಟಿಗೆ ಚೇತರಿಕೆಯನ್ನು ಕಾಣುತ್ತದೆ. ನಿಮ್ಮ ಶತ್ರುಗಳು ನಿಮ್ಮನ್ನು ಕಂಡು ಭಯಪಡುವರು. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಸ್ವಲ್ಪ ಮುನ್ನಡೆಯನ್ನು ಕಾಣಬಹುದು. ಸ್ವಯಂ ಉದ್ಯೋಗ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಊಟ ತಿಂಡಿಗಳನ್ನು ಅಲ್ಪಪ್ರಮಾಣದಲ್ಲಿ ತಯಾರಿಸಿ ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವಿದೇಶದಲ್ಲಿರುವವರಿಗೆ ಸ್ವದೇಶಾಭಿಮಾನ ಹೆಚ್ಚುತ್ತದೆ. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ಹಿರಿಯರಿಗೆ ಕೆಲವು ಸಂಸ್ಥೆಗಳ ನಾಯಕತ್ವವನ್ನು ವಹಿಸುವ ಅವಕಾಶ ದೊರೆಯುತ್ತದೆ. ಶೃಂಗಾರ ಸಾಧನಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರ ಹೆಚ್ಚಾಗುತ್ತದೆ. ಸ್ಥಿರಾಸ್ತಿ ಖರೀದಿ ಮಾಡುವ ಆಲೋಚನೆ ಸದ್ಯಕ್ಕೆ ಬೇಡ. ಯುವಕರ ಅತಿಯಾದ ಆತ್ಮವಿಶ್ವಾಸವು ಅವರನ್ನು ನಗೆಪಾಟಲಿಗೆ ದೂಡುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಾರದ ಆರಂಭದಲ್ಲಿ ಕೆಲಸದ ಒತ್ತಡ ಹೆಚ್ಚಾಗುತ್ತವೆ. ವ್ಯವಹಾರದಲ್ಲಿ ಸ್ವಲ್ಪ ಚೇತರಿಕೆಯಾಗಿ ಆದಾಯ ಬರುತ್ತದೆ. ನಿಮ್ಮ ಕೊಂಕು ಮಾತುಗಳಿಂದ ಬಂಧುಗಳನ್ನು ಕಳೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಷಯದ ಆಯ್ಕೆಯ ಬಗ್ಗೆ ಗೊಂದಲಗಳು ಉಂಟಾಗುತ್ತವೆ.


ಪದಬಂಧ 2916

ಮೇಲಿನಿಂದ ಕೆಳಕ್ಕೆ

1. ರಸರಹಿತ ರಾಜನನ್ನು ದೀರ್ಘವಾಗಿ ಕರೆಯಿರಿ 3
2. ವರ ಅಳಿಯುವಂತಹ ರಾಗವೇ ಇದು? 3
3. ಯಾರನ್ನಾದರೂ ಬಹಳವಾಗಿ ಇಷ್ಟಪಡು 3
4. ಒತ್ತರಿಸಿಕೊಂಡು ಬರುವ ಅಲ್ಪಖಾರದ ರಾಜ್ಯಾಡಳಿತ ವ್ಯವಸ್ಥೆ 3
7. ಅಮೃತತ್ವದ ಭೂಮಿ 3
9. ದೊಡ್ಡದಾದ ಸುತ್ತಿನ ವ್ಯವಸ್ಥೆ 5
10. ಅಯೋಧ್ಯೆಯ ಸುತ್ತಮುತ್ತಲ ಪ್ರಾಚೀನ ಕಾಲಾತೀತ ಭಾಷೆ 3
11. ನೋವು ಸಂಕಟಗಳಿಂದ ಬಿಡುವ ತಾಪದ ಪ್ರಾಣವಾಯು 5
13. ದೇವರ ಒಡೆಯ ಸುರೇಶನಾದರೆ ಈತ ಮಾನವರ ಒಡೆಯ 3
17. ಮಳೆ ನೀಡಿ ಭೂಮಿಯ ಋಣ ತೀರಿಸುವ ದೇವ 3
18. ಕವನಗಳಲ್ಲಿ ಮೂಡುವ ವಿರಳ ಚಂದ್ರ 3
19. ಕೀಟಳೆ ಮಾಡುವ ತುಂಟ ಹುಡುಗಿ 3
20. ನಮ್ಮದು ಎಂಬ ಹಿಂದಿ ಬಳಕೆ 3
21. ದುಷ್ಕಾರ್ಯಕ್ಕೆ ದಾದಾಗಳು ತೆಗೆದುಕೊಳ್ಳುವ ತಾಂಬೂಲ 3

ಎಡದಿಂದ ಬಲಕ್ಕೆ

1. ಇದು ಆಗದು, ಆಗುವುದಕ್ಕೆ ಸಾಧ್ಯವೇ ಇಲ್ಲ 4
3. ಅತಿಯಾಗಿ ಇಷ್ಟಪಡುವ ಸರೋವರದಂತಹ ಅಂತರ್ಯ 5
5. ಆಲಾಪನೆಯ ಮದನ ಪ್ರೇಯಸಿ 4
6. ಮುಂದೆ ಹೋಗಿ ಮಾಡುವ ಬೇಸಾಯ 4
8. ಹೂವಿನಂತಹ ಚೆಲುವಿನಿಂದ ಮನಸ್ಸನ್ನು ಅಪಹರಿಸುವಂತದ್ದು 5
10. ಅರಬ್ಬಿ ದೇಶದ ರಾಜಧಾನಿಯಲ್ಲಿ ಬುಧ ಪ್ರವೇಶ 4
12. ದೇವರನ್ನು ಕೂಡಿಸುವ ಜಡತ್ವದ ಪೀಠ 4
14. ಐಶ್ವರ್ಯದಿಂದ ಕೂಡಿದ ನಮ್ಮ ನಾಡನುಡಿ 5
15. ಬಿಲ್ಲಿನಂತೆ ಬಗ್ಗಿಸಬಹುದಾದ ಸೋಂಕಿನ ವಾತ ರೋಗ 4
16. ಕುಶ ಸೋದರನಿಂದ ಕಿಂಚಿತ್ತಾದರೂ ಸಿಗುವ ಎಳ್ಳು 4
18. ಅನಾಹುತವನ್ನುಂಟುಮಾಡುವ ಬಿರುಗಾಳಿ 5
20. ವಿತ್ತದ ಎರಡು ಮುಖ 4
22. ದಶರಥನ ಪೂರ್ವಜ ಕುಲದಲ್ಲಿ ಹುಟ್ಟಿದವನ ಹೆಸರು ಭಜನೆಯಲ್ಲಿ ಹೀಗೆ 4
23. ಯುದ್ಧ ಘೋಷಣೆಯ ತುತ್ತೂರಿ ಮೊಳಗು 5
24. ಕಾಪಾಡುವ ಕೈಯವಳು 4



ಪದಬಂಧ ಉತ್ತರ -2915

ಮೇಲಿಂದ ಕೆಳಕ್ಕೆ

1. ಬಡವ 2.ಲಕುಮಿ 3.ಸಾವಿತ್ರಿ 4.ಸುಪರ್ಣ 7.ತ್ರಯಂಬಕ 9.ಗಾವಿಲ 11.ವರದಾ 12.ಆಕೃತಿ 13.ರಥಾಅ 15.ಜೋಳಿಗೆ 16.ಜಯಭೇರಿ 17.ರಜತ 19.ಗಂಧರ್ವ 20.ಸರಿತಾ 21.ತಬರ 22.ಪಲುಕು 23. ಲಲಿತ

ಎಡದಿಂದ ಬಲಕ್ಕೆ

1. ಬರಗಾಲ 3.ಸಾರಿಸು 5.ಕುಲದೇವಿ 6.ಪವಿತ್ರ 8.ವನಗಾಮಿ 10.ತ್ರಿವರ್ಣ 12.ಆಲದಮರ 14.ದಾರಿಹೋಕ 16.ಜತಿಸ್ವರ 18.ಆಕಾಶಗಂಗೆ 20.ಸತತ 22.ಪರ್ವಕಾಲ 24.ರಿಪೇರಿ 25.ಬರಿಗಾಲು 26.ತಾಮರ 27.ಕುತಕುತ

ಪಾತ್ರವೇ ಕಲಾಕೃತಿಯೊಳಗೋ ಕಲಾಕೃತಿಯೇ ಪಾತ್ರದೊಳಗೋ

ರಂಗಭೂಮಿಯಲ್ಲಿ ಸಶಕ್ತ ಕಸಬುದಾರ ಎನಿಸಿಕೊಂಡಿರುವ ರಂಗಕರ್ಮಿ ಪ್ರಸನ್ನ ಅವರು ರೇಖೆಗಳ ಮೂಲಕ ಹೊಸತನದ ಅಭಿವ್ಯಕ್ತಿಯನ್ನು ಅನ್ವೇಷಿಸಿ ನೋಡುಗರ ಮುಂದಿಟ್ಟಿದ್ದಾರೆ. ಅದುವೇ 'ನಾಟಕವು ಬದುಕಿನೊಳಗೋ ಬದುಕು ನಾಟಕದೊಳಗೋ' ಕಲಾಕೃತಿಗಳ ಪ್ರದರ್ಶನ.



• ರೂಪಾ ಕೆ.ಎಂ.

ಮನುಷ್ಯನ ವಿಕಾರಕ್ಕೆ ಹಲವು ಮುಖವಾಡಗಳು. ಮನುಷ್ಯನಾಳದಲ್ಲಿ ಅಡಗಿರುವ ಕ್ರೌರ್ಯ, ವಾಂಛೆ, ಅಧಿಕಾರದ ಹಪಾಹಪಿತನ, ಸಣ್ಣತನಗಳನ್ನು ಕಪ್ಪು ಬಿಳುಪಿನ ಚೌಕಟ್ಟಿನಲ್ಲಿಯೇ ಬಹಳ ಸಶಕ್ತವಾಗಿ ತೆರೆದಿಡುತ್ತವೆ ರಂಗಕರ್ಮಿ ಪ್ರಸನ್ನ ಅವರ ಕಲಾಕೃತಿಗಳು.

ಈ ಕಲಾಕೃತಿಗಳಲ್ಲಿ ಮೂರ್ತ ನೆಲೆಯಲ್ಲಿ ರಚಿತಗೊಂಡ ಪಾತ್ರಗಳ ಮುಖಮುದ್ರೆ ಅದೆಷ್ಟು ಪರಿಣಾಮಕಾರಿಯಾಗಿದೆಯೆಂದರೆ ಪಾತ್ರ ನಿಂತ ಭಂಗಿಯೇ ಭಾವವನ್ನೂ ಉಸುರುತ್ತದೆ.

ಮಹಾತ್ಮಗಾಂಧಿ ಈ ನೆಲದ ಬೆರಗು. ಆ ಬೆರಗಿನೆಡೆಗೆ ತೂರಿಬರುವ ಬಾಣಗಳು ಇಂದಿಗೂ ನಿಂತಿಲ್ಲ. ಪ್ರಸ್ತುತ ಹಲವು ದಿಕ್ಕುಗಳಿಂದ ಮಹಾತ್ಮನೆಡೆಗೆ ಬರುವ ಬಾಣಗಳ ಸಂಖ್ಯೆ ಈಗೀಗ ತುಸು ಹೆಚ್ಚೇ ದ್ವಿಗುಣಗೊಂಡು, ಗಾಸಿ ಮಾಡುತ್ತಿವೆ. ಕ್ರೌರ್ಯವನ್ನು ಬಿಂಬಿಸುವ ಆಕ್ರಮಣಕಾರಿ ಮುಖವಾಡಗಳು ಹಾಗೂ ಕತ್ತಿ, ಚೂರಿ, ಚಾಕು, ಪಿಸ್ತೂಲಿನಂಥ ನೆತ್ತರು ಹರಿಸಬಲ್ಲ ಹತಾರಗಳು. ಇವುಗಳ ಮುಂದೆ ಚರಕ ಹಿಡಿದು ತನ್ನೊಳಗೆ ತಾನೇ ಧ್ಯಾನಸ್ಥ ಸ್ಥಿತಿಯಲ್ಲಿರುವ ಮಹಾತ್ಮ. ಸದ್ಯಕ್ಕೆ ಇದು ಕೇವಲ ಕಲಾಕೃತಿಯಷ್ಟೆ ಅಲ್ಲ. ಬಾಪು ಎಂಬ ಬೆಳಕಿಗೆ ಒದಗಿಬಂದ ಸಂಕಷ್ಟವನ್ನು ಬಹಳ ವಾಸ್ತವ ನೆಲೆಯಲ್ಲಿ ಚಿತ್ರಿಸಿದ್ದಾರೆ.

ಪಾದವೇ ಮುಖವಾದರೆ, ಆ ಪಾದದಲ್ಲಿ ಮೂಡುವ ಕಣ್ಣು, ಮೂಗು, ಬಾಯಿ.. ಈ ಕಲಾಕೃತಿಯ ಸಂಕೇತವೇನಿರಬಹುದು ಎಂದು ಯೋಚಿಸಿದರೆ, ಸ್ಥಾವರಕ್ಕಳಿವುಂಟು ಜಂಗಮಕ್ಕಿಲ್ಲ ಎಂಬುದನ್ನು ಮತ್ತೆ ಮತ್ತೆ ಪ್ರತಿಪಾದಿಸಿದಂತೆ ಅನಿಸುತ್ತದೆ. ಬಿಳಿಯ ಕೊಕ್ಕರೆಯನ್ನು ನೋಡಿರುತ್ತೀರಿ. ಆದರೆ ಪ್ರಸನ್ನ ಅವರ ಕಲಾಕೃತಿಗಳಲ್ಲಿ ಕಪ್ಪು ಬಣ್ಣದ ಕೊಕ್ಕರೆಯೊಂದು ಮೈಮುರಿದು ನಿಂತಂತೆ ಭಾಸವಾಗುತ್ತದೆ. ಅವರ ಹಲವು ಕಲಾಕೃತಿಗಳಲ್ಲಿ ಕೊಕ್ಕರೆ, ಮೊಸಳೆ, ನಾಯಿ ಮತ್ತು ಹಕ್ಕಿಯೊಂದು ಮನುಷ್ಯನ ಒಳತೋಟಗಳನ್ನು ಹಿಡಿದಿಡುವ ಬಿಂಬಗಳಾಗಿಯೂ ಮೂಡಿವೆ.


ಇವು ರಂಗಕರ್ಮಿ ಪ್ರಸನ್ನ ಅವರ 'ನಾಟಕವು ಬದುಕಿನೊಳಗೋ ಬದುಕು ನಾಟಕದೊಳಗೋ' ಕಲಾಕೃತಿಗಳ ಪ್ರದರ್ಶನದಲ್ಲಿ ಕಂಡುಬಂದ ಕಲಾಕೃತಿಗಳು.

ಈ ಬಗ್ಗೆ ಅವರು ಹೇಳುವುದಿಷ್ಟು: ನಾಲ್ಕು ದಶಕಗಳಿಂದಲೂ ಚಿತ್ರ ಬಿಡಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ರಂಗಭೂಮಿಯಲ್ಲಿ ವಿನ್ಯಾಸ ಕಲೆಯಲ್ಲಿಯೂ ತೊಡಗಿಕೊಂಡಿದ್ದೆ. 2025ರಲ್ಲಿ ಬಿಡಿಸಿಟ್ಟ ಒಟ್ಟು 76 ಕೃತಿಗಳನ್ನು ಸದ್ಯ ಪ್ರದರ್ಶನಕ್ಕೆ ಇಡಲಾಗಿದೆ.

'ಒಂದೆರಡು ವರ್ಷಗಳಿಂದೀಚೆಗೆ ಐಪ್ಯಾಡ್ ಬಳಕೆ ಮಾಡುವುದನ್ನು ಕಲಿತೆ. ಅದರಲ್ಲಿ ಚಿತ್ರ ಬಿಡಿಸುವುದಕ್ಕೆ ಆಗುತ್ತದೆ ಎಂದು ಗೊತ್ತಾದಾಗ ಐಪ್ಯಾಡ್ ಮತ್ತಷ್ಟು ಹತ್ತಿರವಾಯಿತು. ಈಗೀಗ ಸಿಕ್ಕಾಪಟ್ಟೆ ಸುತ್ತಾಟ ಮಾಡುತ್ತೇನೆ. ಮಳೆ ಬಂದು ಹಚ್ಚಹಸುರಿನಿಂದ ಕೂಡಿದ ಹೊಲಗದ್ದೆಗಳ ನಡುವೆ ಇರುವ ರೈಲಿನಲ್ಲಿ ಕುಳಿತರೆ, ಬರಿಯ ಚಿತ್ರಗಳೇ ಪಾತ್ರಗಳಾಗಿ ತಲೆಯಲ್ಲಿ ಮೂಡುತ್ತವೆ. ಅವೆಲ್ಲವನ್ನೂ ಐಪ್ಯಾಡ್‌ಗೆ ಇಳಿಸಿದ್ದೇನೆ. ಇಲ್ಲಿ ಪ್ರದರ್ಶನಗೊಂಡಿರುವುದೆಲ್ಲವೂ ಡಿಜಿಟಲ್ ಪ್ರಿಂಟ್ಸ್. ಹಾಗೆಂದು ಸಂಪೂರ್ಣ ತಂತ್ರಜ್ಞಾನ ಬಳಸಿಲ್ಲ. ಇದೇ ಸಮಯಕ್ಕೆ ಚಾರ್‌ಕೋಲ್ ಪೆನ್ಸಿಲ್ ಹಾಗೂ ಸಾಮಾನ್ಯ ಪೆನ್ಸಿಲ್ ಬಳಸಿಯೂ ಚಿತ್ರಗಳನ್ನು ಬಿಡಿಸಿದ್ದೇನೆ. ಅವೆಲ್ಲವನ್ನೂ ಸೇರಿಸಿ ಮತ್ತೊಂದು ಪ್ರದರ್ಶನ ಮಾಡುವ ಇರಾದೆಯಿದೆ.' ಎನ್ನುತ್ತಾರೆ ಅವರು.



ಪ್ರಸನ್ನ ಅವರ ಕೈಯಲ್ಲಿ ಮೂಡಿದ ಕಲಾಕೃತಿಗಳು ಚಿತ್ರಗಳು: ಮಂಜುನಾಥ್ ಎಂ.ಎಸ್.



ಪ್ರಸನ್ನ

ಇವರ ಹಲವು ಕಲಾಕೃತಿಗಳನ್ನು ನೋಡುವಾಗ ಪಾತ್ರವೇ ಕಲಾಕೃತಿಯೋ, ಕಲಾಕೃತಿಯೇ ಪಾತ್ರವೋ ಎನ್ನುವಂತೆ ಭಾಸವಾದರೆ ಆಶ್ಚರ್ಯವಿಲ್ಲ.

'ಈಚೀಚೆಗೆ ಹಕ್ಕಿಯನ್ನು ಕಲಾಕೃತಿಯಲ್ಲಿ ತರಲು ಇಷ್ಟವಾಗುತ್ತದೆ. ಹಕ್ಕಿಯೆಂಬುದು ಒಂದು ರೀತಿಯಲ್ಲಿ ನಟ ಇದ್ದ ಹಾಗೆ. ನಟ ಹಲವು ಬಾರಿ ಅಶಕ್ತ. ಸೂಪರ್‌ಸ್ಟಾರ್ ಆದರೆ ಬೇರೆ ಮಾತು. ಉಳಿದಂತೆ ನಟನಿಗೆ ಹಾರಬೇಕು, ಹಾಡಬೇಕು, ಹೊಳೆಯಬೇಕು ಎನ್ನುವ ತವಕ ತೀವ್ರವಾಗಿ ಇರುತ್ತದೆ. ಆದರೆ, ಸಣ್ಣಹಕ್ಕಿಯಂತೆ ಅವನೂ ನಿಸ್ಸಹಾಯಕ. ನಟ ಹಾಗೂ ಹಕ್ಕಿಯನ್ನು ಪರಸ್ಪರ ರೂಪಕವಾಗಿ ಇಟ್ಟುಕೊಂಡು, ಅದನ್ನೇ ಹಲವು ಕಲಾಕೃತಿಯಲ್ಲಿ ತಂದಿದ್ದೇನೆ' ಎನ್ನುತ್ತಾರೆ ಅವರು.

ನಿಮ್ಮೆಲ್ಲ ಕಲಾಕೃತಿಗಳು ಕಪ್ಪು ಬಿಳುಪಿನಲ್ಲಿಯೇ ಮೂಡಿವೆಯಲ್ಲ, ಬಣ್ಣ ಏಕಿಲ್ಲ ಎಂಬ ಪ್ರಶ್ನೆಗೆ, 'ಇದೊಂದು ಕಸುಬುದಾರಿಕೆಯ ಸಮಸ್ಯೆ. ನನ್ನ ಕಸುಬು ನಾಟಕ ಮಾಡುವುದು. ಐವತ್ತು ವರ್ಷಗಳಿಂದ ನಾಟಕ ಮಾಡಿ, ಅದರಲ್ಲಿ ಒಳ್ಳೆಯ ಕಸುಬುದಾರಿಕೆ ಬಂದಿದೆ. ಚಿತ್ರವನ್ನು ಬಿಡಿಸುತ್ತೇನಾದರೂ ಕೌಶಲ ಇನ್ನು ಬರಬೇಕಷ್ಟೆ. ಕಸಬುದಾರಿಕೆ ರೂಢಿಯಾದ ಮೇಲೆ ಇಷ್ಟಿಷ್ಟೆ ಬಣ್ಣ ಬಳಸುತ್ತೇನೆ. ಟೀ ಕಷಾಯದ ಬಣ್ಣ ಹಾಗೂ ಚಾರ್‌ಕೋಲ್ ಪೆನ್ಸಿಲ್ ಬಳಸಿ ಕಲಾಕೃತಿ ಮಾಡಿದ್ದೇನೆ. ಆದರೂ ಬಣ್ಣಗಳನ್ನು ಬಳಸಿ ಕಲಾಕೃತಿ ಮಾಡುವಷ್ಟು ಧೈರ್ಯ ನನಗಿನ್ನು ಬಂದಿಲ್ಲ' ಎನ್ನುವ ವಿನಮ್ರತೆ ಪ್ರಸನ್ನ ಅವರದ್ದು.

ಹೆಣ್ಣಿನ ಘನತೆ ಸೌಂದರ್ಯವನ್ನು ಮೀರಿದ್ದು. ಅವಳ ಘನತೆ ಅವಳ ವ್ಯಕ್ತಿತ್ವದಿಂದಲೇ ಹೊರತು ಕೇವಲ ಸೌಂದರ್ಯದಿಂದ ಅಲ್ಲ ಎಂಬುದನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಚಾಪೆಗಳನ್ನು ಹೆಣೆಯುವ ಕುಟುಂಬವೊಂದರ ಸರಳ ಕಲಾಕೃತಿಯೊಂದಿದೆ. ಈ ಕುಟುಂಬ ಬಡತನವನ್ನು ಹಾಸಿ ಹೊದ್ದಿದ್ದರೂ, ಆ ಹಾಸಿಗೆಯು ಕೌಶಲಯುಕ್ತವಾಗಿದೆ. ಕೌದಿ ಹೆಣೆಯುವ ಕೌಶಲವನ್ನು ರೇಖೆಯಾಗಿಸುವ ಮೂಲಕ ಕಲಾವಂತಿಕೆಯನ್ನು ಮೆರೆದಿದ್ದಾರೆ ಕಲಾವಿದ.

ಹೆಣ್ಣಿನ ಮೇಲೆ ಮೋಹಗೊಂಡ ಗಂಡು, ಅದನ್ನು ಕಣ್ಣಂಚಿನಲ್ಲಿಯೇ ಅರಿತ ಹೆಣ್ಣು, ಅವರೀರ್ವರ ನಡುವೆ ನುಸುಳಿ ಬಂದ ನಾಯಿ ಹೀಗೆ ಒಂದು ಚೌಕಟ್ಟಿನಲ್ಲಿ ಹಲವು ಪಾತ್ರಗಳನ್ನು, ಅವುಗಳ ಭಾವಗಳನ್ನು ಹೇಳುವ ಕೌಶಲವಂತೂ ಅವರಿಗೆ ದಕ್ಕಿದೆ. ಕಲಾಕೃತಿಗಳಲ್ಲಿ ಎರಡು ಪಾತ್ರಗಳ ನಡುವಿನ ಕಣ್ಣುಗಳು ಸಂಧಿಸಲು ಅನುವು ಮಾಡಿಕೊಟ್ಟುಬಿಟ್ಟರೆ, ಅವು ಆಡುವ ಮಾತುಗಳನ್ನು ನೋಡುಗರು ಗ್ರಹಿಸಲು ಸುಲಭವಾಗುತ್ತದೆ ಎನ್ನುವ ಆಲೋಚನೆ ಅವರದ್ದು.

ಚಾರ್‌ಕೋಲ್ ಪೆನ್ಸಿಲ್‌ನಿಂದ ರಚಿಸಿದ ಕಲಾಕೃತಿಗಳ ಜತೆಗೆ ವುಡ್‌ಬ್ಲಾಕ್ ಪ್ರಿಂಟಿಂಗ್, ಡ್ರೈಯಿಂಗ್‌ನಿಂದ ತಯಾರಿಸಿದ ಕಲಾಕೃತಿಗಳನ್ನು ಮುಂದಿನ ದಿನಗಳಲ್ಲಿ ಪ್ರದರ್ಶಿಸುವ ಇಚ್ಛೆ ಅವರದ್ದು.



ರಾಸುಗಳೊಂದಿಗೆ ವೆಂಕಟೇಶ್



ಈ ಮಣ್ಣಿನ ಸುವಾಸನೆ ಎಷ್ಟು ಚೆಂದ...

ಮಂಡ್ಯ ರೈತನ ಕೃಷಿ ಪ್ರವಾಸೋದ್ಯಮ

8ನೇ ಪುಟದಿಂದ...

ತಮ್ಮ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ವಿಸ್ತರಿಸಲು 'ವರ್ಕ್ ಅವೆ ಇನ್ ಇಂಡಿಯಾ' ಹೆಸರಿನ ವೆಬ್‌ಸೈಟ್ ಕೂಡ ರೂಪಿಸಿದ್ದಾರೆ. ಈ ವೆಬ್‌ಸೈಟ್ ಮೂಲಕ ದೇಶ, ವಿದೇಶಗಳ ರೈತರು ಹಾಗೂ ಅಧಿಕಾರಿಗಳ ಗಮನ ಸೆಳೆದಿದ್ದಾರೆ.

ಸಮಗ್ರ ಕೃಷಿ ಪದ್ಧತಿ

ಐದು ಎಕರೆಯಲ್ಲಿ ಹತ್ತಾರು ಬಗೆಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರಾಜಮುಡಿ, ರತ್ನಚೂಡಿ, ನವರ, ಬೆಳಗಾವಿ ಬಾಸುಮತಿ, ಸಿದ್ದಸಣ್ಣ, ಎಚ್‌ಎಂಟಿ ಹೆಸರಿನ ದೇಸಿ ತಳಿಯ ಸುವಾಸನೆಯುಕ್ತ ಭತ್ತ ಬೆಳೆಯುತ್ತಾರೆ. ರಾಗಿ, ಜೋಳ, ತೆಂಗು, ಬಾಳೆ ಇತರೆ ಹಣ್ಣು, ಸೊಪ್ಪು, ತರಕಾರಿಗಳನ್ನು ಬೆಳೆಯುತ್ತಾರೆ. ಇವರ ಬಳಿ ಗಿರ್, ಸಾಯಿವಾಲ್, ಹಳ್ಳಿಕಾರ್ ತಳಿಯ ಹಸುಗಳಿವೆ. ಮೇಕೆ ಮತ್ತು ಮೀನು ಸಾಕಣೆಯೂ ನಡೆಯುತ್ತದೆ. ನಾಟಿ ಹಸುವಿನ ಹಾಲು, ತುಪ್ಪ ಮಾರಾಟ ಮಾಡುತ್ತಾರೆ. ತಮ್ಮ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮೈಸೂರಿನ ಹಿನಕಲ್‌ನಲ್ಲಿ ಅಂಗಡಿಯನ್ನೂ ತೆರೆದಿದ್ದಾರೆ ವೆಂಕಟೇಶ್.

ರೈತರಿಗೆ ಮಣ್ಣಿನ ಗುಣಮಟ್ಟ ಮತ್ತು ಸಾವಯವ ಬೆಳೆ ಪದ್ಧತಿ ಕುರಿತು ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆ ಇಲಾಖೆಗಳ ಸಹಯೋಗದಲ್ಲಿ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಇದೊಂದು ರೀತಿ ರೈತರ ತರಬೇತಿ ಕೇಂದ್ರವಾಗಿದೆ. ರೈತರು ಕೇವಲ ಕೃಷಿಯನ್ನೇ ನಂಬಿ ಬದುಕುವ ಕಾಲ ಹೋಗಿದೆ. ಈಗ ಕೃಷಿಯನ್ನು ಬೇರೆ ಬೇರೆ ಆಯಾಮಗಳಿಂದ ಆದಾಯದ ಮೂಲವನ್ನಾಗಿ ಮಾಡುವ ಅನ್ವೇಷಣಾ ಗುಣವನ್ನು ಬೆಳೆಸಿಕೊಳ್ಳಬೇಕು ಎನ್ನುವುದನ್ನು ವೆಂಕಟೇಶ್ 'ಕೃಷಿ ಪ್ರವಾಸೋದ್ಯಮ'ದ ಮೂಲಕ ಸಾಧಿಸಿತೋರಿಸಿದ್ದಾರೆ. (ಸಂಪರ್ಕ ಸಂಖ್ಯೆ: 91642 35333)

ಮರಾಠಿ ಮಣ್ಣಲ್ಲಿ ಕನ್ನಡ ಕಂಪು

8ನೇ ಪುಟದಿಂದ...

ಮೊದಲ ಹಂತವಾಗಿ ಕನ್ನಡ ಸಂಘ ಕಟ್ಟಿ ಕನ್ನಡಿಗರನ್ನು ಬೆಸೆಯಲು ಶುರು ಮಾಡಿದರು. ಕನ್ನಡ ಗಾಯಕರ ಗುಂಪು ರಚಿಸಿಕೊಂಡರು. ವಾರಕ್ಕೊಮ್ಮೆ, ರಜೆ ಇದ್ದಾಗ ಕನ್ನಡಿಗರನ್ನು ಸೇರಿಸಿ ಕನ್ನಡ ಹಾಡು, ಜನಪದ ಗೀತೆ, ಚಲನಚಿತ್ರ ಗೀತೆ ಹಾಡುವ ಕಾರ್ಯಕ್ರಮ ರೂಪಿಸಿದರು. ಈ ಗುಂಪು ಈಗಾಗಲೇ ಪುಣೆಯ ವಿವಿಧ ವೇದಿಕೆಗಳಲ್ಲಿ ಯಶಸ್ವಿಯಾಗಿ ಅನೇಕ ಕಾರ್ಯಕ್ರಮಗಳನ್ನು ನೀಡಿದೆ.


ಎಲ್ಲರಿಗೂ ಕನ್ನಡ ಚಟುವಟಿಕೆಗಳ ಬಗ್ಗೆ ತಿಳಿಸುವ ಮತ್ತು ಪರಸ್ಪರ ವಿಚಾರ ವಿಮರ್ಶೆಗಾಗಿ ವೇದಿಕೆಯೊಂದು ಅಗತ್ಯವಿದೆ ಎಂದು ಅನಿಸತೊಡಗಿತು. ಆಗ ಅವರ ಮನಸ್ಸಿನಲ್ಲಿ ಚಿಗುರೊಡೆದದ್ದೇ 'ಕಂಪು' ಮಾಸಪತ್ರಿಕೆ ಶುರು ಮಾಡುವ ಕನಸು.

ಪುಣೆ ಹಾಗೂ ಸುತ್ತಮುತ್ತ ಇರುವ ಕನ್ನಡಿಗರಿಂದ ಕತೆ, ಕವನ, ಪ್ರಬಂಧ, ಸಂಸ್ಕೃತಿ, ಆಚಾರ, ವಿಚಾರಗಳ ಲೇಖನಗಳನ್ನು ಬರೆಸಿ ಪ್ರಕಟಿಸಲು ತೊಡಗಿದರು. ಜಾಲತಾಣಗಳ ಮೂಲಕ 'ಕಂಪು' ದೇಶದ ಗಡಿದಾಟಿ ವಿದೇಶಗಳಲ್ಲೂ ಪಸರಿಸಿದೆ. ಹೊರದೇಶದ ಕನ್ನಡಿಗರ ಮನಸ್ಸನ್ನೂ ತಟ್ಟಿದೆ.

ಅನೇಕ ವರ್ಷ ವಿದೇಶದಲ್ಲಿದ್ದ ಈ ದಂಪತಿ ಅಲ್ಲಿರುವ ಕನ್ನಡಿಗ ಸ್ನೇಹಿತರಿಂದಲೂ ಲೇಖನ ಬರೆಸುತ್ತಾರೆ. ಮನೋಜ್ ತಮ್ಮ ಕೆಲಸದಿಂದ ಮನೆಗೆ ಮರಳಿದ ಬಳಿಕ ಪತ್ರಿಕೆ ರೂಪಿಸುವ ಕಾಯಕದಲ್ಲಿ ತೊಡಗುತ್ತಾರೆ. ಸ್ವಂತ ಪತ್ರಿಕೆಯ ವಿನ್ಯಾಸ, ಸಂಪಾದನೆ ಮಾಡುತ್ತಾರೆ. ಸಂಪಾದಕೀಯ ಬರೆಯುತ್ತಾರೆ.

'ಕಂಪು' ಮಾಧ್ಯಮದಿಂದ ಹೊಸ ಕಾರ್ಯಕ್ರಮ 'ಸೊಂಪಾದ ಹರಟೆ' ರೂಪಿಸಿದ್ದಾರೆ. ಸಾಧಕರು ಮತ್ತು ವಿವಿಧ ತಂಡಗಳ ಜೊತೆ ಲಘು ಹರಟೆಯ ನವಿರಾದ ನಿರೂಪಣೆ ಮಾಡುವ ಪ್ರಯತ್ನ ಇದಾಗಿದೆ.

ಹೊಸ ಕವಿ, ಲೇಖಕ ಮತ್ತು ಕಲಾವಿದರಿಗೆ ವೇದಿಕೆ ನೀಡುತ್ತಿರುವ ಈ ಆನ್‌ಲೈನ್ ಪತ್ರಿಕೆ ಪ್ರತಿ ತಿಂಗಳು ಕನ್ನಡಿಗರ ಮೊಬೈಲಿಗೆ ಉಚಿತವಾಗಿ ತಲುಪುತ್ತದೆ. ಈಗಾಗಲೇ ಪತ್ರಿಕೆಯ ಹದಿನಾರು ಸಂಚಿಕೆಗಳು ಹೊರ ಬಂದಿವೆ. ಎಲ್ಲಾ ಸಂಚಿಕೆಗಳು 'ಪುಸ್ತಕದ ಕಪಾಟ'ನಲ್ಲಿ ಉಚಿತವಾಗಿ ಲಭ್ಯ ಇವೆ. ಪತ್ರಿಕೆಯ ಸಂಚಿಕೆಗಳನ್ನು ಧ್ವನಿ-ದೃಶ್ಯ ಮಾಧ್ಯಮವಾಗಿ ಯೂಟ್ಯೂಬ್‌ನಲ್ಲಿಯೂ ಹೊರತರುತ್ತಾರೆ. ಈ ಪ್ರಯತ್ನ ಕನ್ನಡದ ಯುವಪೀಳಿಗೆಯನ್ನು ಕನ್ನಡದತ್ತ ಸೆಳೆಯಲು ಪರಿಣಾಮಕಾರಿಯಾಗಿದೆ.



'ಲಾಭದ ಆಸೆ ಅಥವಾ ಹೆಸರು ಮಾಡಲು ಈ ಪತ್ರಿಕೆ ಮಾಡುತ್ತಿಲ್ಲ. ತಾಯಿಭಾಷೆಗೆ ಇದೊಂದು ನನ್ನ ಸಣ್ಣ ನಿಸ್ವಾರ್ಥ ಸೇವೆ. ಕನ್ನಡ ಮಾಧ್ಯಮದಲ್ಲಿ ಕಲಿತ ನಾನು ಮೊದಲಿನಿಂದಲೂ ಕನ್ನಡ ಭಾಷೆಯ ಕಡು ವ್ಯಾಮೋಹಿ. ಕನ್ನಡ ಸಾಹಿತ್ಯದ ದಟ್ಟ ಪ್ರಭಾವ ನನ್ನ ಮೇಲಾಗಿದೆ. ವಿದೇಶದಲ್ಲಿ ವೃತ್ತಿ, ಐ.ಟಿ ಕಂಪನಿಯಲ್ಲಿ ಉದ್ಯೋಗದಿಂದ ಸಂಪೂರ್ಣವಾಗಿ ಕನ್ನಡ ಕಟ್ಟುವ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಹಾಗಂತ ಕನ್ನಡದ ನಂಟು ಕಡಿದುಕೊಂಡಿರಲಿಲ್ಲ. ನಿರಂತರ ಓದು, ಬರಹ ಸಾಗಿತ್ತು' ಎಂದು ಮನೋಜ ನೆನಪಿಸಿಕೊಳ್ಳುತ್ತಾರೆ.

'ಪುಣೆಯಲ್ಲಿ ಕನ್ನಡ ಕೆಲಸಗಳಿಗೆ ಈಗ ಸಂಘಟಿತ ರೂಪ ದೊರೆತಿದೆ. ಎಲ್ಲ ಕನ್ನಡಿಗರೂ ವಾರಕ್ಕೊಮ್ಮೆ, ಬಿಡುವಾದಾಗ, ರಜಾ ದಿನಗಳಲ್ಲಿ ಒಟ್ಟಿಗೆ ಸೇರುತ್ತೇವೆ. ಕನ್ನಡದ ಹಾಡು, ಸಾಹಿತ್ಯ ಚರ್ಚೆ, ಸಂವಾದ, ಹರಟೆ ಮುಂತಾದ ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗುತ್ತೇವೆ. ಎಲ್ಲರೂ ತಮ್ಮ ಮಕ್ಕಳನ್ನು ಕರೆ ತರುವುದು ಕಡ್ಡಾಯ. ಹೀಗೆ ಅವರಿಗೂ ಕನ್ನಡ ನಂಟು ಗಾಢವಾಗುತ್ತದೆ. ಹಿರಿಮೆ, ಗರಿಮೆ ಅರಿವಾಗುತ್ತದೆ' ಎನ್ನುತ್ತಾರೆ ಮನೋಜ.

ಎಲ್ಲೇ ಇರು ಹೇಗೇ ಇರು ಎಂದೆಂದಿಗೂ ಕನ್ನಡವಾಗಿರು...

ಕಥೆ

ಇಂದ್ರಕುಮಾರ್ ಎಚ್.ಬಿ. ಅವರ 'ಸುತ್ತಿಹುದು ಸುಳಿಯಿಹುದು ಸತ್ತಿಹುದು ಸತಾಯಿಸುತಿಹುದು'

prajavani.net/short-story



ಚಿತ್ರದುರ್ಗ ಮೂಲದವರಾದ ಇಂದ್ರಕುಮಾರ್, 'ಮಾಸ್ಟರ್ ಪೀಸ್' ಎನಿಸುವಂಥ ಕಥೆ ಕಟ್ಟುವ ಹಂಬಲದ ಮೇಸ್ಟ್ರು. 'ಆ ಮುಖ', 'ನನ್ನ ನಿನ್ನ ನೆಂಟತನ', 'ಪರಮೂ ಪ್ರಪಂಚ' ಇವರ ಕಥಾ-ಸಂಕಲನಗಳು. 2022ರ 'ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನ ಪಡೆದವರು. ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ.

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2025
ಕಥಾ–ಕವನ ಸ್ಪರ್ಧೆ
ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ ಹಾಗೂ ಕವನ



ಇವರ ಮೂಲ ದಕ್ಷಿಣ ಕನ್ನಡ. ಆದರೆ ಬದುಕು ಕಟ್ಟಿಕೊಂಡಿದ್ದು ಭದ್ರಾವತಿಯಲ್ಲಿ. 'ಕಾಗದದ ಕುದುರೆ', 'ಗ್ರೀನ್ ರೂಮಿನಲ್ಲಿ' ಇವರ ಕವನ ಸಂಕಲನಗಳು. 'ಆ ಬದಿಯ ಹೂ', 'ಗೀರು' ಇವರ ಕಥಾ ಸಂಕಲನಗಳು. ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಅವರ ಸುತ್ತ-ಮುತ್ತಲಿನ ಪ್ರದೇಶವೇ ಬರವಣಿಗೆಯ ಮೂಲ ಸೆಲೆ.

ಕವನ

ದೀಪ್ತಿ ಭದ್ರಾವತಿ ಅವರ 'ಒಂದು ಭೇಟಿ ಎಷ್ಟು ಕಷ್ಟ..'

www.prajavani.net/poetry


ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ಚಳವಳಿಯ ಚಲನೆಗೆ ನೂರಾರು ಹಾಡುಗಳು



ಬೆಂಕಿಯ ಮಳೆ
ಸಂ: ಬಿ.ಎಂ. ಪುಟ್ಟಯ್ಯ
ಪ್ರ: ಅನುಭವ ಪ್ರಕಾಶನ
ಮೊ: 7892779957


ಸಿದ್ದಲಿಂಗಯ್ಯ ಅವರು ಅಂಬೇಡ್ಕರ್ ಕುರಿತು ರಚಿಸಿದ 'ನಾಡನಡುವಿನಿಂದ ಸಿಡಿದ ನೋವಿನ ಕೂಗೆ' ಕವಿತೆಯ 'ಜಾತಿಯನ್ನು ಹೂತುಬಿಡಲು ಲಕ್ಷ ಲಕ್ಷ ಜನರನು/ ಕಟ್ಟಿ ಕ್ರಿಯಾರಂಗಕ್ಕಿಳಿದ ಸ್ವಾಭಿಮಾನ ಸಮುದ್ರ' ಎಂಬ ಚರಣದಂತೆ ಜನ ಚಳವಳಿಯಲ್ಲಿ ಮೊಳಗುವ 305 ಹಾಡುಗಳು 'ಬೆಂಕಿಯ ಮಳೆ' ಸಂಗ್ರಹದಲ್ಲಿವೆ. 'ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೆ ಕಟ್ಟುತ್ತೇವ' ಸತೀಶ್ ಕುಲಕರ್ಣಿ ಅವರ ರಚನೆಯ ಜನಪ್ರಿಯ ಗೀತೆಯೂ ಇದರಲ್ಲಿದೆ. ಈ ಕವನದೊಳಗಣ ಆಶಯದಂತೆ ಈ ನೆಲದ ಹಾಡು ಬರೆಯಲು ಮೆರವಣಿಗೆ ಹೊರಟ ಸಂಘಟಿತ ಜನರ ಕೊರಳ ದನಿಗಳೇ ಹಾಡ ಹೂವಾಗಿ, ಕ್ರಾಂತಿಯ ಕಿಡಿಯಾಗಿ ಇಲ್ಲಿ ಕಾಣುತ್ತಿವೆ.

ವಿದ್ಯಾರ್ಥಿ, ದಲಿತ, ರೈತ ಮತ್ತು ಮಹಿಳಾ ಚಳವಳಿಯ ಕರುಳ ನೋವಿಗೆ ಇಲ್ಲಿನ ಹಾಡುಗಳು ಸ್ಫೂರ್ತಿಯ ಸೆಲೆಯಾಗಿವೆ. ಬುದ್ಧ, ಅಂಬೇಡ್ಕರ್, ಗಾಂಧೀಜಿ, ಬಿ. ಕೃಷ್ಣಪ್ಪ, ಜಗಜೀವನ್ ರಾಂ, ಕಾರ್ಲ್ ಮಾರ್ಕ್ಸ್, ಲೆನಿನ್ ಅವರ ಚಿಂತನೆಯ ಮಿಂಚು ಇಲ್ಲಿನ ಕಾವ್ಯಗಳಲ್ಲಿ ಹೊಳೆಯುತ್ತದೆ. ಸಿ. ದಾನಪ್ಪ ನಿಲೋಗಲ್, ಕೆ.ಬಿ. ಸಿದ್ದಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಗೊಲ್ಲಹಳ್ಳಿ ಶಿವಪ್ರಸಾದ್, ಅಂಬಣ್ಣ ಅರೋಲಿಕರ್, ಗದ್ದರ್, ಇಂದೂಧರ ಹೊನ್ನಾಪುರ, ಆರ್. ಮಾನಸಯ್ಯ, ಚೆನ್ನಣ್ಣ ವಾಲೀಕಾರ, ಸಿದ್ದನಗೌಡ ಪಾಟೀಲ್, ಸಿದ್ದಲಿಂಗಯ್ಯ, ಮಲ್ಲಿಕಾ ಘಂಟಿ, ಬಿ.ಎಂ. ಪುಟ್ಟಯ್ಯ ಅವರ ರಚನೆಗಳು ಸೇರಿದಂತೆ ಎಲೆಮರೆಯ ಕಾಯಿಯಂತಿರುವ ಕೆಲವು ಸಾಮಾಜಿಕ ಕಾರ್ಯಕರ್ತರು, ಚಳವಳಿಯ ಒಡನಾಡಿಗಳು ಬರೆದ ಹಾಡುಗಳು ಇದರಲ್ಲಿವೆ.

ಹೋರಾಟದ ಹಾದಿಯಲ್ಲಿ ಆಧುನಿಕ ಜನಪದ ಕಾವ್ಯವೂ ಹುಟ್ಟಿದೆ ಎನ್ನುವುದಕ್ಕೆ ಸಂಕಲಿತ ಕೃತಿಯ ಕೆಲವು ಹಾಡುಗಳು ಸಾಕ್ಷಿಯಾಗುತ್ತವೆ. ಇಲ್ಲಿನ ಕೆಲವು ಕವಿತೆಗಳು ಸಮುದಾಯದೊಳಗೇ ಉದಯಿಸಿವೆ. ಅನ್ಯಭಾಷೆಯ ಕವಿತೆಗಳು ಭಾಷಾಂತರಗೊಂಡು ನಾಡಿನ ಹೋರಾಟವನ್ನು ಬಲಪಡಿಸಿದ ಹಾಡುಗಳೂ ಇವೆ. ಇಲ್ಲಿನ ಕೆಲವು ಹಾಡು ಕರಾಳತೆಯ ಅನ್ಯಾಯವನ್ನು ಬಿಂಬಿಸುವ ಸಂದರ್ಭದಲ್ಲಿ ಧ್ವನ್ಯಾರ್ಥ ಆದ್ಯತೆಯಲ್ಲ ಎನ್ನುವುದನ್ನೂ ತೋರಿಸುತ್ತವೆ. ವಾಚ್ಯವಾದರೂ ಮುಚ್ಚಿದ ಎದೆಯ ಕದವನ್ನು ತಟ್ಟುತ್ತಿವೆ ಎಂದು ಅನ್ನಿಸುತ್ತದೆ. ಕನ್ನಡದ ಲಯಬದ್ಧತೆಯ ಜೊತೆ ಜನಪ್ರಿಯ ರಾಗದ ಅನುಕರಣೆಯಿಂದ ಕೆಲ ಹಾಡುಗಳು ಹುಟ್ಟಿವೆ. ಬಹುತೇಕ ಹಾಡುಗಳು ಅತ್ಯಂತ ಜನಪ್ರಿಯ ಆಗಿದ್ದರೂ ಲೇಖಕರು ಯಾರು ಎಂಬುದು ಗೊತ್ತಿರುವುದಿಲ್ಲ. ಅಂತಹ ಲೇಖಕರನ್ನೂ ಸಂಪಾದಕ ಬಿ.ಎಂ. ಪುಟ್ಟಯ್ಯ ಈ ಸಂಕಲನದಲ್ಲಿ ಗುರುತಿಸಿದ್ದಾರೆ.

ಪುಟ: 384 ₹400

ಅಂತರಂಗದ ತಿಕ್ಕಾಟದ ಕಥೆಗಳು



ಮಹಾತ್ಮೆ (ಕಥಾಸಂಕಲನ)
ಲೇ: ಚೀಮನಹಳ್ಳಿ ರಮೇಶಬಾಬು
ಪ್ರ: ಅನಿಮ ಪುಸ್ತಕ
ಮೊ: 9845875423

ಚೀಮನಹಳ್ಳಿ ರಮೇಶಬಾಬು ಅವರ ಮೂರನೇ ಕಥಾಸಂಕಲನ 'ಮಹಾತ್ಮೆ'. ಇದರಲ್ಲಿ ಒಟ್ಟು ಹನ್ನೊಂದು ಕಥೆಗಳಿವೆ. ಗ್ರಾಮೀಣ ಮತ್ತು ಆಧುನಿಕ ಬದುಕಿನ ವಿಶಿಷ್ಟ ಮತ್ತು ವಿಭಿನ್ನ ರೀತಿಯ ಪಾತ್ರಗಳ ಮೂಲಕ ಈ ಸಂಕಲನದ ಕಥೆಗಳು ಗಮನಸೆಳೆಯುತ್ತವೆ.

ಈ ಕಥಾ ಸಂಕಲನದಲ್ಲಿರುವ ಮಹಾತ್ಮೆ ಕಥೆಯು ಕಥಾನಾಯಕನ ಪಾತ್ರದ ಆಯ್ಕೆಯಿಂದಲೇ ಗಮನ ಸೆಳೆಯುತ್ತದೆ. ಮೇಲ್ನೋಟಕ್ಕೆ ಶನಿ ಮಹಾತ್ಮೆ ಹೇಳುವವನ ಪುರಾಣದಂತೆ ಕಾಣುವ ಕಥೆಯು, ಗ್ರಾಮೀಣ ಭಾಗದ ಜೀವನ, ಬದಲಾಗುತ್ತಿರುವ ಜೀವನ ಶೈಲಿ, ಸಂಸ್ಕೃತಿ, ಸಂಪ್ರದಾಯ, ಪುರುಷ ಪ್ರಧಾನ ಸಮಾಜದ ಅಹಮಿಕೆ, ಜೀವನದ ಕುರಿತ ಜಿಜ್ಞಾಸೆ, ಆಸೆ - ದುರಾಸೆ, ನಂಬಿಕೆಗಳನ್ನು ಸರಳವಾಗಿ ಕಟ್ಟಿಕೊಟ್ಟಿದೆ. ಮಹಾತ್ಮೆ ಕಥೆಯ ಕಥಾನಾಯಕ ಗಂಗಿರೆಡ್ಡಿಯಂತವರು ಪ್ರತಿ ಹಳ್ಳಿಗಳಲ್ಲೂ ಇನ್ನೂ ಜೀವಂತವಾಗಿದ್ದಾರೆ. ಹಾಗಾಗಿ, ಕಥೆಯು ವಾಸ್ತವ ಬದುಕಿನ ಚಿತ್ರಣದಂತೆ ತೋರುತ್ತದೆ.


ಇನ್ನೊಂದು ಪ್ರಮುಖ ಕಥೆ 'ಸಾವಯವ'. ತಿನ್ನುವ ಅನ್ನವು ಹುಳುವಿನ ರೀತಿ ಕಾಣಿಸಿಕೊಳ್ಳಲು ಶುರುವಾದಾಗ, ಕಥಾನಾಯಕ ಪರಮೇಶಿ ಪಡುವ ಪಡಿಪಾಟಲುಗಳೇ ಈ ಕಥೆ. ಆದರೆ, ಅದರ ಹೊರಗೂ ಮತ್ತೇನನ್ನೋ ಓದುಗನಿಗೆ ಮುಟ್ಟಿಸಲು ಪ್ರಯತ್ನಿಸಿದ್ದಾರೆ. ಕಥಾವಸ್ತುವಿನ ಆಯ್ಕೆಯಿಂದಲೂ ಈ ಕಥೆ ಗಮನ ಸೆಳೆಯುತ್ತದೆ.

ಬೇಟೆ, ಸಾವು, ಹುಡುಕಾಟ, ಕೇರಿಗಳು ಕಥೆಗಳು ವಿಭಿನ್ನ ರೀತಿಯ ಜಿಜ್ಞಾಸೆಯಿಂದ ಕೂಡಿವೆ. ಸಾಮಾನ್ಯ ಮನುಷ್ಯನ ಆಲೋಚನಾ ಲಹರಿಯೊಳಗಿನ ತಾಕಲಾಟಗಳು ಇಲ್ಲಿ ಕಥೆಗಳಾಗಿವೆ. ಮನುಷ್ಯನ ಒಳಗಿನ ಸಂಕಟ, ತೊಳಲಾಟ, ನೋವು, ಹತಾಶೆ, ಆಕ್ರೋಶ, ಸಂತಸಗಳು ಈ ಸಂಕಲನದ ಕಥೆಗಳ ಸಾಮಾನ್ಯ ಅಂಶವಾಗಿದೆ.

ಇಲ್ಲಿನ ಕಥೆಗಳು ಸರಳ ನಿರೂಪಣೆಯಿಂದ ಕೂಡಿವೆ. ಕೆಲವು ಕಥೆಗಳಲ್ಲಿ ಅಗತ್ಯವಿರುವಲ್ಲಿ ತೆಲುಗು ಮಿಶ್ರಿತ ಕನ್ನಡವನ್ನು ಬಳಕೆ ಮಾಡಿಕೊಂಡಿರುವುದು, ಕಥೆಗಳಿಗೆ ಗ್ರಾಮೀಣ ಸೊಗಡು ನೀಡಿರುವ ಜೊತೆಗೆ ಓದುಗನಿಗೂ ನೈಜತೆಯ ಅನುಭವ ನೀಡುತ್ತದೆ.

ಪುಟ: 132 ₹150

ಜೀವನದ ವಾಸ್ತವಾಂಶಗಳ ಸಾರುವ ಕಥೆಗಳು



ಎಂ.ಟಿ ವಾಸುದೇವನ್ ನಾಯರ್ ಕಥೆಗಳು
ಮೂಲ: ಮಲಯಾಳ
ಕನ್ನಡಕ್ಕೆ: ಮೋಹನ ಕುಂಟಾರ್
ಪ್ರ: ಯಾಜಿ, ಹೊಸಪೇಟೆ
ಮೊ: 70196 37741

ಮಲಯಾಳದ ಖ್ಯಾತ ಕಥೆಗಾರ ಎಂ.ಟಿ.ವಾಸುದೇವನ್ ನಾಯರ್ ಅವರ ಕಥೆಗಳನ್ನು ಮೋಹನ ಕುಂಟಾರ್ ಕನ್ನಡದ ಓದುಗರಿಗೆ ಈ ಪುಸ್ತಕದ ಮೂಲಕ ಪರಿಚಯಿಸಿದ್ದಾರೆ. ಜೀವನದ ವಾಸ್ತವಾಂಶಗಳನ್ನು ಸಾರುವ ಇಲ್ಲಿನ ಕಥೆಗಳು, ಸಮಾಜದ ಸಂಕೀರ್ಣತೆಯನ್ನು ಸೊಗಸಾಗಿ ಬಿಚ್ಚಿಡುತ್ತವೆ. ಇಲ್ಲಿನ ಪ್ರತಿಯೊಂದು ಕಥೆಗಳಲ್ಲಿ ಭಿನ್ನ ವಸ್ತುಗಳಿದ್ದರೂ ಅವೆಲ್ಲವೂ ಬದುಕಿಗೆ ಸಂಬಂಧಿಸಿದ್ದೇ ಆಗಿವೆ. ಇಲ್ಲಿನ ಕಥೆಗಳಲ್ಲಿ ಇರುವ ಸಾರ ಕಥೆಗಾರ ಸಮಾಜವನ್ನು ಆಳವಾಗಿ ಗ್ರಹಿಸಿದುದರ ಪ್ರತೀಕ. ಸೈದ್ಧಾಂತಿಕ ನಿಲುವುಗಳಿಗೆ ಅತೀತವಾಗಿ ಬದುಕಿನ ವಾಸ್ತವತೆಯನ್ನು, ಸಮಾಜದ ಕೊಂಕುಗಳನ್ನು, ಸಮಾಜದ ಭಿನ್ನ ಜನರ ವ್ಯಕ್ತಿತ್ವಗಳನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಸುಖ, ದುಃಖ, ಅಸಹಾಯಕತೆ, ವ್ಯಾಕುಲತೆ, ಕ್ಲೇಶ, ನೋವು, ಭಾವೋದ್ವೇಗ ಮುಂತಾದವುಗಳ ಚಿತ್ರಣ ಓದುಗರ ಹೃದಯ ವೀಣೆಯನ್ನು ಮೀಟುತ್ತದೆ. ಕಡಿಮೆ ಪದಗಳ ಮೂಲಕ ವಿಷಯದ ಬಗ್ಗೆ ಭಾವ ತೀವ್ರತೆಯನ್ನು ಮೂಡಿಸಿ, ಯೋಚನೆಗೆ ಹಚ್ಚುವ ಕಥೆಗಾರರ ಶೈಲಿ ಭಿನ್ನವಾದುದು. ಕಥೆಗಾರರ ಆಶಯಕ್ಕೆ ಚ್ಯುತಿಯಾಗದಂತೆ ಕನ್ನಡದ ಓದುಗರಿಗೆ ತಲುಪಿಸಿದ ಅನುವಾದಕರ ಪ್ರಯತ್ನವೂ ಕಡಿಮೆಯೇನಲ್ಲ.

ಚಲನಚಿತ್ರಗಳಲ್ಲಿಯೂ ವಾಸುದೇವನ್ ಅವರು ಕೆಲಸ ಮಾಡಿದ್ದರಿಂದ ಕಥೆಗಳು ಕಣ್ಣ ಮುಂದೆ ನಡೆಯುವಂತೆ ಭಾಸವಾಗುತ್ತದೆ. ಕೇರಳದ ದೃಶ್ಯಗಳು, ಗ್ರಾಮೀಣ ಜನಜೀವನ, ಹಳ್ಳಿಯ ಸೊಗಡು ದೃಶ್ಯವಾಗಿ ಸಾಗುತ್ತದೆ. ಕುಟುಂಬವೊಂದರಲ್ಲಿ ನಡೆಯಬಹುದಾದ ಘಟನೆಗಳನ್ನೇ ವಸ್ತುವಾಗಿ ತೆಗೆದುಕೊಂಡಿರುವುದರಿಂದ, ಕುಟುಂಬದಲ್ಲಿ ಉಂಟಾಗುವ ತಲ್ಲಣಗಳು, ಕಟ್ಟುಪಾಡುಗಳ ಚಿತ್ರಣವಿದೆ. ಹದಿಹರೆಯದವರ ತಲ್ಲಣಗಳು, ಭಾವ ಪ್ರಕಟಣೆಯ ತೀವ್ರತೆಗಳು ಸಹಜವೆಂಬಂತೆ ಮೂಡಿಬಂದಿದೆ. ಶಿಕ್ಷಕ ವಿದ್ಯಾರ್ಥಿ ನಡುವಿನ ಸಂಬಂಧ, ತುಂಬು ಕುಟುಂಬಗಳು ವಿಘಟನೆಗೊಂಡು ಸಣ್ಣ ಕುಟುಂಬಗಳಾಗಿ ಮಾರ್ಪಾಡಾಗುವ ಚಿತ್ರಣಗಳೂ ಇಲ್ಲಿಯ ಕಥೆಯ ವಸ್ತುಗಳೇ. ಪಾತ್ರವನ್ನು ನಕಾರಾತ್ಮಕವಾಗಿ, ವ್ಯಕ್ತಿಯನ್ನು ದುಷ್ಟ ಎಂದು ಚಿತ್ರಿಸುವುದನ್ನು ಆದಷ್ಟು ತಪ್ಪಿಸಿದ್ದಾರೆ. ಸಂಬಂಧಗಳ ಸೂಕ್ಷ್ಮಗಳನ್ನು ನಾಜೂಕಾಗಿ ದಾಖಲಿಸಿದ್ದು, ಓದುಗನ ಒಳಮನಸ್ಸು ತಟ್ಟುತ್ತದೆ. ಕನ್ನಡದ ಓದುಗರಿಗೆ ಎಂ.ಟಿ.ವಾಸುದೇವನ್ ನಾಯರ್ ಅವರ ಸಾಹಿತ್ಯ ಹಾಗೂ ಬದುಕನ್ನೂ ಪುಸ್ತಕದಲ್ಲಿ ಪರಿಚಯಿಸಲಾಗಿದೆ.

ಪುಟ: 440 ₹480



ಕಜಾಕಸ್ತಾನ ಸರೋವರಗಳ ದೇಶ. ನಾನಾ ನಮೂನೆಯ ಚಿಕ್ಕ-ದೊಡ್ಡ ಕಣಿವೆಗಳು ಇಲ್ಲಿ ಗಮನ ಸೆಳೆಯುತ್ತವೆ. ಈ ಪ್ರದೇಶದಲ್ಲಿನ ಸುತ್ತಾಟದ ಅನುಭವವೇ ಭಿನ್ನ ಎನ್ನುತ್ತಾ ಅವುಗಳನ್ನು ಅಕ್ಷರ ರೂಪಕ್ಕಿಳಿಸಿದ್ದಾರೆ ಲೇಖಕರು...

ಪ್ರವಾಸ

ಚರ್ಯನ್ ಕಣಿವೆಯ ಚೇತೋಹಾರಿ ಅನುಭವ

• ಚಿತ್ರ-ಬರಹ: ಶೇಖರ್ ಗೌಳೇರ್


ಭೂಗೋಳಶಾಸ್ತ್ರ ಮೇಷ್ಟ್ರು ವೃತ್ತಿಯಿಂದ ನಿವೃತ್ತನಾದ ಮೇಲೆ 'ಅರೌಂಡ್ ದಿ ಗ್ಲೋಬ್' ಕನಸು ಹೊತ್ತು ತಿರುಗಾಟ ಆರಂಭಿಸಿದೆ. ಪ್ರವಾಸಕ್ಕೆಂದೇ ಪ್ರತ್ಯೇಕ ಬಜೆಟ್, ಕ್ಯಾಮೆರಾ ಜೋಡಿಸಿಟ್ಟುಕೊಂಡೆ. ಜಗತ್ತಿನ 35 ದೇಶಗಳ ಪರ್ಯಟನೆ ಮಾಡಿದ ನನಗೆ ಕಜಾಕಸ್ತಾನ ನೋಡುವ ಆಸೆ ಇತ್ತು. ಒಮ್ಮೆ ಯೂಟ್ಯೂಬ್ ಜಾಹೀರಾತು ನೋಡುತ್ತಿದ್ದಾಗ ವೀಸಾ ಬೇಕಿಲ್ಲ, ಕಡಿಮೆ ಖರ್ಚು, ಅದ್ಭುತ ಲ್ಯಾಂಡ್ ಸ್ಕೇಪ್ ಎನ್ನುವ ಮಾತು ಅಲ್ಲಿಗೆ ಹೊರಡಲು ಪ್ರೇರಣೆ ಆಯಿತು. 'ಲ್ಯಾಂಡ್ ಲಾಕ್' ಆದ ಕೇಂದ್ರ ಏಷ್ಯಾದ ದೇಶದಲ್ಲಿ 48,000 ಸರೋವರ, 8,500 ನದಿಗಳು ಹಾಗೂ 2,724 ಹಿಮಗಿರಿಗಳಿವೆ ಎಂದಾಗ ಕುತೂಹಲ ಹೆಚ್ಚಾಯಿತು.

ಮೊದಲು ಪ್ರಯಾಣ ಶುರುವಾಗಿದ್ದು ಚರ್ಯನ್ ಕಣಿವೆಗೆ. ಚುರು ಚುರು ಬಿಸಿಲಿದ್ದರೂ ಚೇತೋಹಾರಿ ಹವಾಗುಣ. ನೋಡಿದ ಕಡೆ ವಿಶಾಲ ಸ್ಟೆಪ್ಪೆ ಹುಲ್ಲುಗಾವಲು, ಕುದುರೆಗಳ ಗುಂಪು, ಅಪರೂಪಕ್ಕೆ ಬಾರ್ಲಿ, ಗೋಧಿ, ಮೆಕ್ಕೆಜೋಳದ ಹೊಲ. ಎಲ್ಲಿಯೂ ತಿರುಗಾಡುವ ಒಂದು ನರಪಿಳ್ಳೆಯೂ ಕಾಣಿಸುತ್ತಿರಲಿಲ್ಲ. ಒಮ್ಮೊಮ್ಮೆ ಹೋಗುವ ದಾರಿ ಅಜ್ಞಾತವೆನಿಸುತ್ತಿತ್ತು. ಕೆಲವು ಹಳ್ಳಿಗಳು ದಾರಿಯಲ್ಲಿ ಸಿಕ್ಕವು. ಕೆಲವು ಕಡೆ ಹಣ್ಣು ತರಕಾರಿಗಳ ರಾಶಿ. ಸತತ ಮೂರು ಗಂಟೆ ಪ್ರಯಾಣದ ನಂತರ ಚರ್ಯನ್ ಕಣಿವೆ ಹತ್ತು ಕಿಲೋಮೀಟರ್ ಎಂದು ಸಾರುವ ಬೋರ್ಡ್ ಕಾಣಿಸಿತು. ಕೇವಲ ಹತ್ತೇ ನಿಮಿಷದಲ್ಲಿ ಅಲ್ಲಿದ್ದೆವು. ತಲಾ 3000 ಟೆಂಗೆ ನೀಡಿ (₹1000) ಟಿಕೆಟ್ ಖರೀದಿಸಿ, ಕಣಿವೆಯ ಮೆಟ್ಟಿಲು ಇಳಿದು ಹೊರಟೆವು. ನೆತ್ತಿಯ ಮೇಲೆ ಸೂರ್ಯ ಪ್ರಖರವಾಗಿದ್ದ.

ಚರ್ಯನ್ ಕಣಿವೆಗೆ ಶರ್ಯನ್ ಎಂದು ಕರೆಯುತ್ತಾರೆ. ಇದು ಚರ್ಯನ್ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿದೆ. ಚರ್ಯನ್ ಕಣಿವೆಯಲ್ಲಿ ಚರ್ಯನ್ ನದಿ ಹರಿಯುತ್ತದೆ. ಅದು ಟಿಯಾನ್ ಶ್ಯಾನ್ ಪರ್ವತದಲ್ಲಿ ಹುಟ್ಟಿ 393 ಕಿಲೋಮೀಟರ್ ಹರಿಯುತ್ತದೆ. ಆದರೆ, ಚರ್ಯನ್ ಕಣಿವೆಯು ಮಾತ್ರ 80 ಕಿಲೋಮೀಟರ್ ಉದ್ದವಿದ್ದು, ಅದರ ಸವಕಳಿಗೊಂಡ ಬಾಹುಗಳು 150 ರಿಂದ 300 ಮೀಟರ್ ಎತ್ತರವಾಗಿದೆ. ಎಲ್ಲಾ ದೃಷ್ಟಿಯಿಂದ ಚರ್ಯನ್ ಕಣಿವೆ ಅಮೆರಿಕದ ಗ್ರ್ಯಾಂಡ್ ಕೆನಾನ್‌ಗೆ ಹೋಲುವುದರಿಂದ ಇದು ಕಜಾಕಸ್ತಾನದ ಗ್ರ್ಯಾಂಡ್ ಕೆನಾನ್ ಎನಿಸಿಕೊಂಡಿದೆ. ಟರ್ಕಿಶ್ ಭಾಷೆಯಲ್ಲಿ ಚರ್ಯನ್ ಎಂದರೆ ಕ್ಲಿಫ್ ಎಂದರ್ಥ. ಚಾರಣ ಮಾಡುತ್ತ ಕಣವೆಯಲ್ಲಿ ಹೊರಟಾಗ ಗೋಡೆಗಳು ಕೊರೆದು, ಕೆತ್ತಿ ನಿಲ್ಲಿಸಿದಂಥ ಚಿತ್ರ-ವಿಚಿತ್ರ ವಿನ್ಯಾಸಗಳಿಂದ ಕಂಗೊಳಿಸಿದ್ದವು. ಕೆಂಪು, ಹಳದಿ ಮಿಶ್ರಣದ ಶಿಖರ, ಗೋಪುರ, ಕೊಂಬು, ಕಹಳೆ, ಅಣಬೆ ಮತ್ತು ಸುರುಳಿ ಹೊಳೆಗೆಯಂಥ ಜಟಿಲ ರೂಪದಲ್ಲಿ ಆಕರ್ಷಕವಾಗಿದ್ದವು. ನಮ್ಮ ಬಾದಾಮಿ, ಗುಹಾ ದೇವಾಲಯದ ಶಿಲ್ಪ ಕಲಾಕೃತಿಗಳನ್ನು ಅವು ಹೋಲುತ್ತಿದ್ದವು. ಅವು ಕೆಂಪು ಕಣಶಿಲೆಗಳಲ್ಲಿ ಒಡಮೂಡಿದಂಥವು. ಗಾಳಿ, ಮಳೆ, ಬಿಸಿಲು ಮತ್ತು ನದಿಯ ಶಿಥಿಲೀಕರಣದಿಂದ ಲಕ್ಷಾಂತರ ವರ್ಷಗಳಲ್ಲಿ ರೂಪುಗೊಂಡಂಥವು.



ಕೊಲ್ಸೆ ಸರೋವರದ ವಿಹಂಗಮ ನೋಟ



ಕೇಂಡಿ ಸರೋವರ

ಕೆಂಪು ಬಣ್ಣದ ಕಣಿವೆ (Red Canyon), ಹಳದಿ ಬಣ್ಣದ ಕಣಿವೆ (Yellow Canyon), ಕಪ್ಪು ಬಣ್ಣದ ಕಣಿವೆ (Black Canyon), ಚಂದ್ರಾಕಾರ ಕಣಿವೆ (Moon Canyon) ಹಾಗೂ ಟಮಿರ್ಲಿಕ್ ಕಣಿವೆ, ಬಿಷ್ತಮಾರ್ಕ್ ಹೀಗೆ ನಾನಾ ನಮೂನೆಯ ಚಿಕ್ಕ-ದೊಡ್ಡ ಕಣಿವೆಗಳು ಗಮನ ಸೆಳೆಯುತ್ತವೆ. 20 ಕಿಲೋಮೀಟರ್ ದೂರದಲ್ಲಿ ಕಣಿವೆಯ ನೆರಳಿನಲ್ಲಿ ಸೊಗಾಡಿಯನ್ ಆ್ಯಷ್ ಎಂಬ ರೆಲಿಕ್ ಅರಣ್ಯವಿದೆ. ಅಲ್ಲಿ ವಿಲ್ಲೋ ಮರ, ಪಾಪ್ಲರ್ ಮರ, ಬಾರ್ಬೆರಿಯನ್ ಮರ ಹಾಗೂ ಬೂದಿ ಮರಗಳು ವಿಶಿಷ್ಟವಾಗಿವೆ. ಎಲ್ಲವೂ ನೆರಳಿನಲ್ಲಿ ಹಿಮಯುಗದ ಪಳೆಯುಳಿಕೆಯಂತೆ ರೆಂಬೆ-ಕೊಂಬೆ ಕಳೆದುಕೊಂಡು ನಿಂತಿವೆ. ಕೆಲವು ಕಡೆ ಬಿಸಿನೀರಿನ ಬುಗ್ಗೆಗಳಿವೆ. ಹೀಗೆ ಚರ್ಯನ್ ಕಣಿವೆಯನ್ನು ದಿನಗಟ್ಟಲೆ ನೋಡಬಹುದು. ನಾವು ಮಾತ್ರ ಮೂರ್ನಾಲ್ಕು ಗಂಟೆ ಕಳೆದು ಚರ್ಯನ್ ನದಿಯ ಸಖ್ಯವನ್ನು ಸವಿದು ನೂರು ಕಿಲೋಮೀಟರ್ ದೂರದ ಸತಿ ಗ್ರಾಮಕ್ಕೆ ತೆರಳಿದೆವು.

ಚಿಲಿಕ್ ನದಿ ದಡದ ಹಸಿರು ಬೆಟ್ಟ ಶ್ರೇಣಿಗಳ ಪುಟ್ಟ ಊರೇ ಸತಿ. ಹತ್ತಿರದ ಸರೋವರಕ್ಕೆ ಭೇಟಿ ನೀಡುವವರು ಇಲ್ಲಿ ಒಂದು ರಾತ್ರಿ ತಂಗುತ್ತಾರೆ. ನಾವೂ ತಂಗಿದ್ದೆವು. ವಿಶೇಷವೆಂದರೆ ಇಲ್ಲಿ ಎಲ್ಲಾ ಕಡೆ ಕುದುರೆ ಮಾಂಸದ ಖಾದ್ಯ ಸಿಗುತ್ತದೆ. ಅದಕ್ಕೆ ಹೆದರಿ ನಾವು 'ರೆಡಿ ಟು ಈಟ್' ತಯಾರಿಸಿಕೊಳ್ಳುತ್ತಿದ್ದೆವು. ಬಗೆಬಗೆಯ ಹಣ್ಣು ಎಲ್ಲಾ ಕಡೆ ಸಿಗುತ್ತಿದ್ದರಿಂದ ಅವುಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆವು. ಬೆಳಿಗ್ಗೆ ಸತಿಯಿಂದ ಗುರ್ಮಿಟ್ ಕಣಿವೆ ದಾಟಿದಾಗ ಪ್ರವೇಶದ್ವಾರದಲ್ಲಿ ಶುಲ್ಕ ಪಾವತಿಸಿ ಏರು ಇಳಿವುಗಳ ಕಣಿವೆ ದಾರಿಯಲ್ಲಿ ಸಾಗಿದೆವು. ಎಲ್ಲಾ ಕಡೆ ಸ್ವಚ್ಛತೆ ಎದ್ದು ಕಾಣುತ್ತಿತ್ತು. ಕಜಾಕಸ್ತಾನದ ಸ್ವಿಸ್ ಸರೋವರವೆಂದೇ ಹೆಸರಾದ ಕೋಲ್ಸೆ ಸರೋವರದ ರಾಷ್ಟ್ರೀಯ ಉದ್ಯಾನವದು. ವಿಶ್ವ ಪಾರಂಪರಿಕ ತಾಣವೂ ಹೌದು. ಹಾಗಾಗಿ ಎಲ್ಲಾ ಕಡೆ ಬಿಗಿ ಭದ್ರತೆ, ಪೊಲೀಸ್ ಪಹರೆ, ರಕ್ಷಣೆ, ಶಿಸ್ತು ಎದ್ದು ಕಾಣುತ್ತಿದ್ದವು. ಕೊಲ್ಸೆ ಸರೋವರ ಹಸಿರು ಪರಿಸರದ ನಡುವೆ ಮುಕುಟಮಣಿಯಂತೆ ಶೋಭಿಸುತ್ತಿತ್ತು.

ಕೊಲ್ಸೆ ಸರೋವರ ಟಿಯಾನ್ ಶ್ಯಾನ್ ಪರ್ವತದ ಹವಳ. ಏಕೆಂದರೆ ಕೊಲ್ಸೆ ನದಿ ಟಿಯಾನ್ ಶ್ಯಾನ್ ಪರ್ವತದ ಹಿಮದ ಗುಹೆಯಲ್ಲಿ ಹುಟ್ಟಿ ಹರಿದು ಬರುತ್ತದೆ. ಹಸಿರು ನೀಲಿ ಮಿಶ್ರಣದ ಸರೋವರ ಪ್ರವಾಸಿಗರನ್ನು ಚುಂಬಕದಂತೆ ಸೆಳೆಯುತ್ತದೆ. ಸರೋವರ ಎಂದೂ ಬತ್ತುವುದಿಲ್ಲ. ನೀರು ಹಳ್ಳವಾಗಿ ಮುಂದೆ ಹರಿದು ಹೋಗುವುದರಿಂದ ಅದು ಶುದ್ಧವಾಗಿ ಗಮನ ಸೆಳೆಯುತ್ತದೆ. ಕಣಿವೆಯ ದಡ ಮುಟ್ಟಲು ಮೆಟ್ಟಿಲುಗಳಿವೆ. ಸರೋವರದ ಸುತ್ತ ಚಾರಣ ಮಾಡಲು, ಕುದುರೆ ಸವಾರಿ ಮಾಡಲು ವ್ಯವಸ್ಥಿತ ದಾರಿಗಳಿವೆ. ಒಂದು ಕಿಲೋಮೀಟರ್ ಉದ್ದ, ಅರ್ಧ ಕಿಲೋಮೀಟರ್ ಅಗಲ ಹಾಗೂ 80 ಮೀಟರ್ ಆಳದ ಕೊಲ್ಸೆ ಸರೋವರ ಸದಾ ಜನಜಂಗುಳಿಯಿಂದ ತುಂಬಿರುತ್ತದೆ. ಬೋಟಿಂಗ್, ಕಯಾಕಿಂಗ್ ಅಲ್ಲಿಯ ವಿಶಿಷ್ಟ ಅನುಭವಗಳು. ಶಂಕುಧಾರಿ ವೃಕ್ಷಗಳ ಹಿನ್ನೆಲೆಯಿಂದ ಕೂಡಿದ ಕೊಲ್ಸೆ ಸರೋವರದಿಂದ ಕಿರ್ಗಿಸ್ತಾನ ಗಡಿ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿದೆ. ಚಳಿಗಾಲದಲ್ಲಿ ಇಲ್ಲಿಗೆ ಕಾಲಿಟ್ಟರೆ ಕೊಲ್ಸೆ ಸರೋವರ ಹೆಪ್ಪುಗಟ್ಟಿದ ಸ್ಕೇಟಿಂಗ್ ಕ್ರೀಡಾಂಗಣವಾಗಿರುತ್ತದೆ.

ನಾವು ನೋಡಲು ಹೊರಟ ಮತ್ತೊಂದು ಸರೋವರ ಕೇಂಡಿ. ಕಜಕ್ ಭಾಷೆಯಲ್ಲಿ ಕೇಂಡಿ ಎಂದರೆ ಭೂ ಕುಸಿತ. 1911ರಲ್ಲಿ ಕೆಬಿನ್ ಎಂಬ ಭೂಕಂಪ ಸಂಭವಿಸಿ, ಕಾಡಿನ ನಡುವೆ ಬೋಗುಣಿಯಂಥ ಸರೋವರ ಸೃಷ್ಟಿಯಾಯಿತು. ಕಾಲಕ್ರಮೇಣ ಅದುವೇ ಮಳೆನೀರಿನಿಂದ ತುಂಬಿಕೊಂಡ ಕೇಂಡಿ ಸರೋವರ. ಸತಿ ಹಳ್ಳಿಯ ಪಶ್ಚಿಮದಲ್ಲಿ ಕೋಲ್ಸೆ ಸರೋವರವಿದ್ದರೆ, ಪೂರ್ವದಲ್ಲಿ ಕೇಂಡಿ ಸರೋವರವಿದೆ. ಸತಿಯಿಂದ ಒಂದು ಕಿಲೋಮೀಟರ್ ಬೆಟ್ಟ ಹತ್ತಿ ಕೆಳಗಿಳಿದರೆ ಸುಂದರ ಕೇಂಡಿ ಕಣಿವೆ ಕಾಣಿಸುತ್ತದೆ. ಕಲ್ಲು, ಮಣ್ಣು, ಕೆಸರು, ಗುಂಡಿ, ಗುದುಕಲ, ಹಳ್ಳಕೊಳ್ಳದ ಕೊರಕಲಿನ ದಾರಿಯಂತೂ ಪಯಣಿಸಲು ಹೈರಾಣ ಮಾಡುತ್ತದೆ. ಸಾಗುವಾಗ ಕೆಳಗೆ ಬೀಳುತ್ತೇವೆಯೋ ಎಂಬ ಭಯ. ಅಲ್ಲಿ ಖಾಸಗಿ ವಾಹನಗಳಿಗೆ ಮಾತ್ರ ಪ್ರವೇಶ. ಅಲ್ಲಿ ಪ್ರವೇಶ ಶುಲ್ಕ ನೀಡಿದರೆ ಮೊದಲ ನಿಲ್ದಾಣಕ್ಕೆ ಹೋಗಿ ವಾಪಸ್ ಬರಬಹುದು. ಅಲ್ಲಿಗೆ ತೆರಳಿದಾಗ ಮಟಮಟ ಮಧ್ಯಾಹ್ನ ಒಂದು ಗಂಟೆ. ಮೊದಲ ನಿಲ್ದಾಣದಲ್ಲಿ ಇಳಿದು ನಾವು ಚಾರಣ ಮಾಡಿದೆವು.

ಕಿರಿದಾದ ಕಾಡಿನ ದಾರಿ ನದಿಯ ದಡದುದ್ದಕ್ಕೂ ಅನನ್ಯ ಅನುಭವ ನೀಡಿತ್ತು. ಜೊತೆಗೆ ಚಾರಣಿಗರೂ ಇದ್ದುದರಿಂದ ಯಾವುದೇ ಭಯವಿರಲಿಲ್ಲ. ಅದೊಂದು ಪರಿಶುದ್ಧ ನೀರಿನ ದರ್ಪಣ ಸರೋವರ. ನೀರಿನಲ್ಲಿ ನೂರು ವರ್ಷಗಳ ಹಿಂದೆ ಮುಳುಗಿ ಹೋದ ಸ್ಪ್ರೂಸ್ ಮರಗಳ ಬೆಳ್ಳನೆಯ ಕಾಂಡಗಳು ಆಕರ್ಷಕವಾಗಿದ್ದವು. ಸುತ್ತಲೂ ಸ್ಪ್ರೂಸ್ ಶಂಕಧಾರಿ ವೃಕ್ಷಗಳು ಹಚ್ಚಹಸಿರಾಗಿ ಮೆರಗು ನೀಡಿದ್ದವು. ಬಿಸಿಲಿನ ಪ್ರಖರತೆಗೆ ನೀರು ಹಸಿರು, ನೀಲಿ, ಬೂದು ಬಣ್ಣದಲ್ಲಿ ಕ್ಷಣಕ್ಷಣವೂ ಬದಲಾಗುತ್ತಿತ್ತು. ಸರೋವರದ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳುವುದು, ರೀಲ್ಸ್ ಮಾಡುವುದು ಅನನ್ಯ ಅನುಭವ. ಸ್ಥಳೀಯರಿಗೆ ಇದೊಂದು ಭೂತ ಸರೋವರ. ಜಗತ್ತಿನಲ್ಲಿ ಮುಳುಗಿದ ಕಾಡುಗಳ ಸುಣ್ಣದ ಕಲ್ಲಿನ ನೀರಿನ ಸರೋವರಗಳು ಅಪರೂಪ. ಅಂಥದ್ದೊಂದು ಸರೋವರವನ್ನು ನೋಡಿದ್ದು ಹೆಮ್ಮೆಯ ಸಂಗತಿ. ❖

ಹಿಂದಿ ನೆಲದಲ್ಲಿ ಕನ್ನಡದ ಹೆಮ್ಮರ



ಸಂಘದಲ್ಲಿ ನಡೆದಿದ್ದ ನಾಟಕವೊಂದರ ಝಲಕ್

8ನೇ ಪುಟದಿಂದ...

25 ಮಂದಿ ಗಾಂಧೀಜಿಯ ಭಾವಚಿತ್ರದೊಡನೆ ಪಾರ್ಲಿಮೆಂಟ್ ರಸ್ತೆಯಲ್ಲಿ ಮೆರವಣಿಗೆ ಹೋಗಿದ್ದೇ ಕನ್ನಡಿಗರ ಮೊದಲ ಸಾಂಘಿಕ ಚಟುವಟಿಕೆ. ಆರಂಭದಲ್ಲಿ ಮನೆ ಮನೆಗಳಲ್ಲಿ ಸಂಘದ ಚಟುವಟಿಕೆ ನಡೆಯುತ್ತಿತ್ತು. ಸಂಘವು ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟನೆಯಾಗಿ ನೋಂದಣಿಯಾಗಿದ್ದು 1953ರಲ್ಲಿ. ಕೆ.ಸಿ. ರೆಡ್ಡಿ ಅವರು ಕೇಂದ್ರ ಸಚಿವರಾಗಿದ್ದ ಸಂದರ್ಭದಲ್ಲಿ ಲೋಧಿ ಎಸ್ಟೇಟ್‌ನಲ್ಲಿ ನಿವೇಶನ ಮಂಜೂರಾಯಿತು. ಈ ಜಾಗದಲ್ಲಿ ಕನ್ನಡ ಶಾಲೆ ತಲೆ ಎತ್ತಿ ನಿಂತಿತು. ಸಂಘಕ್ಕೆ ಇನ್ನೊಂದು ನಿವೇಶನ ಪಡೆಯುವ ಪ್ರಯತ್ನ ನಡೆಸಿದ್ದರೂ ಯಶಸ್ಸು ಸಿಕ್ಕಿರಲಿಲ್ಲ. ಕರ್ನಾಟಕದಿಂದ ಲೋಕಸಭೆಗೆ ಅತಿರಥ ಮಹಾರಥ ರಾಜಕಾರಣಿಗಳು ಆಯ್ಕೆಯಾಗಿ ಬಂದರೂ ಸಂಘಕ್ಕೆ ಹೆಚ್ಚಿನ ನೆರವು ಸಿಗಲಿಲ್ಲ. ಇಂದಿರಾ ಗಾಂಧಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಸರೋಜಿನಿ ಮಹಿಷಿ ಅವರು ಕಷ್ಟಪಟ್ಟು ಸಂಘಕ್ಕೆ ಆರ್.ಕೆ.ಪುರಂನಲ್ಲಿ ಇನ್ನೊಂದು ನಿವೇಶನ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು.

1980ರ ಸುಮಾರಿಗೆ ದೆಹಲಿಯಲ್ಲಿ ಕರ್ನಾಟಕ ಸಂಘ, ಕನ್ನಡ ಶಿಕ್ಷಣ ಸಂಸ್ಥೆ, ಕನ್ನಡ ಫಿಲಂ ಸೊಸೈಟಿ ಇದ್ದರೂ ಕನ್ನಡಿಗರು ಸಂಘಟಿತರಾಗಿರಲಿಲ್ಲ. ಕರ್ನಾಟಕ ಸಂಘ ಸ್ವಂತ ಕಟ್ಟಡ ಹೊಂದಿದ್ದರೂ ಸದಸ್ಯರ ಸಂಖ್ಯೆ ಕಡಿಮೆ ಇತ್ತು. ಕನ್ನಡ ಸಾಹಿತ್ಯ ಪರಿಷತ್ ಜಿ.ಪಿ.ರಾಜರತ್ನಂ ಅಧ್ಯಕ್ಷತೆಯಲ್ಲಿ 1978ರಲ್ಲಿ 50ನೇ ಅಖಿಲ ಭಾರತ ಸುವರ್ಣ ಸಾಹಿತ್ಯ ಸಮ್ಮೇಳನ ದೆಹಲಿಯಲ್ಲಿ ನಡೆಸಿದ ಬಳಿಕ ಇಲ್ಲಿ ಕನ್ನಡ ಚಟುವಟಿಕೆಗಳಿಗೆ ಹೊಸ ಚೈತನ್ಯ ಬಂತು. ಈ ನಡುವೆ, ಸರೋಜಿನಿ ಮಹಿಷಿ ಅವರು ಸಂಘವನ್ನು ಟ್ರಸ್ಟ್ ಮಾಡಲು ಹೊರಟಾಗ ಸದಸ್ಯರಿಂದ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಈ ಸಂಘರ್ಷವು ನ್ಯಾಯಾಲಯದ ಮೆಟ್ಟಿಲು ಏರಿತು. ಸಂಘದ ಸಂವಿಧಾನ ರಚನೆಯಾಗಿ ಚಾರಿಟೆಬಲ್ ಟ್ರಸ್ಟ್ ಮಾನ್ಯತೆ ಸಿಕ್ಕಿತು. ಆ ಬಳಿಕ ಕರ್ನಾಟಕ ಸರ್ಕಾರದಿಂದ ಅನುದಾನ ಸಿಗಲು ಆರಂಭವಾಯಿತು. ಆದರೂ, ಸಂಘದ ಸದಸ್ಯರ ಸಂಖ್ಯೆ 300–400ರ ಆಜುಬಾಜಿನಲ್ಲೇ ಇತ್ತು. ಸಂಘಕ್ಕೆ ಸದಸ್ಯರನ್ನು ಸೇರಿಸಿಕೊಳ್ಳಲು ದೆಹಲಿ ಕರ್ನಾಟಕ ಸಂಘ ಸಂಘರ್ಷ ಸಮಿತಿ ಹೆಸರಿನಲ್ಲಿ ಹೋರಾಟಗಳು ನಡೆದವು. ಹೆಚ್ಚು ಹೆಚ್ಚು ಕನ್ನಡಿಗರಿಗೆ ಸಂಘದ ಸದಸ್ಯತ್ವ ದೊರಕಿತು.

ಸಾಂಸ್ಕೃತಿಕ ಸಮುಚ್ಚಯ

ಈ ನಡುವೆ ಸಂಘಕ್ಕೊಂದು ಸಾಂಸ್ಕೃತಿಕ ಸಮುಚ್ಚಯ ನಿರ್ಮಿಸುವ ಕನಸು ದೆಹಲಿ ಕನ್ನಡಿಗರಲ್ಲಿ ಕುಡಿಯೊಡೆದಿತ್ತು. ಸುಮಾರು ₹7 ಕೋಟಿ ವೆಚ್ಚದ ಕಟ್ಟಡಕ್ಕೆ ನೀಲಿ ನಕ್ಷೆ ತಯಾರಿಸಿ ಅದಕ್ಕಿದ್ದ ಆರಂಭಿಕ ತೊಡಕುಗಳನ್ನು ಆಗಿನ ಅಧ್ಯಕ್ಷರು ನಿವಾರಿಸಿ ಕಟ್ಟಡ ಕೆಲಸ ಆರಂಭಿಸಿದ್ದರು. 2004ರಲ್ಲಿ ಈ ಕೆಲಸ ಚುರುಕು ಪಡೆದುಕೊಂಡಿತು. ಆಗ ಅಧ್ಯಕ್ಷರಾಗಿದ್ದ ಪುರುಷೋತ್ತಮ ಬಿಳಿಮಲೆ ಅವರು ಬ್ಯಾಂಕಿನಿಂದ ಸಾಲ, ಸರ್ಕಾರದಿಂದ ಅನುದಾನ ಹಾಗೂ ಸಾರ್ವಜನಿಕರಿಂದ ದೇಣಿಗೆ... ಹೀಗೆ ಮೂರು ರೀತಿಯ ಕಾರ್ಯಯೋಜನೆ ರೂಪಿಸಿದರು. 'ಪ್ರತಿಯೊಬ್ಬ ಕನ್ನಡಿಗನೂ ಒಂದು ರೂಪಾಯಿಯನ್ನಾದರೂ ದೇಣಿಗೆ ನೀಡಬೇಕು. ಕಟ್ಟಡದ ಒಂದೊಂದು ಇಟ್ಟಿಗೆಯಲ್ಲಿಯೂ ನೀವಿರಬೇಕು' ಎಂದು ಕನ್ನಡಿಗರಲ್ಲಿ ಮನವಿ ಮಾಡಿದರು. ಹೀಗೆ ಹೇಳುತ್ತಾ ಜೋಳಿಗೆ ಹಿಡಿದು ಹೊರಟಾಗ ಸಂಗ್ರಹವಾಗಿದ್ದು ₹2 ಕೋಟಿಯಷ್ಟು ದೊಡ್ಡ ಮೊತ್ತ. ಸರ್ಕಾರವು ₹1.75 ಕೋಟಿ ನೀಡಿತು. ದಾನಿಗಳು ನೆರವು ನೀಡಿದರು. ಇಷ್ಟೆಲ್ಲ ನೆರವಿನ ನಡುವೆಯೂ, ರಾಜ್ಯದ ಸಂಸದರು ತೋರಿದ್ದು ನಿರ್ಲಕ್ಷ್ಯವೇ. ರಾಜ್ಯಸಭಾ ಸದಸ್ಯರಾಗಿದ್ದ ಕಸ್ತೂರಿ ರಂಗನ್ ಹೊರತುಪಡಿಸಿ ಉಳಿದ ಸಂಸದರ ಕಡೆಯಿಂದ ನಯಾಪೈಸೆ ನೆರವು ಸಿಗಲಿಲ್ಲ. 2005ರಲ್ಲಿ ಹೊಸ ಸಾಂಸ್ಕೃತಿಕ ಸಮುಚ್ಚಯ ಲೋಕಾರ್ಪಣೆಗೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಹಿತ್ಯ ಸಂವಾದ, ವಿಚಾರಸಂಕಿರಣಗಳು ಮರು ಆರಂಭಗೊಂಡು ಕನ್ನಡ ಸಾಹಿತ್ಯ ಯಾತ್ರೆಗೆ ಹೊಸ ಆಯಾಮ ದೊರಕಿತು. ಬೇರೆ ಭಾಷಿಕರು ಅಸೂಯೆ ಪಡುವ ರೀತಿಯಲ್ಲಿ ಸಂಘದ ಚಟುವಟಿಕೆಗಳು ನಡೆಯುತ್ತಿವೆ.

ಕನ್ನಡಿಗರು, ಕನ್ನಡದ ಕೆಲಸಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಸಂಘವು ಪ್ರತಿವರ್ಷ ವಿಶಿಷ್ಟ ಕನ್ನಡಿಗ ಪ್ರಶಸ್ತಿ, ಸಾಹಿತ್ಯ ಕ್ಷೇತ್ರದ ಸಾಧಕರಿಗೆ ಡಾ. ಶಿವರಾಮ ಕಾರಂತ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ, ಕನ್ನಡ ಭಾರತಿ ರಂಗ ಪ್ರಶಸ್ತಿ, ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಿದೆ.

ಕನ್ನಡ ನೆಲದಿಂದ ದೂರವಿರುವ ದೆಹಲಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸೊಗಡು ಪಸರಿಸುವಂತೆ ಮಾಡುತ್ತಿರುವ ಕೆಲಸ ಗಮನಾರ್ಹ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಜಾಣಪದ ಆಟ

1.ಇಲ್ಲಿ ಕೊಟ್ಟಿರುವ ಪದಗಳಿಗೆ ಒತ್ತಕ್ಷರ ಪಟ್ಟಿಯಿಂದ ಸೂಕ್ತವಾದ ಒಂದಕ್ಷರ ಆರಿಸಿ ಮಧ್ಯದಲ್ಲಿ ತುಂಬಿ ಮೂರಕ್ಷರಗಳ ಪದ ಮಾಡಿ.

1	ಹೆ		ಣ	6	ಮ		ಣೆ
2	ಬೆ		ಳ್ಳಿ	7	ಚಿ		ರ
3	ಹು		ರಿ	8	ಕ		ಲೆ
4	ಗ		ರಿ	9	ಅ		ರಿ
5	ಮ		ನೆ	10	ಇ		ಲಿ

ಒತ್ತಕ್ಷರ ಪಟ್ಟಿ				
ನ್ನ	ಜ್ಜ	ಗ್ಗ	ದ್ದಾ	ತ್ತ
ಚ್ಚ	ತ್ತಾ	ತ್ತ	ಳ್ಳ	ದ್ದ

2.ಇಲ್ಲಿ ಕೊಟ್ಟಿರುವ 'ಪರ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಪ	ರ			=
2	ಪ	ರ			=
3	ಪ	ರ			=
4	ಪ	ರ			=
5	ಪ	ರ			=


ಅಕ್ಷರ ಪಟ್ಟಿ				
ಮಾ	ದಾ	ಣು	ಮಾ	ಕೀ
ತ್ಮ	ಯ	ನ್ನ	ಮಾ	ಟ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಜಾದೂಗಾರನೊಬ್ಬ ಪ್ರದರ್ಶನ ನೀಡುತ್ತಿದ್ದ. ಆತನ ಸುತ್ತ ನೂರಾರು ಜನರು ಆತ ಪ್ರದರ್ಶಿಸುವ ಜಾದೂ ನೋಡಲು ಕುತೂಹಲದಿಂದ ಕಾಯುತ್ತಿದ್ದರು. ಬೋನಿನ ಒಳಗಡೆಯಿಂದ ಇಲಿಯೊಂದನ್ನು ಹೊರತೆಗೆದ ಆ ಜಾದೂಗಾರ ಅದನ್ನು ಬುಟ್ಟಿಯೊಳಗೆ ಹಾಕಿ ಮಾಯ ಮಾಡುವುದಾಗಿ ತಿಳಿಸಿದ. ಅದರಂತೆ ಬುಟ್ಟಿಯೊಳಗೆ ಹಾಕಿ ಅಬ್ರಕಡಾಬ್ರ ಗಿಲಿಗಿಲಿ ಛೂ..ಎಂದ. ಬುಟ್ಟಿ ತೆಗೆದು ನೋಡಿದಾಗ ಆ ಇಲಿ ಭೂಮಿಯೊಳಗೇ ಗುಂಡಿ ತೆಗೆದು ತಪ್ಪಿಸಿಕೊಂಡಿತ್ತು. ಇದನ್ನು ಕಂಡ ಆ ಜಾದೂಗಾರನೇ ಅವಾಕ್ಕಾದ.

ಮಾಯವಾದ ಇಲಿ!

majakoora@prajavani.co.in



ಪದ ಸರಪಳಿ

ಇಲ್ಲಿ ಎರಡಕ್ಷರಗಳ ಪದ ಸರಪಳಿ ಕೊಡಲಾಗಿದೆ. ಆರಂಭದಿಂದ 1 ಮತ್ತು 2ನೇ ಅಕ್ಷರ ಕೂಡಿಸಿ ಓದಿ, ನಂತರ ಎರಡು ಮತ್ತು ಮೂರನೇ ಅಕ್ಷರ ಕೂಡಿಸಿ ಓದಿ. ಹೀಗೆ ಕ್ರಮವಾಗಿ ಆರಂಭದಿಂದ ಎರಡೆರಡು ಅಕ್ಷರ ಸೇರಿಸಿ ಓದಿ ಸಂತೋಷ ಪಡಿ.

ಬ + ಕ + ಸ + ರ + ಮಾ + ರ + ಜ + ನ +
ವ + ರ + ಸ + ಲ + ಕ್ಷ + ಮಾ + ಯ + ವ +
ಶ + ಕ + ದ + ಯ + ಮ + ಗ + ಜ + ರ +
ವ + ಯ + ತಿ + ಲ + ವ + ಧ + ನ + ಗ +
ಯಾ + ನ + ಯ + ಕ್ಷ + ಯ + ಶ + ರ + ಥ +
ರ + ವಾ + ಸ + ಭಾ + ಸ + ಮ + ರ + ದ +
ನ + ಸು + ಖ + ಗ + ತ + ಪ + ದ + ರ +
ಹ + ದ + ಶ + ಮ + ದ + ಲ + ಕ್ಷ + ರ +
ವಿ + ಸ + ಮ + ನೆ + ಪ + ರ + ಕ್ಷಾ + ಮ +
ತ + ಮ + ಗು + ದ + ಕ್ಷ + ಣ

ಇಂಥ ಬೇರೆ ಬೇರೆ ಅಕ್ಷರಗಳಿಂದ ಪ್ರಾರಂಭಿಸಿ ನೀವೂ ಪದಮಾಲೆ ರಚಿಸಿ, ಖುಷಿ ಪಡಿ. ಆರಂಭದ ಕಲಿಕೆಯಲ್ಲಿ ಸಣ್ಣ ಮಕ್ಕಳಿಗೆ ಹೀಗೆ ಓದಿಸಿದರೆ ಆಟವಾಡುತ್ತಲೇ ಮೂಲಾಕ್ಷರ ಕಲಿಯುತ್ತಾರೆ.

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಮೋGನ ಇಂಗ್ಲಿಷ್



ಸ್ವರಲೋಪ ಸರಿಪಡಿಸಿ

ಇಲ್ಲಿ ಕೊಟ್ಟಿರುವ ಪದಗಳಲ್ಲಿನ ಸ್ವರಗಳು ಲೋಪವಾಗಿವೆ. ನೀವು ಸೂಕ್ತವಾದ ಎರಡು ಸ್ವರಾಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

1	F		C		S	6	R		V		R
2	S		P		R	7	B		N		S
3	C		M		L	8	W		M		N
4	R		F		R	9	S		V		N
5	L		V		L	10	R		G		L

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಕಾಡು	+	ಗೂಗೆ	+	ಯ	=	
2	ವೀರ	+	ಕಣ	+	ನ	=	
3	ನಾನು	+	ರಾಜ	+	ಗಿ	=	
4	ನಲಿ	+	ಕತೆ	+	ಖಾ	=	
5	ಲವ	+	ಭಾರಿ	+	ಹ	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ	8.ಕರಂಡಕ	5.ಸೋಗಲಾಡಿ	13.ಹಗರಣ
1.ಕರ್ನಾಟಕ	9.ಕನ್ನಡಕಕ	6.ಸವಲತ್ತು	14.ಯಜಮಾನ
2.ಕರಣಿಕ	10.ಕರ್ಕೋಟಕ	7.ಹರದಾಡಿ	15.ಜನವರಿ
3.ಕಥಾನಕ	ವರ್ಡ್‌ಕಪ್	8.ಅಮಾನತ್ತು	16.ಕರಾಮತ್ತು
4.ಕಲಾತ್ಮಕ	1.ನಲವತ್ತು	9.ತಾರತಮ್ಯ	17.ವಿನಾಯಿತಿ
5.ಕಶೇರಕ	2.ಮಸಲತ್ತು	10.ಹಳೆಎತ್ತು	18.ಅನಾದರ
6.ಕರಟಕ	3.ಹರಕತ್ತು	11.ಆಪಾದನೆ	19.ಜಾಗರಣೆ
7.ಕರ್ಕಾಟಕ	4.ಬಡಕಲು	12.ಕಸರತ್ತು	20.ಕಸಿವಿಸಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಕ್ಷರ ಎಂ.ಎಸ್.
ಮೈಸೂರು



ಚಿರಸ್ವಿ ಚಿರೇಂದ್ರ
ಬೆಂಗಳೂರು



ಕನ್ನಿಕ
ದಾವಣಗೆರೆ



ತೇಜಸ್ ಪುರುಷೋತ್ತಮ್ ಪೂಜಾರ್, ಯಲಬುರ್ಗಾ



ತನಿಷ್ಕಾ ವಿ.
ಹಾಸನ



ಕೆ.ರುಕ್ಸಾನ
ಸಿಂಧನೂರು

ಚಾರಿತ್ರಿಕ ಕಿರೀಟಕ್ಕಾಗಿ ಹಣಾಹಣಿ ಇಂದು

ಮಹಿಳಾ ವಿಶ್ವಕಪ್ ಫೈನಲ್ ● ಚೊಚ್ಚಲ ಟ್ರೋಫಿಗಾಗಿ ಭಾರತ–ದಕ್ಷಿಣ ಆಫ್ರಿಕಾ ಕಣ್ಣು

ನವಿ ಮುಂಬೈ (ಪಿಟಿಐ): ಕಪಿಲ್ ದೇವ್ ನಾಯಕತ್ವದ ಭಾರತ ತಂಡವು 1983ರಲ್ಲಿ ಮೊದಲ ಬಾರಿಗೆ ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿತ್ತು. ಮಹಿಳಾ ಕ್ರಿಕೆಟ್‌ನಲ್ಲಿ ಅಂಥದ್ದೊಂದು ಐತಿಹಾಸಿಕ ಸಾಧನೆಯನ್ನು ಮಾಡಲು ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡ ತುದಿಗಾಲಿನಲ್ಲಿ ನಿಂತಿದೆ.

ನವಿ ಮುಂಬೈನ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ ಕಿರೀಟ ಧರಿಸುವ ಛಲದಲ್ಲಿ ಭಾರತವಿದೆ.

ದಕ್ಷಿಣ ಆಫ್ರಿಕಾ ತಂಡ ಕೂಡ ಇದುವರೆಗೆ ವಿಶ್ವಕಪ್ ಗೆದ್ದಿಲ್ಲ. ಆದ್ದರಿಂದ ಲಾರಾ ವೊಲ್ವಾರ್ಟ್ ಬಳಗವೂ ಚಾರಿತ್ರಿಕ ಸಾಧನೆ ಮಾಡುವತ್ತ ಚಿತ್ತ ನೆಟ್ಟಿದೆ. ಅದರಿಂದಾಗಿಯೇ, 13ನೇ ಆವೃತ್ತಿಯ ವಿಶ್ವಕಪ್ ಫೈನಲ್ ತೀವ್ರ ಕುತೂಹಲ ಕೆರಳಿಸಿದೆ.

ಉಭಯ ತಂಡಗಳೂ ಈ ಟೂರ್ನಿಯಲ್ಲಿ ಕಠಿಣ ಸವಾಲುಗಳನ್ನು ಗೆದ್ದು ಫೈನಲ್ ತಲುಪಿವೆ.

ಒಂದೊಮ್ಮೆ ಕೌರ್ ಬಳಗವು ಇಲ್ಲಿ ಪ್ರಶಸ್ತಿ ಜಯಿಸಿದರೆ, ಭಾರತದಲ್ಲಿ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ವೇಗ ದೊರೆಯಲಿದೆ. ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಕೆಟ್‌ನತ್ತ ವಾಲುವ ಸಾಧ್ಯತೆಗಳಿವೆ. ಮೂರು ವರ್ಷಗಳಿಂದ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಗಿಂತಲೂ ವಿಶ್ವಕಪ್ ವಿಜಯವು ಹೆಚ್ಚು ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ.

ಆದರೆ ಆತಿಥೇಯ ತಂಡವು ಮೂರು ದಿನಗಳ ಹಿಂದೆ ಸೆಮಿಫೈನಲ್‌ನಲ್ಲಿ ಸಾಧಿಸಿದ ಅಮೋಘ ಜಯದ ಭಾವನಾತ್ಮಕ ಸಂಭ್ರಮದ ಗುಂಗಿನಿಂದ ತ್ವರಿತವಾಗಿ ಹೊರಬರಬೇಕಿದೆ. ಏಳು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ಎದುರಿನ ಆ ಜಯಕ್ಕೆ ಜೆಮಿಮಾ ರಾಡ್ರಿಗಸ್ (ಅಜೇಯ 127) ಅವರ ಅವಿಸ್ಮರಣೀಯ ಬ್ಯಾಟಿಂಗ್ ಮತ್ತು ನಾಯಕಿ ಕೌರ್ ಅವರ 89 ರನ್‌ಗಳ ಆಟವು ಜಯಕ್ಕೆ ಕಾರಣವಾಗಿದ್ದವು.

ಭಾರತ ಮಹಿಳಾ ತಂಡವು 2005ರ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿತ್ತು. 2017ರ ಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಸೋತಾಗ ಹರ್ಮನ್‌ಪ್ರೀತ್ ಕೂಡ ತಂಡದಲ್ಲಿದ್ದರು.

ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್‌ನಲ್ಲಿ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ವೈಫಲ್ಯ ಅನುಭವಿಸಿದ್ದರು. ಈ ಟೂರ್ನಿಯಲ್ಲಿ ಸ್ಮೃತಿ 385 ರನ್ ಗಳಿಸಿದ್ದಾರೆ. ಸೆಮಿಫೈನಲ್‌ನಲ್ಲಿಯೂ ಅವರಿಂದ ದೊಡ್ಡ ಇನಿಂಗ್ಸ್ ನಿರೀಕ್ಷಿಸಲಾಗಿತ್ತು. ಫೈನಲ್‌ನಲ್ಲಿಯೂ ಅವರ ಮೇಲೆ ಹೆಚ್ಚಿನ ಹೊಣೆ ಇದೆ. ಏಕೆಂದರೆ, ಗಾಯಗೊಂಡಿರುವ ಪ್ರತೀಕಾ ರಾವಲ್ ಬದಲಿಗೆ ಸ್ಥಾನ ಪಡೆದಿರುವ ಶಫಾಲಿ ವರ್ಮಾ ಲಯದಲ್ಲಿ ಇಲ್ಲ. ಕೌರ್, ರಿಚಾ ಘೋಷ್, ಆಲ್‌ರೌಂಡರ್ ದೀಪ್ತಿ ಶರ್ಮಾ, ಸ್ನೇಹರಾಣಾ ಹಾಗೂ ಅಮನ್ಜೋತ್ ಕೌರ್ ಅವರು ಮಧ್ಯಮಕ್ರಮಾಂಕದ ಶಕ್ತಿಯಾಗಿದ್ದಾರೆ.

ದೀಪ್ತಿ ಟೂರ್ನಿಯಲ್ಲಿ 17 ವಿಕೆಟ್ ಉರುಳಿಸಿದ್ದು, ಬೌಲಿಂಗ್ ವಿಭಾಗದಲ್ಲಿ ಅವರ ಮೇಲೆ ಹೆಚ್ಚು ನಿರೀಕ್ಷೆ ಇದೆ.

ದಕ್ಷಿಣ ಆಫ್ರಿಕಾದ ಮರೈಝಾನ್ ಕಾಪ್ (204 ರನ್), ನದಿನ್ ಡಿ ಕ್ಲರ್ಕ್ (190), ತಾಜ್ಮೀನ್ ಬ್ರಿಟ್ಸ್ (212) ಮತ್ತು ಲಾರಾ ವೊಲ್ವಾರ್ಟ್ (470) ಅವರನ್ನು ನಿಯಂತ್ರಿಸುವುದೇ ಭಾರತದ ಬೌಲರ್‌ಗಳ ಮುಂದಿರುವ ಕಠಿಣ ಸವಾಲು. ದಕ್ಷಿಣ ಆಫ್ರಿಕಾ ತಂಡವು ನಾಲ್ಕು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಸೆಮಿಫೈನಲ್‌ನಲ್ಲಿ ಸುಲಭವಾಗಿ ಸೋಲಿಸಿತ್ತು.


ಪಿಚ್ ಬ್ಯಾಟಿಂಗ್ ಸ್ನೇಹಿಯಾಗಿದ್ದು ರನ್‌ಗಳ ಹೊಳೆ ಹರಿಯುವ ಸಾಧ್ಯತೆ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮ ಬಲಶಾಲಿಗಳ ನಡುವಣ ಈ ಹಣಾಹಣಿಯಲ್ಲಿ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಬಲ್ಲ ತಂಡವು 'ಚೊಚ್ಚಲ ಕಿರೀಟ' ಧರಿಸುವುದು ಖಚಿತ.

ಮುಖ್ಯಾಂಶಗಳು

- ಮೂರನೇ ಸಲ ವಿಶ್ವಕಪ್ ಫೈನಲ್ ಪ್ರವೇಶಿಸಿರುವ ಭಾರತ
- ಸೆಮಿಫೈನಲ್‌ನಲ್ಲಿ ಅಜೇಯ ಶತಕ ಬಾರಿಸಿದ್ದ ಜೆಮಿಮಾ ರಾಡ್ರಿಗಸ್
- ಲೀಗ್ ಹಂತದಲ್ಲಿ ಭಾರತವನ್ನು ಮಣಿಸಿದ್ದ ದಕ್ಷಿಣ ಆಫ್ರಿಕಾ



ಟ್ರೋಫಿಯೊಂದಿಗೆ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೊಲ್ವಾರ್ಟ್ ಪಿಟಿಐ ಚಿತ್ರಗಳು



ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ರಿಚಾ ಘೋಷ್ (ವಿಕೆಟ್‌ಕೀಪರ್), ಉಮಾ ಚೆಟ್ರಿ (ವಿಕೆಟ್‌ಕೀಪರ್), ಜೆಮಿಮಾ ರಾಡ್ರಿಗಸ್, ಹರ್ಲೀನ್ ಡಿಯೊಲ್, ಶಫಾಲಿ ವರ್ಮಾ, ಅಮನ್ಜೋತ್ ಕೌರ್, ದೀಪ್ತಿ ಶರ್ಮಾ, ಸ್ನೇಹ ರಾಣಾ, ಕ್ರಾಂತಿ ಗೌಡ್, ರೇಣುಕಾಸಿಂಗ್ ಠಾಕೂರ್, ಶ್ರೀಚರಣಿ, ಅರುಂಧತಿ ರೆಡ್ಡಿ, ರಾಧಾ ಯಾದವ್.
ದಕ್ಷಿಣ ಆಫ್ರಿಕಾ: ಲಾರಾ ವೊಲ್ವಾರ್ಟ್ (ನಾಯಕಿ), ತಾಜ್ಮೀನ್ ಬ್ರಿಟ್ಸ್, ಸಿನಾಲೊ ಝೂಪ್ತಾ (ವಿಕೆಟ್‌ಕೀಪರ್), ಕರೇಬೊ ಮೆಸೊ (ವಿಕೆಟ್‌ಕೀಪರ್), ಅನಿಕೆ ಬಾಷ್, ನದೀನ್ ಡಿ ಕ್ಲರ್ಕ್, ಅನೇರಿ ಡರ್ಕಸನ್, ಮರೈಝಾನ್ ಕಾಪ್, ಸುನಿ ಲೂಸ್, ನೊಂದುಮಿಸೊ ಶಾಂಗೇಸ್, ಚೋಲೆ ಟ್ರೈಯನ್, ಅಯಾಬೊಂಗಾ ಕಾಕಾ, ಮಸಾಬತಾ ಕ್ಲಾಸ್, ನಾನ್‌ಕುಲುಲೆಕೊ ಮ್ಲಾಬಾ, ತಮಿ ಸೆಕುಖುನೆ.
ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್



ಭಾರತ ತಂಡದ ಬ್ಯಾಟರ್ ಜೆಮಿಮಾ ರಾಡ್ರಿಗಸ್ ತಾಲೀಮು



ರೋಹನ್ ಬೋಪಣ್ಣ ಪಿಟಿಐ ಸಂಗ್ರಹ ಚಿತ್ರ

ನಿವೃತ್ತಿ ಹೇಳಿದ 'ಬೋಪ್ಸ್'

ನವದೆಹಲಿ (ಪಿಟಿಐ): ಹಿರಿಯ ಟೆನಿಸ್ ತಾರೆ ರೋಹನ್ ಬೋಪಣ್ಣ ಅವರು 22 ವರ್ಷಗಳ ವೃತ್ತಿಪರ ಆಟಕ್ಕೆ ಶನಿವಾರ ವಿದಾಯ ಘೋಷಿಸಿದರು. ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದ ದೇಶದ ನಾಲ್ವರು ಆಟಗಾರರಲ್ಲಿ ಬೋಪಣ್ಣ ಒಬ್ಬರು.

ಡಬಲ್ಸ್ ಪರಿಣತರಾದ 45 ವರ್ಷ ವಯಸ್ಸಿನ ಬೋಪಣ್ಣ ಹೋದ ಭಾನುವಾರ ಪ್ಯಾರಿಸ್ ಮಾಸ್ಟರ್ಸ್ ಟೂರ್ನಿಯಲ್ಲಿ ಕೊನೆಯ ಬಾರಿಗೆ ಆಡಿದ್ದರು. ಕಜಾಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಜೊತೆಗೂಡಿ ಆಡಿದ್ದ ಅವರು 32ರ ಸುತ್ತಿನಲ್ಲಿ ಸೋತಿದ್ದರು.

'ಎ ಗುಡ್‌ಬೈ, ಬಟ್ ನಾಟ್ ದ ಎಂಡ್...' ಶೀರ್ಷಿಕೆಯಡಿ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ನಿವೃತ್ತಿ ನಿರ್ಧಾರದ ಬಗ್ಗೆ ಭಾವನಾತ್ಮಕವಾಗಿ ಬರೆದಿದ್ದಾರೆ. 'ನಾನು ಅಧಿಕೃತವಾಗಿ ವಿದಾಯ ಹೇಳುತ್ತಿದ್ದೇನೆ. ಬದುಕಿಗೆ ಅರ್ಥ ನೀಡಿದ ಈ ಆಟಕ್ಕೆ ವಿದಾಯ ಹೇಳುವುದಾದರೂ ಹೇಗೆ? ಟೆನಿಸ್ ಲೋಕದ ಯಾನದಲ್ಲಿ ಮರೆಯಲಾಗದ 20 ವರ್ಷಗಳು. ಆದರೆ ಈಗ ಕಾಲ ಕೂಡಿಬಂದಿದೆ....' ಎಂದು ಅವರು ಬರೆದಿದ್ದಾರೆ.

'ಕೊಡಗಿನ ಸಣ್ಣ ಊರಿನಿಂದ ಈ ಪಯಣ ಆರಂಭವಾಯಿತು. ತಾಕತ್ತು ಹೆಚ್ಚಿಸಲು ಕಾಫಿ ಎಸ್ಟೇಟುಗಳಲ್ಲಿ ಜಾಗಿಂಗ್ ಮಾಡುತ್ತ, ಬಿರುಕಾಗಿದ್ದ ಅಂಕಣಗಳಲ್ಲಿ ಆಡಿ ಕನಸುಗಳ ಬೆಂಬತ್ತಿ, ಜಗತ್ತಿನ ಅತಿ ದೊಡ್ಡ ಅರೇನಾಗಳಲ್ಲಿ ಹೊನಲು ಬೆಳಕಿನಡಿ ನಿಲ್ಲುವ ಅವಕಾಶ. ಎಲ್ಲವೂ ಅತಿವಾಸ್ತವದಂತೆ ಭಾಸವಾಗುತ್ತಿದೆ' ಎಂದೂ ಬರೆದಿದ್ದಾರೆ.

ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕೊನೆಯ ಬಾರಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. 2023ರಲ್ಲಿ ಲಖನೌದಲ್ಲಿ ಮೊರಾಕೊ ವಿರುದ್ಧ ತಮ್ಮ ಕೊನೆಯ ಡೇವಿಸ್ ಕಪ್ ಪಂದ್ಯ ಆಡಿದ್ದರು.

'ಬೋಪ್ಸ್', 'ಬೋಪ್ಸಿ' ಎಂದು ಆಪ್ತ ವಲಯದಲ್ಲಿ ಕರೆಸಿಕೊಳ್ಳುತ್ತಿದ್ದ ಅವರು, ವೃತ್ತಿಜೀವನದುದ್ದಕ್ಕೂ ಬೆಂಬಲ ನೀಡಿದ ಕುಟುಂಬವನ್ನೂ ನೆನಪಿಸಿಕೊಂಡಿದ್ದಾರೆ.

2003ರಲ್ಲಿ ಪದಾರ್ಪಣೆ ಮಾಡಿದ್ದ ಅವರು ಭಾರತದ ಅತಿ ಯಶಸ್ವಿ ಡಬಲ್ಸ್ ಆಟಗಾರರಾಗಿ ಗುರುತಿಸಿಕೊಂಡರು. ಎಟಿಪಿ ಟೂರ್‌ಗಳಲ್ಲಿ ಪ್ರಬಲ ಸರ್ವ್, ಬತ್ತದ ಉತ್ಸಾಹದಿಂದ ಪ್ರಸಿದ್ಧರಾದವರು. ಭಾರತ ತಂಡವನ್ನು ಡೇವಿಸ್ ಕಪ್, ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ, ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಿದ್ದಾರೆ.

2017ರಲ್ಲಿ ಕೆನಡಾದ ಗ್ಯಾಬ್ರಿಯೆಲಾ ದಬ್ರೋವ್‌ಸ್ಕಿ ಜತೆಗೂಡಿ ಫ್ರೆಂಚ್ ಓಪನ್ ಮಿಶ್ರ ಡಬಲ್ಸ್‌ನಲ್ಲಿ ಮೊದಲ ಪ್ರಶಸ್ತಿ ಗೆದ್ದಿದ್ದರು. ಪುರುಷರ ಡಬಲ್ಸ್‌ನಲ್ಲಿ ಏಕೈಕ ಪ್ರಶಸ್ತಿಯನ್ನು ಆಸ್ಟ್ರೇಲಿಯಾ ಓಪನ್‌ನಲ್ಲಿ (2024) ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೊತೆಗೂಡಿ ಜಯಿಸಿದ್ದರು.

ಮಯಾಮಿಯಲ್ಲಿ 43ನೇ ವಯಸ್ಸಿನಲ್ಲಿ (2023ರಲ್ಲಿ) ಎಬ್ಡೆನ್ ಜೊತೆಗೆ ತಮ್ಮ ಮೊದಲ ಎಟಿಪಿ ಮಾಸ್ಟರ್ಸ್ ಪ್ರಶಸ್ತಿ ಗೆದ್ದುಕೊಂಡ ಅತಿ ಹಿರಿಯ ಆಟಗಾರ ಎನಿಸಿದ್ದರು.

ಕುತೂಹಲಕರ ಘಟ್ಟದಲ್ಲಿ ಭಾರತ 'ಎ'–ದಕ್ಷಿಣ ಆಫ್ರಿಕಾ 'ಎ' ಪಂದ್ಯ

ರಿಷಭ್ ಪಂತ್ ಮೇಲೆ ನಿರೀಕ್ಷೆಯ ಭಾರ

● ಗಿರೀಶ ದೊಡ್ಡಮನಿ

ಬೆಂಗಳೂರು: ಒಂದೇ ದಿನದಲ್ಲಿ ಹದಿನಾಲ್ಕು ವಿಕೆಟ್‌ಗಳು ಪತನವಾದ ಅಂಗಣದಲ್ಲಿ ರಿಷಭ್ ಪಂತ್ ಭಾರತ 'ಎ' ತಂಡದ ಗೆಲುವಿನ ನಿರೀಕ್ಷೆಯಾಗಿ ನಿಂತಿದ್ದಾರೆ.

ದಕ್ಷಿಣ ಆಫ್ರಿಕಾ 'ಎ' ತಂಡದ ಎದುರಿನ 'ಟೆಸ್ಟ್' (ಚತುರ್ಥ ದಿನ) ಪಂದ್ಯದ ಮೂರನೇ ದಿನದಾಟದಲ್ಲಿ 275 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿರುವ ಭಾರತ 'ಎ' ತಂಡ 119 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿದೆ. ನಾಯಕ ಪಂತ್ (ಬ್ಯಾಟಿಂಗ್ 64) ಮತ್ತು ಇನ್ನೂ ಖಾತೆ ತೆರೆಯದ ಆಯುಷ್ ಬದೋನಿ ಕ್ರೀಸ್‌ನಲ್ಲಿದ್ದಾರೆ.

ಪಂದ್ಯದ ಕೊನೆಯ ದಿನವಾದ ಭಾನುವಾರ ಗೆಲುವಿಗಾಗಿ ಆತಿಥೇಯರಿಗೆ ಇನ್ನೂ 156 ರನ್‌ಗಳು ಬೇಕು. ಅದೇ ಪ್ರವಾಸಿ ಬಳಗವು ಆರು ವಿಕೆಟ್ ಕಬಳಿಸಬೇಕು. ಬೆಳಗಿನ ಅವಧಿಯಲ್ಲಿ ರಿಷಭ್ ಮತ್ತು ಆಯುಷ್ ಅವರು ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ಜೋರಾಗಿ ಬೀಸುವ ಗಾಳಿ ಮತ್ತು ದಕ್ಷಿಣ ಆಫ್ರಿಕಾದ ವೇಗಿಗಳ ಬಿರುಗಾಳಿಯನ್ನು ಸಮರ್ಥವಾಗಿ ಎದುರಿಸಿ ನಿಂತರೆ ಜಯಿಸುವ ಸಾಧ್ಯತೆ ಹೆಚ್ಚಿದೆ. ಕೊನೆಯ ದಿನದಾಟವು ರೋಚಕವಾಗುವ ನಿರೀಕ್ಷೆ ಇದೆ.

ಮೂರನೇ ದಿನದಾಟದಲ್ಲಿ ಆತಿಥೇಯ ಬೌಲಿಂಗ್ ಪಡೆ ಮೇಲುಗೈ ಸಾಧಿಸಿತು. ಶುಕ್ರವಾರ ಮೊದಲ ಇನಿಂಗ್ಸ್‌ನಲ್ಲಿ 75 ರನ್‌ಗಳ ಮುನ್ನಡೆ ಪಡೆದಿದ್ದ ದಕ್ಷಿಣ ಆಫ್ರಿಕಾ ತಂಡವನ್ನು ಎರಡನೇ ಇನಿಂಗ್ಸ್‌ನಲ್ಲಿ 199 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಸ್ಪಿನ್ನರ್ ತನುಷ್ ಕೋಟ್ಯಾನ್ (26ಕ್ಕೆ4) ಮತ್ತು ಅನ್ಷುಲ್ ಕಂಬೋಜ್ (39ಕ್ಕೆ3) ಯಶಸ್ವಿಯಾದರು. ಒಟ್ಟು 242 ನಿಮಿಷಗಳ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ಆಲೌಟ್ ಆಯಿತು.



ಭಾರತ ಎ ತಂಡದ ನಾಯಕ ರಿಷಭ್ ಪಂತ್ ಬ್ಯಾಟಿಂಗ್ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಗುರಿ ಬೆನ್ನಟ್ಟಿದ ಆತಿಥೇಯರಿಗೆ ವೇಗದ ಜೋಡಿ ಟಿಶೆಪೊ ಮೊರೇಕಿ (12ಕ್ಕೆ2) ಮ್ತು ಒಕುಲೆ ಸಿಲಿ (40ಕ್ಕೆ1) ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಇದರಿಂದಾಗಿ ತಂಡವು 32 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ಆದರೆ ರಿಷಭ್ ಕ್ರೀಸ್‌ಗೆ ಬರುತ್ತಲೇ ತಮ್ಮ ಆಕ್ರಮಣ ಶೈಲಿಯಲ್ಲಿಯೇ ಆಡಿದರು. ಈ ಬಾರಿ ಅವರಿಗೆ ಅದೃಷ್ಟ ಜೊತೆ ನೀಡಿತು. ಇನ್ನೊಂದು ಬದಿಯಲ್ಲಿದ್ದ ರಜತ್ ಪಾಟೀದಾರ್ ಕೂಡ ತಮ್ಮ ಆಟದ ವೇಗಕ್ಕೆ ಕಡಿವಾಣ ಹಾಕಿ ಪಂತ್‌ಗೆ ವೇದಿಕೆ ಬಿಟ್ಟುಕೊಟ್ಟರು.

ಚಹಾ ನಂತರದ ಅವಧಿಯಲ್ಲಿ ಇಬ್ಬರ ಜತೆಯಾಟ ರಂಗೇರಿತು. ಪಂತ್ 2 ಸಿಕ್ಸರ್ ಮತ್ತು 8 ಬೌಂಡರಿಗಳನ್ನು ಸಿಡಿಸಿದರು. ತಾವೆದುರಿಸಿದ 65ನೇ ಎಸೆತವನ್ನು ಬೌಂಡರಿಗೆ ಕಳಿಸಿ ಅರ್ಧಶತಕದ ಗಡಿ ದಾಟಿದರು. ಅದಕ್ಕೂ ಸ್ವಲ್ಪ ಹೊತ್ತಿಗೂ ಮುನ್ನ ಪಂತ್ ಅವರ ಸುಲಭ ಕ್ಯಾಚ್ ನೆಲಕ್ಕೆ ಚೆಲ್ಲಿದ್ದ ಒಕುಲೆ ಕೈಕೈ ಹಿಸುಕಿಕೊಂಡರು. ರಜತ್ ಅವರಿಗೂ ಸ್ಲಿಪ್ ಫೀಲ್ಡರ್ ಹರ್ಮನ್ ಜೀವದಾನ ನೀಡಿದ್ದು ತುಟ್ಟಿಯಾಯಿತು. ಇವರಿಬ್ಬರ ಜೊತೆಯಾಟದಲ್ಲಿ 87 ರನ್ ಸೇರಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ ಎ: 309, ಭಾರತ ಎ: 234. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ ಎ: 48.1 ಓವರ್‌ಗಳಲ್ಲಿ 199 (ಲೆಸೆಗೊ ಸೆನೊಕ್ವಾನೆ 37, ಜುಬೇರ್ ಹಮ್ಜಾ 37, ಗುರ್ನೂರ್ ಬ್ರಾರ್ 40ಕ್ಕೆ2, ಅನ್ಷುಲ್ ಕಂಬೋಜ್ 39ಕ್ಕೆ3, ತನುಷ್ ಕೋಟ್ಯಾನ್ 26ಕ್ಕೆ4) ಭಾರತ ಎ: 39 ಓವರ್‌ಗಳಲ್ಲಿ 4ಕ್ಕೆ119 (ರಿಷಭ್ ಪಂತ್ ಬ್ಯಾಟಿಂಗ್ 64, ರಜತ್ ಪಾಟೀದಾರ್ 28, ಟಿಶೆಪೊ ಮೊರೆಕಿ 12ಕ್ಕೆ2)

ಚೆಸ್: ಡ್ರಾ ಪಂದ್ಯದಲ್ಲಿ ನಾರಾಯಣನ್

ಪಣಜಿ (ಪಿಟಿಐ): ಭಾರತದ ಭರವಸೆಗಳಾದ ರೋನಕ್ ಸಾಧ್ವಾನಿ ಮತ್ತು ಎಸ್.ಎಲ್.ನಾರಾಯಣನ್ ಅವರು ಶನಿವಾರ ಆರಂಭವಾದ ಚೆಸ್ ವಿಶ್ವಕಪ್‌ನ ಮೊದಲ ಸುತ್ತಿನಲ್ಲಿ ಕ್ರಮವಾಗಿ ದಕ್ಷಿಣ ಆಫ್ರಿಕಾದ ಡೇನಿಯರ್ ಬಾರಿಷ್ ಮತ್ತು ಪೆರುವಿನ ಸ್ಟೀವನ್ ಸಲಾಸ್ ರೋಜಾಸ್ ಎದುರು ಡ್ರಾ ಮಾಡಿಕೊಳ್ಳಬೇಕಾಯಿತು.

ಪ್ರತಿ ಸುತ್ತಿನ ಪಂದ್ಯಕ್ಕೆ ಮೂರು ದಿನ ಮೀಸಲಿಡಲಾಗಿದೆ. ಮೊದಲ ಎರಡು ದಿನ ಕ್ಲಾಸಿಕಲ್ ಆಟ ನಡೆಯಲಿದ್ದು, ನಿರ್ಣಾಯಕ ಫಲಿತಾಂಶ ಬರದಿದ್ದರೆ ಆಟಗಾರರು ಮೀಸಲು ದಿನ (3ನೇ ದಿನ) ಟೈಬ್ರೇಕ್ ಪಂದ್ಯ ಆಡಬೇಕಾಗುತ್ತದೆ.

ಒಟ್ಟು 206 ಆಟಗಾರರಿರುವ ಕಣದಲ್ಲಿ 156 ಮಂದಿ ಮೊದಲ ಸುತ್ತಿನಲ್ಲಿ ಆಡಿದರು. 50 ಮಂದಿಗೆ ನೇರವಾಗಿ ಎರಡನೇ ಸುತ್ತಿಗೆ ಬೈ ನೀಡಲಾಗಿದೆ. ವಿಶ್ವಕಪ್ ಮಾದರಿಯು ನಾಕೌಟ್ ಆಗಿರುವ ಕಾರಣ ಎರಡನೇ ಸುತ್ತಿನ ವೇಳೆ 128 ಆಟಗಾರರಷ್ಟೇ ಉಳಿಯಲಿದ್ದಾರೆ.

ಲಿಯಾನ್ ಲ್ಯೂಕ್ ಮೆಂಡೋನ್ಸ ಹಾಗೂ ರುತ್ವಿಕ್ ರಾಜಾ ಅವರೂ ತಮ್ಮ ತಮ್ಮ ಎದುರಾಳಿ ವಿರುದ್ಧ ಡ್ರಾ ಮಾಡಿಕೊಂಡರು.

ಪುಟಿದೇಳುವ ವಿಶ್ವಾಸದಲ್ಲಿ ಭಾರತ

ಮೂರನೇ ಟಿ20 ಪಂದ್ಯ ಇಂದು: ಹ್ಯಾಜಲ್‌ವುಡ್ ಅನುಪಸ್ಥಿತಿ

ಹೋಬಾರ್ಟ್ (ಪಿಟಿಐ): ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಟಿ20 ಸರಣಿಯ ಉಳಿದ ಪಂದ್ಯಗಳಲ್ಲಿ ಆಡದಿರುವ ಕಾರಣ ಭಾರತ ಬ್ಯಾಟರ್‌ಗಳು ಇನ್ನು ಸ್ವಲ್ಪ ನಿರಾಳರಾಗಬಹುದು. ಈ ಸರಣಿಯ ಮೂರನೇ ಪಂದ್ಯ ಭಾನುವಾರ ಇಲ್ಲಿ ನಡೆಯಲಿದ್ದು, ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರನ್ನು ಕಡೆಗಣಿಸುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.

ಸರಿಯಾದ ಲೆಂಗ್ತ್‌ನೊಂದಿಗೆ ಕರಾರುವಾಕ್ ಆಗಿ ಬೌಲ್ ಮಾಡಿದ್ದ ಹ್ಯಾಜಲ್‌ವುಡ್ ಭಾರತದ ಬ್ಯಾಟರ್‌ಗಳಿಗೆ ದುಃಸ್ವಪ್ನವಾಗಿದ್ದರು. ಆ್ಯಷಸ್ ಟೆಸ್ಟ್ ಸರಣಿ ಸಮೀಪಿಸುತ್ತಿರುವ ಕಾರಣ ಹ್ಯಾಜಲ್‌ವುಡ್ ಅವರಿಗೆ ವಿಶ್ರಾಂತಿ ನೀಡಲು ಕ್ರಿಕೆಟ್ ಆಸ್ಟ್ರೇಲಿಯಾ ನಿರ್ಧರಿಸಿದ್ದು ಮೊದಲೆರಡು ಪಂದ್ಯಗಳಲ್ಲಿ ಮಾತ್ರ ಅವಕಾಶ ನೀಡಿತ್ತು.

'ನಿಜವಾಗಿಯೂ ನಿರಾಳವೇ. ನಾನೆಂದೂ ಇಂಥ ಬೌಲಿಂಗ್ ಎದುರಿಸಿರಲಿಲ್ಲ' ಎಂದು ಭಾರತದ ಸ್ಟಾರ್ ಓಪನರ್ ಅಭಿಷೇಕ್ ಶರ್ಮಾ ಅವರು ಮೆಲ್ಬರ್ನ್‌ನಲ್ಲಿ ನಡೆದ ಎರಡನೇ ಪಂದ್ಯದ ನಂತರ ಹೇಳಿದ್ದರು. ಪಂದ್ಯದಲ್ಲಿ ಆಸ್ಟ್ರೇಲಿಯಾದ ವೇಗಿಗಳನ್ನು ನಿಭಾಯಿಸುವ ವೇಳೆ ಭಾರತದ ಬ್ಯಾಟರ್‌ಗಳ ತಾಂತ್ರಿಕ ದೌರ್ಬಲ್ಯವೂ ಬಯಲಾಗಿತ್ತು.



ಅರ್ಷದೀಪ್ ಸಿಂಗ್

ಕ್ಸೇವಿಯರ್ ಬಾರ್ಟ್ಲೆಟ್, ನಥಾನ್ ಎಲ್ಲಿಸ್ ಮತ್ತು ಸೀನ್ ಅಬೋಟ್ ಅವರನ್ನು ಎದುರಿಸುವಾಗ ತಂಡದ ಮೇಲೆ ಮೊದಲಿದ್ದ ಒತ್ತಡ ಕಡಿಮೆಯಾಗಲಿದೆ. ಕೆನ್‌ಬೆರಾದ ಮೊದಲ ಪಂದ್ಯದಲ್ಲಿ ಭರವಸೆ ಮೂಡಿಸಿದರೂ, ಎರಡನೇ ಪಂದ್ಯದಲ್ಲಿ ಎಕ್ಸ್‌ಟ್ರಾ ಬೌನ್ಸ್ ನಿಭಾಯಿಸುವಲ್ಲಿ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಉಪನಾಯಕ ಶುಭಮನ್ ಗಿಲ್ ತೊಂದರೆಗಳನ್ನು ಎದುರಿಸಿದ್ದರು.

ಎರಡನೇ ಪಂದ್ಯದಲ್ಲಿ ಮುಖಭಂಗ ಅನುಭವಿಸಿದ ಭಾರತಕ್ಕೆ ಪುಟಿದೇಳುವ ನಿಟ್ಟಿನಲ್ಲಿ ಈ ಪಂದ್ಯ ಮಹತ್ವದ್ದು.

ಅರ್ಷದೀಪ್‌ಗೆ ಅವಕಾಶ?: ಇತ್ತೀಚಿನ ದಿನಗಳಲ್ಲಿ ತಂಡವು ಕೆಳಕ್ರಮಾಂಕದವರೆಗೆ ಬ್ಯಾಟಿಂಗ್ ಆಳಕ್ಕೆ ಆದ್ಯತೆ ನೀಡುತ್ತ ಬಂದಿದೆ. ಆದರೆ ಇದರಿಂದ ಎಂಸಿಜಿಯಲ್ಲಿ ಹೆಚ್ಚಿನ ಪ್ರಯೋಜನವಾಗಿರಲಿಲ್ಲ. ವೇಗಕ್ಕೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಮೂವರು ಪರಿಣತ ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದಿದ್ದು, ಹುಬ್ಬೇರಲು ಕಾರಣವಾಗಿತ್ತು.

ಟಿ20 ಕ್ರಿಕೆಟ್‌ನಲ್ಲಿ 100 ವಿಕೆಟ್ ಪಡೆದಿರುವ ಭಾರತದ ಏಕೈಕ ವೇಗಿ ಆಗಿದ್ದರೂ ಅರ್ಷದೀಪ್ ಅವರು ಮೊದಲ ಎರಡೂ ಪಂದ್ಯಗಳಲ್ಲಿ ಆಡುವ 11ರಲ್ಲಿ ಸ್ಥಾನ ಪಡೆದಿರಲಿಲ್ಲ. ಹರ್ಷಿತ್ ರಾಣಾ ಆಲ್‌ರೌಂಡರ್ ಆಗಿ ಆಡುವ ಕಾರಣ ಪರಿಣತ ವೇಗಿಗೆ ಸ್ಥಾನ ಸಿಗುತ್ತಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 1.45 (ಭಾರತೀಯ ಕಾಲಮಾನ)

ಆಸ್ಪತ್ರೆಯಿಂದ ಮರಳಿದ ಶ್ರೇಯಸ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಫೀಲ್ಡಿಂಗ್ ವೇಳೆ ಗಂಭೀರ ಗಾಯಗೊಂಡಿದ್ದ ಭಾರತ ಏಕದಿನ ಕ್ರಿಕೆಟ್ ತಂಡದ ಉಪ ನಾಯಕ ಶ್ರೇಯಸ್ ಅಯ್ಯರ್ ಅವರು ಗುಣಮುಖರಾಗಿದ್ದು ಶನಿವಾರ ಆಸ್ಪತ್ರೆಯಿಂದ ಮರಳಿದ್ದಾರೆ.



'ಶ್ರೇಯಸ್ ಅವರು ಅಗತ್ಯ ತಪಾಸಣೆಗಳನ್ನು ಮುಗಿಸಿಕೊಂಡು ಆಸ್ಪತ್ರೆಯಿಂದ ಮರಳಿದ್ದಾರೆ' ಎಂದು ಬಿಸಿಸಿಐ ತಿಳಿಸಿದೆ.

ಅಯ್ಯರ್ ಅವರು ವಿಮಾನದಲ್ಲಿ ಪ್ರಯಾಣ ಮಾಡುವಷ್ಟು ಶಕ್ತರಾದ ನಂತರ ಭಾರತಕ್ಕೆ ಹಿಂದಿರುಗಲಿದ್ದಾರೆ. ಕನಿಷ್ಠ ಎರಡು ತಿಂಗಳು ಕ್ರಿಕೆಟ್‌ನಿಂದ ದೂರವುಳಿಯಲಿದ್ದಾರೆ ಎನ್ನಲಾಗುತ್ತಿದೆ.

ಅ.25ರಂದು ನಡೆದ ಪಂದ್ಯದ ವೇಳೆ, ಅಲೆಕ್ಸ್ ಕ್ಯಾರಿ ಅವರ ಕ್ಯಾಚ್ ಪಡೆಯುವಾಗ ಆಯತಪ್ಪಿ ಬಿದ್ದ ಅಯ್ಯರ್ ಅವರ ಪಕ್ಕೆಲುಬಿಗೆ ಗಾಯವಾಗಿತ್ತು.

ರಣಜಿ: ಕರುಣ್ ಸತತ ಎರಡನೇ ಶತಕ

ತಿರುವನಂತಪುರ (ಪಿಟಿಐ): ಲಯದಲ್ಲಿರುವ ಕರುಣ್ ನಾಯರ್ ಮತ್ತೊಂದು ಅಮೋಘ ಶತಕ ಗಳಿಸಿದರು. ಜೊತೆಗೆ ಸ್ಮರಣ್ ಆರ್. ಮತ್ತು ಕೆ.ಎಲ್.ಶ್ರೀಜಿತ್ ಅವರು ಅರ್ಧಶತಕಗಳನ್ನು ಬಾರಿಸುವುದರೊಂದಿಗೆ ಕರ್ನಾಟಕ ತಂಡವು ಶನಿವಾರ ರಣಜಿ ಟ್ರೋಫಿ ಎಲೈಟ್ 'ಬಿ' ಗುಂಪಿನ ಪಂದ್ಯದಲ್ಲಿ ಕೇರಳ ವಿರುದ್ಧ ಮೊದಲ ದಿನದ ಗೌರವ ಪಡೆಯಿತು.

ಇಲ್ಲಿನ ಮಂಗಲಪುರಂನ ಕೆಸಿಎ ಮೈದಾನದಲ್ಲಿ ಕರ್ನಾಟಕ 7.3 ಓವರುಗಳಲ್ಲಿ 13 ರನ್‌ಗಳಾಗುವಷ್ಟರಲ್ಲಿ ಆರಂಭ ಆಟಗಾರರನ್ನು ಕಳೆದುಕೊಂಡಿತ್ತು. ಈ ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ಕರುಣ್ ಮತ್ತೊಮ್ಮೆ ನೆರವಿಗೆ ಬಂದು ಅಜೇಯ 142 ರನ್ ಬಾರಿಸಿದರು. ಅವರಿಗೆ, ಯುವ ತಾರೆ ಸ್ಮರಣ್ (ಅಜೇಯ 88, 143ಎ, 4x8, 6x1) ಬೆಂಬಲ ನೀಡಿದ್ದು ದಿನದಾಟ ಮುಗಿದಾಗ ಕರ್ನಾಟಕ 90 ಓವರುಗಳಲ್ಲಿ 3 ವಿಕೆಟ್‌ಗೆ 319 ರನ್ ಗಳಿಸಿದೆ. 251 ಎಸೆತಗಳನ್ನು ಎದುರಿಸಿರುವ ಕರುಣ್ 2 ಸಿಕ್ಸರ್‌ಗಳ ಜೊತೆ 14 ಬೌಂಡರಿ ಬಾರಿಸಿದ್ದಾರೆ.



ಕರುಣ್ ನಾಯರ್ ಶತಕ ಸಂಭ್ರಮ

ಮೊದಲೆರಡು ಪಂದ್ಯಗಳಲ್ಲಿ ಪರದಾಡಿದ್ದ ಶ್ರೀಜಿತ್ ಇಲ್ಲಿ 10 ಬೌಂಡರಿ ಗಳಿದ್ದ 65 ರನ್ ಹೊಡೆದರು. ಅವರು ಮೂರನೇ ವಿಕೆಟ್‌ಗೆ ಕರುಣ್ ಜೊತೆ 123 ರನ್ ಜೊತೆಯಾಟದಲ್ಲಿ ಭಾಗಿಯಾದರು. ಇದರಿಂದಾಗಿ ಕರ್ನಾಟಕ ಸುರಕ್ಷಿತ ಸ್ಥಿತಿಗೆ ತಲುಪಿತು.

ಮುರಿಯದ ನಾಲ್ಕನೇ ವಿಕೆಟ್‌ಗೆ ಕರುಣ್ ಮತ್ತು ಸ್ಮರಣ್ 183 ರನ್ (292 ಎಸೆತ) ಸೇರಿಸಿ ಕೇರಳದ ಬೌಲರ್‌ಗಳನ್ನು ಹತಾಶಗೊಳಿಸಿದರು.

ಆದರೆ, ಕೇರಳ ಬೆಳಿಗ್ಗೆ ಉತ್ತಮ ಆರಂಭ ಮಾಡಿತು. ಐದನೇ ಓವರಿನಲ್ಲಿ ನಾಯಕ ಮಯಂಕ್ ಅಗರವಾಲ್ (5) ಅವರು ಎಂ.ಡಿ.ನಿಧೀಶ್ (41ಕ್ಕೆ1) ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಮೊಹಮ್ಮದ್ ಅಜರುದ್ದೀನ್‌ಗೆ ಕ್ಯಾಚಿತ್ತರು.

ನಿಖಿನ್ ಜೋಸ್ ಬದಲು ಅವಕಾಶ ಪಡೆದಿದ್ದ ಅನೀಶ್ ಕೆ.ವಿ. (8) ಅವರು ನೆಡುಮಾನ್‌ಕುಳಿ ಬಾಸಿಲ್ ಅವರಿಗೆ ವಿಕೆಟ್ ಒಪ್ಪಿಸಿದರು. ಆದರೆ ಈ ವೇಳೆ ಜೊತೆಗೂಡಿದ ಕರುಣ್ ಮತ್ತು ಶ್ರೀಜಿತ್ ಮೊತ್ತವನ್ನು ಬೆಳೆಸಿದರು. ಕರುಣ್ ಒಂದೆಡೆ ಇನಿಂಗ್ಸ್‌ಗೆ ಲಂಗರುಹಾಕಿದರೆ, ಶ್ರೀಜಿತ್ ಸ್ವಲ್ಪ ಆಕ್ರಮಣಕಾರಿಯಾಗಿ ಆಡಿದರು. ಕೊನೆಗೂ ಈ ಶತಕದ ಜೊತೆಯಾಟವನ್ನು ಆಫ್ ಸ್ಪಿನ್ನರ್ ಬಾಬಾ ಅಪರಾಜಿತ್ ಮುರಿದರು.

ಕರ್ನಾಟಕ ಈ ಪಂದ್ಯದಲ್ಲಿ ಇನ್ನೆರಡು ಬದಲಾವಣೆ ಮಾಡಿತು. ಸ್ಪಿನ್ನರ್‌ಗಳಾದ ಶಿಖರ್ ಶೆಟ್ಟಿ ಮತ್ತು ಮೊಹ್ಸಿನ್ ಖಾನ್ ಅವರನ್ನು ಸೇರ್ಪಡೆಗೊಳಿಸಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಕರ್ನಾಟಕ: 90 ಓವರುಗಳಲ್ಲಿ 3ಕ್ಕೆ 319 (ಕೆ.ಎಲ್.ಶ್ರೀಜಿತ್ 65, ಕರುಣ್ ನಾಯರ್ ಔಟಾಗದೇ 142, ಆರ್.ಸ್ಮರಣ್ ಔಟಾಗದೇ 88) ವಿರುದ್ಧ ಕೇರಳ.

ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್: ಸತೀಶ್‌ಗೆ ಸುಲಭ ಜಯ


ಮಾನಸಿ, ರೌನಕ್‌ಗೆ ಚೊಚ್ಚಲ ಪ್ರಶಸ್ತಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕಿತೆಯನ್ನು ಕ್ವಾರ್ಟರ್ ಫೈನಲ್‌ನಲ್ಲಿ ಮಣಿಸಿ ಆತ್ಮವಿಶ್ವಾಸದಲ್ಲಿದ್ದ ಒಡಿಶಾದ ತನ್ವಿ ಪತ್ರಿ ಎದುರು ಅಮೋಘ ಆಟವಾಡಿದ ಲಖನೌದ ಮಾನಸಿ ಸಿಂಗ್ ಅವರಲ್ಲಿ ಮೊದಲ ಅಂತರರಾಷ್ಟ್ರೀಯ ಪ್ರಶಸ್ತಿಯ ಕನಸು ಚಿಗುರಿತು.

ನಗರದ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಚಾಲೆಂಜ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಅವರು ಅಸ್ಸಾಂನ ಅಸ್ಮಿತಾ ಚಾಲಿಹ ಎದುರು ಭಾನುವಾರ ಸೆಣಸಲಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಮಾನಸಿ 22–20, 21–9ರಲ್ಲಿ ತನ್ವಿ ಪತ್ರಿ ವಿರುದ್ಧ ಗೆದ್ದರೆ, ಅಸ್ಮಿತಾ, 21–12, 21–15ರಿಂದ ಆಂಧ್ರಪ್ರದೇಶದ ಸೂರ್ಯ ಚರಿಸ್ಮಾ ತಾಮಿರಿ ಅವರನ್ನು ಮಣಿಸಿದರು.



ಮಾನಸಿ ಸಿಂಗ್ ಪ್ರಜಾವಾಣಿ ಚಿತ್ರ

ಪುರುಷರ ವಿಭಾಗದಲ್ಲಿ ತಮಿಳುನಾಡಿನ ಋತ್ವಿಕ್ ಸತೀಶ್ ಕುಮಾರ್ ಮತ್ತು ಛತ್ತೀಸಘಡದ 18ರ ಹರೆಯದ ರೌನಕ್ ಚೌಹಾನ್ ಪ್ರಶಸ್ತಿಗಾಗಿ ಮುಖಾಮುಖಿಯಾಗಲಿದ್ದಾರೆ. ಅಗ್ರ ಶ್ರೇಯಾಂಕದ ಸತೀಶ್ 21–12, 21–17ರಲ್ಲಿ ತೆಲಂಗಾಣದ ರೋಹನ್ ಆನಂದರಾಜ್ ಎದುರು ಮತ್ತು ರೌನಕ್ ಮಹಾರಾಷ್ಟ್ರದ ಪ್ರಣಯ್ ಶೆಟ್ಟಿಗಾರ್ ಎದುರು 21–17, 21–16ರಲ್ಲಿ ಗೆದ್ದರು.

ನಾಲ್ಕರ ಘಟ್ಟದ ಪಂದ್ಯದಲ್ಲಿ ತನ್ವಿ ವಿರುದ್ಧ ಮೂರನೇ ಶ್ರೇಯಾಂಕದ ಮಾನಸಿ ಆರಂಭದಿಂದಲೇ ಪಾರಮ್ಯ ಸಾಧಿಸಿದರು. ತನ್ವಿ ಮೊದಲ ಗೇಮ್‌ನ ಕೊನೆಯಲ್ಲಿ ಚೇತರಿಕೆಯ ಆಟವಾಡಿ ಭರವಸೆ ಮೂಡಿಸಿದರು. ಆದರೆ ಮಾನಸಿ ಪಟ್ಟು ಬಿಡಲಿಲ್ಲ. 17–20ರ ಹಿನ್ನಡೆಯಲ್ಲಿದ್ದ ಸಂದರ್ಭದಲ್ಲಿ ಸತತ 5 ಪಾಯಿಂಟ್ ಗಳಿಸಿ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನ ಆರಂಭದಲ್ಲಿ ಸಮಬಲದ ಹೋರಾಟ ಕಂಡುಬಂದರೂ ಮಾನಸಿ ನಿಧಾನಕ್ಕೆ ಆಧಿಪತ್ಯ ಸ್ಥಾಪಿಸಿದರು. 11–9ರ ಮುನ್ನಡೆಯೊಂದಿಗೆ ವಿರಾಮಕ್ಕೆ ತೆರಳಿದ ಅವರು ನಂತರ ಪಾಯಿಂಟ್ ಬಿಟ್ಟುಕೊಡದೆಯೇ ಪಂದ್ಯ ಗೆದ್ದುಕೊಂಡರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Flat

Abbigere

2 BHK Flat Semi Furnished Vastu Compliant for Sale at Abbigere 65 Lakhs contact 9591867762

Chandra Layout

PENTHOUSE FLAT for Sale. 3 Bedroom.1600sft Super Built-up. 50Mtr from Attiguppe MetroStation, Chandra layout, Vijaynagar. 1.7Cr Negotiable. 9844060483

Infantry Road

FLAT FOR Sale. 3 BHK Behind Safina Plaza 1784 Carpet Area. Infantry Road Cross. Owner:- 9845010095/ 6360235669.

Kanakapura Road

3BHK APARTMENT for`Sale 40x60, 2400.Sqft. Individual Floor near Vajarahalli and Raghuvanahalli Metro Station 1`KM. Call 9740148870 9341050991.

BRAND NEW 3 BHK FLAT FOR SALE. NEAR METRO STATION, KANAKAPURA ROAD. 1.20 CRORES: 9663676464

Multiple Locations

FLATS FOR Sale Jindal Prestige 4 bedroom 2 Car parking, RR Nagar 2 Bedroom OCCC, Vijayanagar 40*60 flat, Basaveshwara Nagar 8th Main 30*35 flat, Prashanth Nagar 40*60 flat. Contact :- 9845123859

Sites

Electronic City

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

Airport Road

"SALE SITE 40x60 BIAAPA approved before International Airport close to Defence & Aero park Rs.5900/-P.sft. 9845286505"

Banashankari

BANASHANKARI 6TH Stage 10th Block 40x60 West Facing. And 30x40 West Facing. More Details Call: 9148914809, 9993959099.

BDA SITE for Sale. B.S.K. 5th stage 30x40 East face, near N.P.S. School. Contact: 9590366791.

Chamarajpet

30X40 WEST facing Residential Site 20000/= Psft. 110x77.5 Commercial Corner Site 22500/= Psft. Negotiable. 9886044313.

Hebbal

BYRATHI KANAKASHREE Housing Co-Operative Society, BDA Katha 30x40 N/F Site Sale Near Narayan PU College 11,400/- PSft: 9986999802

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

VAYALIKAVAL SOCIETY NAGAVARA 2 Sites Measuring 1980 sft and 2400 sft West-Facing Excellent location Call:7829203369

HSR Layout

"HSR-LAYOUT 20X30 Triplex House on 40`feet Road for sale & 20x30,30x40, 40x60 Sites available. 'Krishna' 9886294610"

Jakkur

JAKKUR MCECHS 40x60 WF close to Double Road, 40x60 Northeast Corner, Arkavati 30x40, 20x30. 9535658860

Kengeri

***30X40 BDA** W/F* SITE SALE, Kengeri Satellite Town, SEMI COMMERCIAL/ RESIDENTIAL, near Surana College. 9886634578

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM HSR. CALL 7760019494

Nagarabhavi

"NAGARABHAVI NEAR Deepa Complex 40x60 East MPM Layout 35 feet Road, Vastu BDA Site. 9448432633/ 7022218837"

"RAILWAY 2ND STAGE 30x40 West facing, builder location, opp.Soda factory, near Ullal RTO, Good Location. 9845408408"

40X60 EAST FACING BDA APPROVED SITE, RHCS LAYOUT 2nd Stage OPPOSITE PARK 13000/- PSFT: 9845488488

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. in Chowdeshwarinagar "A" Khata Call: 9980555558

Rajarajeshwari Nagar

RAJARAJESHWARI NAGAR, Ideal Homes, 40x60, 50x60, 50x80, 73x97 B.E.M.L. 30x45 40x60 50x80 50x90 BSK VI 30X40 40X60 50X80. Karishma Hills. 80x120. 9448483699.

Seshadripuram

SITE SALE, 40'x50' West Facing, Seshadripuram Platform Road, Jawahar Street, Behind Swathi Hotel and Apollo Hospital: 9343368313/ 9844009086

Uttarahalli

UTTARAHALLI PLOT Sale 27.5'x65' BBMP A Khatha. North facing & Lake View. Rs.15,000/sft. Call: 6362348146

Vishweshwariah Layout

***BUYING/SELLING* 20X30** 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

BDA SITE SALE VISHWESHWARAIAH LAYOUT 1ST BLOCK 30X40 WEST 12500 NEGOTIABLE, 40X60 WEST 11500 NEGOTIABLE. CONTACT: 8892901567

"30X40 SOUTH FACING PRIME RESIDENTIAL BDA SITE 1ST BLOCK, 40x60 VISHVESHWARAIAH LAYOUT 5TH BLOCK- 9845143579"

'DIRECT OWNER 'No.1628, 30x40 NF BDA Site Sale, VISHVESWARAIAHLAYOUT BLOCK-4, Contact: 8496030007/ 8310885235

DIRECT OWNER Commercial, Vishweshwaraiah Layout, 30x40, 40x60 Near RTO Office, Very Good Location: 9620696913/ 9880781399

VISHWESHWARAIAH LAYOUT 6th Block, BDA 30x40, WF, Near KLE Law College. Direct Owner Meeting: 9980860138

"AVAILABLE 40X60, 20x30 BDA Sites close to 100 feet Road Vishveshwaraiah Layout, Good Location. 9379776189"

30X40 VISHVESHWARAIAH Layout 5th Block & 30x40 Site Sale 1st Block Allotted Site 12500SQFT: 8310003509

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

Vidyaranyapura

IMMEDIATE REGISTRATION 60'x40' BEL 2 Block, Independent 4 BHK Duplex, Prime Location16000/- S/F: 9844264852

SALE 3400SFT CORNER VILLA SITE DC Converted and 30x40 site GF, FF 2BHK each, 'A' Katha. 9480316933

Yelahanka

SALE JADE garden Yalahanka. 2adjacent sites. 4700Sft each. Available each or both sites. clear titles. Rs.7000 perSft. Cheque payment. Arun 9945699789.

2400 SQFT 50ft Road Width Semi Commercial Corner Site For Sale Yelahanka 11000/- Psqft: 7996166636

Mysore

MYSORE DISTRICT ILAVALA HOBLI 30x40 Site Sale, 18 Lakhs, E-Katha "Sun City Homes" Excellent Property Buyers Contact: 9844603127

SALE 40X60 North Facing DTS RAO Nagar SATAGALLI-MYSORE Clear Titles. Contact Owner: 93416-34793

Anjanapura

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

SITE FOR Sale Anjanapura 10 Block BDA 50X80 - 4000 sqft South Facing Contact 9844274211

J P Nagar

"J.P.NAGAR, SRINIDHI LAYOUT 30x51 Residential Site, East Facing, BBMP A Katha, Full White. Owner: 9845088449/ 9845249799"

Vijayanagar

1.40X60 SITE for sale North with old House BCC Layout, Vijayanagar, 5 Minutes to Metro. 2. 50x80 West, 4th Blk, Viswesraya Layout, Contact: 9449003331.

House

Begur

5-BHK HOUSE, 40x60 Noble Residency, Near Nandi Woods Apartment, Yelanahalli, Begur Hobli, 3.5 Cr, 9845206422

BTM Layout

BTM LAYOUT, Sale North West Corner, 2,500 sft. Site with G + 2 Old House. Price: 35,000/- David 9845855663

Basaveshwaranagar

BANGALORE BASVESHWARNAGAR, Near Navarathna Jewellers 4 Bed, 4 Bath, 2 Hall, Kitchen and car parking duplex house for immediate sale. Rs. 3.60 Crores. Negotiable. Contact:- Suresh Owner:- 9448130702, 9148821881.

Nagarabhavi

20X40 3BHK Duplex House Annapoorneshwari Nagar NF Nagarbhavi Near BDA Complex @1.75Cr: 9980409820

Jayanagar

JAYANAGAR T Block, 2080Sft. Duplex House, South, 40feet Road, 9cr. Excellent Residential, Mahalaxmi Enterprise 9845144365

Mysore

GERMAN DESIGN Studio Apartments to be developed on Mysore Express Highway near Mysore requires Builders for JV Contact Land Owner. 9741019028

Tumkur

30X40 NEW Building TUDA Near Sheshadripuram College, 2 BHK, 1 BHK 1st Floor, and 2 Shops for SALE, 1.30 Cr. 9448367859

Yelahanka

HOUSE FOR Sale. Triplex 36x60 N/F. Judicial Layout, near GKVK, Bangalore-65. Contact:- 9845042454.

Farm House/ Land/ Resorts

South

AGRICULTURE FARM VILLA PLOTS 6 GUNTAS IN GREATER BANGALORE AUTHORITY LIMITS, BANGALORE SOUTH TALUK, NELAGULI VILLAGE, UTTARAHALLI HOBLI, 32 KMS FROM VIDHANA SOUDHA, ATTACHED TO ACTOR DHRUVA SARJA FARM HOUSE, 1.5 KMS FROM BANGALORE- KANAKAPURA-DINDIGUL NATIONAL HIGHWAY, 3 KMS FROM SOMNHALLI TOLL, CONTACT VICTORY PROPERTIES CONTACT: 7411692219/ 8618576685/ 9482303339/ 9686894972. www.victoryproperties.in, info@victoryproperties.in

Commerical

Hebbal

ON BELLARY Main Road Commercial Property East 25,000Sft Converted Near Nandi Upchar Hotel Clear-Titles Call:9341260828

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Commercial Building

J C Road

2000 SQFT, Commercial property for Sale. Near Mantri Appartment, Lalbagh.Contact : 9741591591

Agricultural Land

General

FOR SALE HAROHALLI TOWN 18 GUNTAS AGRICULTURE STATUS, YELLOW ZONE, WITH 30 COCONUT TREES, BOREWELL WITH GOOD WATER, 150 METERS FROM HAROHALLI- KANAKAPURA BYPASS AND WITHIN TOWN, EXCELLENT PROPERTY, VICTORY PROPERTIES, CONTACT: 7411692219/ 8618576685/ 9482303339/ 9686894972, www.victoryproperties.in, info@victoryproperties.in

South

FOR SALE, AGRICULTURE FARM PLOTS OF 5.5 GUNTAS, AT PRIME LOCATION NELGULLI/ SOMANAHALLI, BANGALORE SOUTH, 2.5 KMS FROM BANGALORE- KANAKAPURA NATIONAL HIGHWAY, WITHIN GREATER BANGALORE AUTHORITY, 28 KMS FROM BANGALORE- 560082 PIN CODE, CONTACT VICTORY PROPERTIES. 7411692219/ 8618576685/ 9482303339/ 9686894972. www.victoryproperties.in, info@victoryproperties.in

Industrial & Factory

Intl Airport Road

SALE MULTIPLE Industrial properties from Rs.299 to 359/- sft in Hindupur APIIC, Red Zone, Clear Titles with multiple roads, measuring from half acre to 10 acres. Call Verna Developers, Barton Centre, MG Road. 9916310226.

REAL ESTATE BUYING

House

Banashankari

BANASHANKARI 6TH Stage 1st Block Brand New Duplex House For Sale 20x30 N/E Corner Fully furnished. Rs.2cr Nego SHIVU: 98800-04149

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

RV UNIVERSITY Go, change the world — an initiative of RV EDUCATIONAL INSTITUTIONS

WALK-IN INTERVIEW
At RV University, Bengaluru

Join RV University - Shape Tomorrow's Leaders!
RV University, a premier private institution offering UG/PG in Commerce, Computer Sciences Engineering, Design, Management, Liberal Arts, Economics, Law, Film & Allied Healthcare Professions, invites applications for

ADMISSION COUNSELLORS (5 Posts)
Eligibility: Graduate / Postgraduate, 1-5 yrs of experience with an Educational Institute / University in Admissions preferred. Excellent written and verbal communication skills in English. Knowledge of Kannada & Hindi would be an advantage. Proficient in use of MS Office, CRM Software. Attractive compensation of Rs. 40,000-45000 PM + incentives

TELECALLERS (45 Posts)
Eligibility: 12th Pass / Graduate, 0-5 yrs exp, Excellent written and verbal communication skills in English. Knowledge of Kannada & Hindi would be an advantage. Attractive compensation of Rs. 22,000-25000 PM + incentives

Bring: Updated Resume, Photo ID (Aadhaar / PAN), Educational Certificates, Experience Letters (if any), 2 Passport size Photos to receive OFFER ON THE SPOT

Date: Tuesday, 4 November 2025
Time: 9:00 AM - 2:00 PM

Venue: RV University Campus, RV Vidyaniketan Post, Mysore Road, Bengaluru - 560059. Adjacent to Pattangere Metro Station.

Walk-In & Secure Your Future!

Kanakapura Road

WANTED SITE 30X40 Any Facing Anjanapura, BCMC, Narayan Nagar, BCCHS, Direct Registration, Agents Excuse, Call 9663454878

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

Bareshell 5000 Sqft Office Space For Rent available in 2nd Floor, in Majestic Terraces Building in Electronic city Phase-1. Contact : 9844023523

RENT PREMIUM 3600sqft furnished office at 4th Flr Vishnupriya Towers Beside Srirampura Metro Station. 6 Cabins, 45 Workstations,Lift, Pantry, Parking. Contact: 9900029200

560 SQFT East facing Shop for Rent, BSK 3rd stage near Ring Road, prime location. 9686722226.

BTM- SILK Board (Near Metro Station) OFFICE SPACE, SHOWROOM, GYM 5400 sft 1st Floor Rent: 100/ sft. 9945689847.

COMMERCIAL PROPERTY RENT Grnd flr, 2750 sqft Beml layout 3rd stage Rajarajeshwari nagar Bangalore 9945479966

JP NAGAR 2nd phase 1st floor 3 bhk house for rent 50k commercial 9886425997

Flats

FOR RENT 3 Bedroom Apartment JP Nagar 7th Phase
1750 Sqft Flat Newly Furnished in Majestic Fortune Apartment in JP Nagar, 7th Phase Call : 9341228681

BOUTIQUE FULLY furnished 2 Bhk Flat (1.10L) Studio (50k) in upmarket area, immediate occupancy for bachelor/s. Placify Ph: 9844051181.

VIJAYA BANK layout 3 bhk flat for rent 40k Bannerghatta road. 9886425997

JOB OPPORTUNITIES

General

REQUIRED HOME TUTOR FOR 7th and 8th CBSE (MATHS AND SCIENCE) AT SANKALP SQUARE APARTMENT, RMV 2nd STAGE, BANGALORE Ph: 9945107779

WANTED PHOTOGRAPHER, Graphic Designer, Signage Maker, Helper @ Printz Zone BSK 2nd Stage Call: 6366363929

WANTED OFFICE ASSISTANT (Male), Bommanahalli, Bangalore. Mail your resume to: starsilks@gmail.com

Marketing & Sales

TELECALLERS (FEMALE) BUSINESS EXECUTIVES (MALE) Graduates with English Communication, Computer Knowledge, Basaveswarnagar Media Office: 9845411113

Receptionist/ Secretary

ಬೇಕಾಗಿದ್ದಾರೆ
ಸ್ವಾಗತಕಾರಿಣಿ -(Receptionist) 25 ರಿಂದ 30 ವರ್ಷದೊಳಗಿನ ಮಹಿಳಾ ಅಭ್ಯರ್ಥಿಯಾಗಿರಬೇಕು. ಪದವೀಧರೆಯಾಗಿದ್ದು, ಕನ್ನಡ, ಇಂಗ್ಲೀಷ್ ಇತರೆ ಭಾಷೆ ಬಲ್ಲವರಾಗಿದ್ದು, ಇಂಗ್ಲೀಷ್- ಕನ್ನಡ ಪತ್ರ ವ್ಯವಹಾರ ನಡೆಸುವಂತಿರಬೇಕು. ಕಂಪ್ಯೂಟರ್ ಜ್ಞಾನ & ಇತರೆಡೆ ಕನಿಷ್ಠ 2 ವರ್ಷಗಳು ಸೇವೆ ಸಲ್ಲಿಸಿರುವ ಅನುಭವ ಹೊಂದಿರಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **17-11-2025.** ಅರ್ಹ ಅಭ್ಯರ್ಥಿಗಳು ಇತ್ತೀಚಿನ ಭಾವಚಿತ್ರ, ಬಯೋಡೇಟಾ ಒಳಗೊಂಡಂತೆ ತಮ್ಮ ಸಂಪೂರ್ಣ ಮಾಹಿತಿಯುಳ್ಳ ವಿವರವನ್ನು ಈಮೇಲ್ ಮೂಲಕ karnatakafilmhouse@yahoo.com ಗೆ ಕಳುಹಿಸುವುದು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ರಿ)
ನಂ.28, ಕ್ರಸೆಂಟ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು-560001

Teachers/ Professors

SREE VENKATESHWARA ENGLISH SCHOOL #1, V.S Layout Krishnarajapura Bangalore-560036. WANTED TEACHERS: B.A, B.Ed (English & Social Science) Clerks (Graduates with Computer Knowledge) Attractive Salary Contact: 080-25611873 7411135627 Email: svs.krp.bangalore@gmail.com

WANTED TRAINED lady teachers for English science for Primary Highschool Maitri English school Udayanagar Bengaluru16 8892949404

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

INVEST SMALL sum in real estate and gold. Get monthly, weekly returns in big. Contt. 9019388175

Finance

ALL TYPE of funds (Direct) Mortgage (any prop, with/ without income) projects. Low int. Dsa, Media also welcome. Cont:. 9019388175

MATRIMONIAL

Brides Wanted

Telugu

TELUGU.DEVANGA, A.P- Boy(Caste no bar). 41Y, 5'5' fair. M.Tech, MCA, IRPM, Gov.Job, 4cr (seeks good girl & family (Direct). 7036361292.

PERSONAL

Change of Name

I,MALUCHA MARY GALSTAUN Residing at Sarala Birla Academy BH-3, Jigani Road, Anekal, Bannerghatta, Bangaluru-560083 have`changed my`name`to MALUCHA_GALSTAUN vide`Affidavit Dtd:24.10.2025 Sworn`Before Notary A.S.Narayana Reddy, Bangalore

I BINA S Nair 67 residing at 007 Poorvi Airavatha Judicial Layout Thalaghattapura Bangalore confirm that Bina S Nair (Aadhaar) and Bina Sasidharan Nair (PAN) are the same person myself An Affidavit on 29-10-25 before Notary D S Chandrakanth City Civil Court Bangalore From now on my name will be Bina Sasidharan Nair

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



